ಕರ್ನಾಟಕ ಸರ್ಕಾರ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸಿದ ಅರಿವು ಶೈಕ್ಷಣಿಕ ಸಾಲ ಯೋಜನೆಯ ಮೌಲ್ಯಮಾಪನ (೨೦೧೧–೧೨ ರಿಂದ ೨೦೧೭–೧೮)

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evalution Authority

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
ಕರ್ನಾಟಕ ಸರ್ಕಾರ
ಜೂನ್ ೨೦೨೧

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸಿದ ಅರಿವು ಶೈಕ್ಷಣಿಕ ಸಾಲ ಯೋಜನೆಯ ಮೌಲ್ಯಮಾಪನ (೨೦೧೧–೧೨ ರಿಂದ ೨೦೧೭–೧೮)

ಪ್ರಧಾನ ಶೋಧಕರು – ಡಾ. ಎಂ ಡಿ ಉಷಾದೇವಿ

ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

ಜೂನ್ ೨೦೨೧

© ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ೨೦೨೧

ಪ್ರಕಾಶಕರು

ಪರವಾಗಿ:

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
#೫೪೨, ೫ನೇ ಮಹಡಿ, ೨ನೇ ಹಂತ,
ಎಂ.ಎಸ್ ಬಿಲ್ಡಿಂಗ್, ಡಾ.ಅಂಬೇಡ್ಕರ್ ರಸ್ತೆ,
ಬೆಂಗಳೂರು – ೫೬೦ ೦೦೧.

ಇಂದ:

ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್
ಸಿಎ–II, ಕೆಐಎಡಿಬಿ ಇಂಡಸ್ಟ್ರೀಯಲ್ ಹೌಸಿಂಗ್ ಏರಿಯಾ
ಹೆಬ್ಬಾಳ ವರ್ತುಲ ರಸ್ತೆ.
ಮೈಸೂರು–570 016, ಕರ್ನಾಟಕ, ಭಾರತ.
ಸ್ಥಿರ ದೂರವಾಣಿ: 0821 – 2415412
ಮೇಲ್ ಐಡಿ: graam@graam.org.in

ಮುದ್ರಕರು ಹಾಗು ಅಕ್ಷರ ವಿನ್ಯಾಸ :

ಎಸ್‌ಪಿಸಿ ಎಂಟರ್ ಪ್ರೈಸಸ್,
೩೬, ಎನ್ ಎಸ್ ಐಯ್ಯಂಗಾರ್ ರಸ್ತೆ,
ಶೇಷಾದ್ರಿಪುರಂ, ಬೆಂಗಳೂರು ೨೦

ಮುನ್ನುಡಿ

ಸಂಶೋಧನಾ ಮತ್ತು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅದ್ಭುತ ಬೆಳವಣಿಗೆಯೊಂದಿಗೆ ಕಾರ್ಯಸಾಧ್ಯ ಜ್ಞಾನ ಆರ್ಥಿಕತೆಯಾಗಿ ಕರ್ನಾಟಕ ರಾಜ್ಯವು ಹೊರಹೊಮ್ಮಿರುತ್ತದೆ. ಜ್ಞಾನ ಉತ್ಪಾದನೆ ಮತ್ತು ಪ್ರಸಾರಕ್ಕೆ ಹೆಚ್ಚಿನ ಸಾಮರ್ಥ್ಯವನ್ನು ಪ್ರದರ್ಶಿಸುವ ಭಾರತದ ನಾವಿನ್ಯತೆಯ ಸೂಚ್ಯಂಕ (ಇಂಡಿಯಾ ಇನ್ನೊವೇಶನ್ ಇಂಡೆಕ್ಸ್) ೨೦೧೯ರಲ್ಲಿ ಈ ರಾಜ್ಯವು ಅಗ್ರಸ್ಥಾನದಲ್ಲಿರುತ್ತದೆ. ಆದಾಗ್ಯೂ, ಅಸಮಾನವಾದ ಲಭ್ಯತೆ, ಪ್ರಾದೇಶಿಕ ಅಸಮಾನತೆಗಳು, ಸಾಮಾಜಿಕ ಅಸಮಾನತೆಗಳು, ಕಳಪೆ ಗುಣಮಟ್ಟ ಮತ್ತು ಶೋಚನೀಯ ಶೈಕ್ಷಣಿಕ ಮಾನದಂಡಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಈ ರಾಜ್ಯವು ಪರಿಹರಿಸಬೇಕಾಗಿರುತ್ತದೆ, ಇವುಗಳು ಸುಸ್ಥಿರ ಅಭಿವೃದ್ಧಿ ಗುರಿ –೪ ಗುಣಮಟ್ಟದ ಶಿಕ್ಷಣದಲ್ಲಿ ಗುರಿಗಳನ್ನು ಸಾಧಿಸುವಲ್ಲಿ ಪ್ರಮುಖ ಸವಾಲುಗಳಾಗಿರುತ್ತವೆ. ಈ ಸನ್ನಿವೇಶದಲ್ಲಿ, ಉನ್ನತ ಶಿಕ್ಷಣದ ಲಭ್ಯತೆಯನ್ನು ಹೆಚ್ಚಿಸಲು ಶೈಕ್ಷಣಿಕ ಸಾಲ ಯೋಜನೆಗಳನ್ನು ಪ್ರಾರಂಭಿಸಲಾಗಿದ್ದು, ಯಾವುದೇ ವಿದ್ಯಾರ್ಥಿಗೆ ಹಣಕಾಸಿನ ನೆರವು ಸಿಗದ ಕಾರಣ ಉನ್ನತ ಶಿಕ್ಷಣ ಪಡೆಯುವುದರಿಂದ ವಂಚಿತರಾಗುವುದನ್ನು ಈ ಯೋಜನೆಯಿಂದಾಗಿ ತಪ್ಪಿಸಬಹುದಾಗಿರುತ್ತದೆ. ಅರಿವು ಶಿಕ್ಷಣ ಸಾಲ ಯೋಜನೆಯಡಿ, ಡಿ ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಆರ್ಥಿಕ ನೆರವು ನೀಡುವ ಮೂಲಕ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಲಭ್ಯತೆಯೊಂದಿಗೆ ಬಡ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗಿರುತ್ತದೆ. ಈ ಯೋಜನೆಯ ಪರಿಣಾಮವನ್ನು ಪರಿಶೀಲಿಸಲು ಈ ನಿಗಮವು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಮೌಲ್ಯಮಾಪನ ಅಧ್ಯಯನವನ್ನು ಪ್ರಾರಂಭಿಸಿರುತ್ತದೆ. ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್ ಸಂಸ್ಥೆಯು ಈ ಅಧ್ಯಯನವನ್ನು ಕೈಗೊಂಡಿರುತ್ತದೆ.

ಈ ರಾಜ್ಯದ ೪ ಕಂದಾಯ ವಿಭಾಗಗಳಲ್ಲಿನ ೧೨ ಜಿಲ್ಲೆಗಳಿಂದ ಆಯ್ಕೆಯಾದ ೧೧೩೦ ಫಲಾನುಭವಿಗಳನ್ನು ಒಳಗೊಂಡ ಬಹುಹಂತದ, ಶ್ರೇಣೀಕೃತ ಯಾದೃಚ್ಛಿಕ ಮಾದರಿಯಿಂದ ಸಂಗ್ರಹಿಸಲಾದ ದ್ವಿತೀಯ ಮತ್ತು ಪ್ರಾಥಮಿಕ ದತ್ತಾಂಶಗಳ ವಿಶ್ಲೇಷಿಸಿ, ಈ ಅಧ್ಯಯನವು ಆವಿಷ್ಕಾರಗಳನ್ನು ಪಡೆದುಕೊಂಡಿರುತ್ತದೆ. ಅರಿವು ಸಾಲ ಯೋಜನೆಯು ಉನ್ನತ ಶಿಕ್ಷಣದಲ್ಲಿ ಹಿಂದುಳಿದ ವರ್ಗದ ಬಡ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಸುಧಾರಿಸುವ ಭರವಸೆಯನ್ನು ಮೂಡಿಸುತ್ತಿರುವ ಅಂಶವನ್ನು ಅಧ್ಯಯನವು ಹೊರತಂದಿರುತ್ತದೆ ಏಕೆಂದರೆ ೮೧.೭% ವಿದ್ಯಾರ್ಥಿ ಫಲಾನುಭವಿಗಳು ಬಿಇ ಕೋರ್ಸ್‌ನಲ್ಲಿ ಕಂಡುಬಂದಿರುತ್ತಾರೆ ಮತ್ತು ಅವರಿಗೆ ಲಾಭದಾಯಕ ಉದ್ಯೋಗಾವಕಾಶಗಳ ಲಭ್ಯತೆಯೂ ಹೆಚ್ಚಾಗಿರುತ್ತದೆ. ಫಲಾನುಭವಿಗಳಲ್ಲಿ ಕೋರ್ಸ್ ಪೂರ್ಣಗೊಳಿಸುವಿಕೆಯ ಅನುಪಾತವು ಶೇಕಡಾ ೪೬.೫ ರಷ್ಟಿದೆ, ಅದರಲ್ಲಿ ಹೆಚ್ಚಿನ ಪ್ರಮಾಣವು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿದೆ (೮೨.೮%. ಈ ಯೋಜನೆಯನ್ನು ಮತ್ತಷ್ಟು ಮುಂದುವರಿಸಬೇಕಾಗಿರುತ್ತದೆ, ಮುಂದುವರಿದು ಸಾಮಾಜಿಕ ಸಮಾನತೆಯನ್ನು ಉತ್ತೇಜಿಸಲು ಅತ್ಯಂತ ದುರ್ಬಲ ಕುಟುಂಬಗಳನ್ನು, ವಿಶೇಷವಾಗಿ ಮೊದಲ ತಲೆಮಾರಿನವರನ್ನು ಗುರುತಿಸಲು ಮತ್ತು ಗುರಿಯಾಗಿಸಲು ಗಂಭೀರ ಪ್ರಯತ್ನದ ಅಗತ್ಯವಿರುತ್ತದೆ. ಕಲಬುರ್ಗಿ, ಬೀದರ್ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿನ ವ್ಯಾಪಕವಾದ ಲಿಂಗ ಅಂತರವು ಈ ಕಾರ್ಯಕ್ರಮದಲ್ಲಿ ಪ್ರಾದೇಶಿಕ ಕೇಂದ್ರೀಕೃತ ಲಿಂಗ ಗಮನವನ್ನು ಹೆಚ್ಚಿಸುವ ಅಗತ್ಯವನ್ನು ಸೂಚಿಸಿರುತ್ತದೆ.

ತಾಂತ್ರಿಕ ಮತ್ತು ವೃತ್ತಿಪರ ಕೋರ್ಸ್‌ಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಸಾಲದ ಮೊತ್ತವನ್ನು ಹೆಚ್ಚಿಸುವುದು, ಹೆಣ್ಣು ವಿದ್ಯಾರ್ಥಿಗಳಿಗೆ ಆದ್ಯತೆಯನ್ನು ನೀಡುವುದು, ದಸ್ತಾವೇಜುಗಳ ಅವಶ್ಯಕತೆಗಳನ್ನು ಸಡಿಲಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪ್ತಿಯನ್ನು ಹೆಚ್ಚಿಸುವುದು ಮತ್ತು ಪರಿಣಾಮಕಾರಿ ಮೇಲ್ವಿಚಾರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ಪ್ರಮುಖ

ಶಿಫಾರಸ್ಸುಗಳು ಆಗಿರುತ್ತದೆ. ಸಿಇಟಿಯೇತರ ವಿದ್ಯಾರ್ಥಿಗಳನ್ನು ಸಿಇಟಿ ವರ್ಗಕ್ಕೆ ಸಮನಾಗಿ ತರುವ ಸಾಧ್ಯತೆಯನ್ನು ಕಾರ್ಯಕ್ರಮದ ವಿನ್ಯಾಸದಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ಈ ಯೋಜನೆಯ ವಿನ್ಯಾಸ ಮತ್ತು ಅನುಷ್ಠಾನದಲ್ಲಿ ಅಗತ್ಯ ಮಾರ್ಪಾಡುಗಳನ್ನು ಕೈಗೊಳ್ಳಲು ಅಧ್ಯಯನದ ಆವಿಷ್ಕಾರಗಳು ಮತ್ತು ಶಿಫಾರಸ್ಸುಗಳು ಸರ್ಕಾರ ಮತ್ತು ಡಿ ದೇವರಾಜ್ ಅರಸ್ ಹಿಂದುಳಿದ ವರ್ಗ ಅಭಿವೃದ್ಧಿ ನಿಗಮಕ್ಕೆ ಉಪಯುಕ್ತವಾಗುತ್ತವೆ ಎಂದು ನಾನು ನಿರೀಕ್ಷಿಸುತ್ತೇನೆ.

ಈ ಅಧ್ಯಯನವು ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಬೆಂಬಲ ಮತ್ತು ಮಾರ್ಗದರ್ಶನವನ್ನು ಪಡೆದಿರುತ್ತದೆ. ೪೭ನೇ ತಾಂತ್ರಿಕ ಸಮಿತಿ ಸಭೆಯಲ್ಲಿ ಈ ವರದಿಯನ್ನು ಅನುಮೋದಿಸಲಾಗಿರುತ್ತದೆ. ಕರಡು ವರದಿಯ ಪರಿಶೀಲನೆಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ, ತಾಂತ್ರಿಕ ಸಮಿತಿಯ ಸದಸ್ಯರುಗಳಿಂದ ನಡೆಸಲಾಗಿರುತ್ತದೆ ಮತ್ತು ಓರ್ವ ಸ್ವತಂತ್ರ ಮೌಲ್ಯಮಾಪಕರು ಈ ವರದಿಯ ಗುಣಮಟ್ಟವನ್ನು ಹೆಚ್ಚಿಸಲು ಉಪಯುಕ್ತ ಒಳನೋಟಗಳು ಮತ್ತು ಸಲಹೆಗಳನ್ನು ನೀಡಿರುತ್ತಾರೆ. ಈ ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಎಲ್ಲರೂ ನೀಡಿದ ಸಹಾಯಕ್ಕಾಗಿ ನನ್ನ ಕೃತಜ್ಞತೆಗಳು.

ಮುಖ್ಯ ಮೌಲ್ಯಮಾಪನ ಅಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

ಕೃತಜ್ಞತೆಗಳು

ಗ್ರಾಮ್ ಸಂಸ್ಥೆಗೆ ಈ ಅಧ್ಯಯನವನ್ನು ಕೈಗೊಳ್ಳಲು ಅವಕಾಶವನ್ನು ಒದಗಿಸಿದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಹಾಗು ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಭಾಆಸೇ, ಇವರಿಗೆ ನಮ್ಮ ಮೊದಲ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಅಧ್ಯಯನದ ನೇತೃತ್ವವನ್ನು ವಹಿಸಿ, ಅಗತ್ಯವಿರುವ ಮಾರ್ಗದರ್ಶನವನ್ನು ನೀಡುವ ಮೂಲಕ ಈ ಅಧ್ಯಯನವನ್ನು ಪೂರ್ಣಗೊಳಿಸಲು ಸಹಕರಿಸಿದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಮೌಲ್ಯಮಾಪನ ಅಧಿಕಾರಿಗಳಾದ ಶ್ರೀ ಹರಿ ಕುಮರ್ ರಘು ರವರು ಹಾಗು ಹಿಂದಿನ ಮುಖ್ಯ ಮೌಲ್ಯಮಾಪನ ಅಧಿಕಾರಿಗಳಾಗಿದ್ದ ಶ್ರೀ ಸುದರ್ಶನ್ ಜಿ.ಎ. ರವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಅಧ್ಯಯನದುದ್ದಕ್ಕೂ ಅಗತ್ಯವಿರುವ ತಾಂತ್ರಿಕ ಸಹಕಾರ ಮತ್ತು ಮಾರ್ಗದರ್ಶನ ನೀಡಿದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಪರ ಮುಖ್ಯ ಮೌಲ್ಯಮಾಪನಾಧಿಕಾರಿ ಡಾ. ಛಾಯಾ ಕೆ ದೆಗಾಂವ್ಕರ್‌ರವರ ಸಹಾಯವನ್ನು ನಾವು ಸ್ಮರಿಸುತ್ತೇವೆ. ಇದರೊಂದಿಗೆ ಆಡಳಿತಾತ್ಮಕ ಸಹಾಯವನ್ನು ನೀಡಿದ ಸಹ ನಿರ್ದೇಶಕಿ ಶ್ರೀಮತಿ ಜ್ಯೋತಿ ಎಸ್ ಜೆನ್ನಿರವರಿಗೆ ನಾವು ಆಭಾರಿಯಾಗಿದ್ದೇವೆ.

ಈ ಅಧ್ಯಯನಕ್ಕೆ ಅತ್ಯಮೂಲ್ಯವಾದ ದ್ವಿತೀಯ ದತ್ತಾಂಶ ಮತ್ತು ಇತರ ಮಾಹಿತಿಗಳನ್ನು ಒದಗಿಸುವಲ್ಲಿ ಡಿ ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ನೀಡಿದ ಸಹಕಾರಕ್ಕಾಗಿ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಈ ಅಧ್ಯಯನದ ನೇತೃತ್ವ ವಹಿಸಿದ್ದಲ್ಲದೆ, ವರದಿಯ ಕರಡು ರಚನೆಯಲ್ಲಿ ಮತ್ತು ಮುಖ್ಯವಾಗಿ ವರದಿಯನ್ನು ವಿವಿಧ ಆಯಾಮಗಳಲ್ಲಿ ಪುನರ್ವಿಮರ್ಶಿಸಿ ಪ್ರಸ್ತುತಪಡಿಸುವಲ್ಲಿ ತನ್ನನ್ನು ತೊಡಗಿಸಿಕೊಂಡ ಡಾ.ಎಂ.ಡಿ.ಉಷಾದೇವಿ ಅವರ ಕೊಡುಗೆಯನ್ನು ಪ್ರಶಂಸಿಸಲು ನಮ್ಮಲ್ಲಿ ಪದಗಳಿಲ್ಲ.

ಮಾಹಿತಿ ಸಂಗ್ರಹಣಾ ಮಾರ್ಗದರ್ಶಿಗಳು ಹಾಗೂ ನಮೂನೆಗಳ ಕರಡು ಮತ್ತು ದತ್ತಾಂಶ ವಿಶ್ಲೇಷಣೆ ಸೇರಿದಂತೆ ಅಧ್ಯಯನದ ಎಲ್ಲಾ ಹಂತಗಳಲ್ಲಿಯೂ ನಿರ್ಣಾಯಕ ಪಾತ್ರ ವಹಿಸಿರುವ ಮತ್ತು ವರದಿಯ ಬರವಣಿಗೆಗೆ ಸಹಕರಿಸಿದ ಗ್ರಾಮ್‌ನ ಮಾಜಿ ಹಿರಿಯ ಸಂಶೋಧನಾ ಫೆಲೋ ಡಾ. ಸೈಯದ್ ಅಜ್ಮಲ್ ಪಾಷಾ ಅವರಿಗೆ ನಮ್ಮ ಪ್ರಾಮಾಣಿಕ ಧನ್ಯವಾದಗಳು.

ದತ್ತಾಂಶ ಸಂಗ್ರಹಣೆಯ ಪರಿಣಾಮಕಾರಿ ನಿರ್ವಹಣೆ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಜೊತೆ ನಿರಂತರ ಸಂವಹನಕ್ಕಾಗಿ ಸಮುದಾಯ ಸಮಾಲೋಚನಾ ತಂಡ ಮತ್ತು ಗ್ರಾಮ್‌ನಲ್ಲಿನ ಯೋಜನಾ ನಿರ್ವಹಣಾ ತಂಡಕ್ಕೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ. ಪ್ರವಾಹ ಮತ್ತು ಕ್ಷೇತ್ರ ಕಡ್ಡಾಯಗಳಿಂದಾಗಿ ತೊಂದರೆಗಳ ನಡುವೆಯೂ ದತ್ತಾಂಶ ಸಂಗ್ರಹಣೆಯನ್ನು ಪೂರ್ಣಗೊಳಿಸಲು ನಮಗೆ ಸಹಾಯ ಮಾಡಿದ ದತ್ತಾಂಶ ಸಂಗ್ರಹದಾರರು ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ನಮ್ಮ ವಿಶೇಷ ಧನ್ಯವಾದಗಳು.

ಈ ಅಧ್ಯಯನದಲ್ಲಿ ಭಾಗವಹಿಸಿ ವಿದ್ಯಾರ್ಥಿವೇತನದ ಅನುಭವದ ಬಗ್ಗೆ ಬೆಳಕು ಚೆಲ್ಲಿದ ವಿದ್ಯಾರ್ಥಿವೇತನದ ಫಲಾನುಭವಿಗಳು, ಫಲಾನುಭವಿಗಳಲ್ಲದವರು ಮತ್ತು ಈ ಅಧ್ಯಯನಕ್ಕೆ ಒಳನೋಟಗಳನ್ನು ನೀಡಿದ ಅಧಿಕಾರಿಗಳು ಎಲ್ಲರಿಗೂ ನಾವು ಕೃತಜ್ಞರಾಗಿರುತ್ತೇವೆ. ಅವರ ಸಹಕಾರ ದೊರೆಯದಿದ್ದರೆ ಈ ಅಧ್ಯಯನ ಪೂರ್ಣಗೊಳ್ಳುತ್ತಿರಲಿಲ್ಲ.

ಸಹಿ/–

(ಡಾ. ಬಸವರಾಜು.ಆರ್)

ಕಾರ್ಯನಿರ್ವಾಹಕ ನಿರ್ದೇಶಕರು – ಗ್ರಾಮ್

ಪರಿವಿಡಿ

ಕಾರ್ಯಕಾರಿ ಸಾರಂಶ **1**

ಅಧ್ಯಾಯ 1 – ಪರಿಚಯ **8**

1.1 ಅರಿವು ಶೈಕ್ಷಣಿಕ ಸಾಲ ಯೋಜನೆಯ ಹಿನ್ನೆಲೆ 9

1.2 ಸಮಸ್ಯೆಯ ಹೇಳಿಕೆ 10

1.3 ಮೌಲ್ಯಮಾಪನದ ಉದ್ದೇಶ 11

1.4 ಅಧ್ಯಯನದ ಉದ್ದೇಶಗಳು 11

ಅಧ್ಯಾಯ 2 – ವೈಧಾನಿಕತೆ. 13

2.1 ಬದಲಾವಣೆಯ ಸಿದ್ಧಾಂತ 13

2.2 ದತ್ತಾಂಶ ಸಂಗ್ರಹ ವಿಧಾನಗಳು ಮತ್ತು ವಿಶ್ಲೇಷಣೆ 16

2.3 ಮಾದರಿ ವಿನ್ಯಾಸ ಮತ್ತು ಸಂಶೋಧನಾ ಪರಿಕರಗಳು 21

2.3.1 ಅರಿವು ಯೋಜನೆಯ ಮಾದರಿ ವಿದ್ಯಾರ್ಥಿ ಫಲಾನುಭವಿಗಳ ಆಯ್ಕೆ. 22

2.3.2 ಸಂಶೋಧನಾ ಪರಿಕರಗಳು: ವಿವರಣೆ 23

2.3.3 ದತ್ತಾಂಶಗಳ ವಿಶ್ಲೇಷಣೆ. 23

ಅಧ್ಯಾಯ 3 – ಸಾಹಿತ್ಯದ ವಿಮರ್ಶೆ **25**

3.1 ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಗೆ ಸಾಲ: ಭಾರತದಲ್ಲಿ ನಡೆದ ಅಧ್ಯಯನಗಳು 25

3.2 ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿ ಸಾಲ: ಅಂತರರಾಷ್ಟ್ರೀಯ ಸಂದರ್ಭಗಳು 29

ಅಧ್ಯಾಯ 4 – ಪ್ರಾಯೋಗಿಕ ವಿಶ್ಲೇಷಣೆ **35**

4.1 ರಾಜ್ಯ ಮಟ್ಟದಲ್ಲಿ ಪ್ರಗತಿ, ವಿಸ್ತರಣೆ ಮತ್ತು ವ್ಯಾಪ್ತಿ 35

4.1.1 ಗುಂಪುಗಳ ಜಾತಿವಾರು ವ್ಯಾಪ್ತಿ 37

4.1.2 ಸಾಮಾನ್ಯ ಪ್ರವೇಶ ಪರೀಕ್ಷೆ ವರ್ಗದ ಅಡಿಯಲ್ಲಿ ಅರಿವು ಫಲಾನುಭವಿಗಳು 40

4.1.3 ಉನ್ನತ ಶಿಕ್ಷಣ ಕೋರ್ಸ್‌ಗಳಾದ್ಯಂತ ಫಲಾನುಭವಿಗಳ ವ್ಯಾಪ್ತಿ: ಸಮಯ ಸರಣಿ ವಿಶ್ಲೇಷಣೆ 40

4.1.4 ವರ್ಗಗಳಾದ್ಯಂತ ಫಲಾನುಭವಿ ವ್ಯಾಪ್ತಿ: ಸಮಯ ಸರಣಿಯ ವಿಶ್ಲೇಷಣೆ 42

4.1.5 ಫಲಾನುಭವಿ ವ್ಯಾಪ್ತಿ: ಲಿಂಗವಾರು ಮತ್ತು ಪ್ರಾದೇಶಿಕ ವಿಶ್ಲೇಷಣೆ 46

4.1.6 ಫಲಾನುಭವಿ ವ್ಯಾಪ್ತಿ: ವರ್ಗ ಮತ್ತು ಪ್ರಾದೇಶಿಕ ವಿಶ್ಲೇಷಣೆ 48

4.1.7 ಫಲಾನುಭವಿ ವ್ಯಾಪ್ತಿ: ಉನ್ನತ ಶಿಕ್ಷಣ ಕೋರ್ಸ್‌ಗಳು ಮತ್ತು ಪ್ರಾದೇಶಿಕ ವಿಶ್ಲೇಷಣೆ 50

4.2 ಅರಿವು ಶಿಕ್ಷಣ ಸಾಲ ಪಡೆದ ಫಲಾನುಭವಿಗಳ ಹಿನ್ನೆಲೆ 52

4.2.1 ಭೂ ಒಡೆತನ ವಸ್ತುಸ್ಥಿತಿ 52

4.2.2 ಜಿಲ್ಲೆಗಳಾದ್ಯಂತ ಫಲಾನುಭವಿಗಳ ಒಡೆತನದಲ್ಲಿ ಮನೆಯ ಸ್ವತ್ತುಗಳು 55

4.2.3 ವಿದ್ಯಾರ್ಥಿ ಫಲಾನುಭವಿಗಳ ಕಾಲೇಜಿನ ಪ್ರಕಾರ, ಪೋಷಕರ ಉದ್ಯೋಗ ಮತ್ತು ಆದಾಯ 57
4.3 ಅರಿವು ಸಾಲ ಯೋಜನೆಯ ಬಗ್ಗೆ ಫಲಾನುಭವಿ ಮತ್ತು ಮಧ್ಯಸ್ಥಗಾರರ/ಭಾಗೀದಾರರ ಗ್ರಹಿಕೆಗಳು 60
4.3.1 ಅರಿವು ಸಾಲ ಯೋಜನೆಯ ಮುಂದುವರಿಕೆ ಮತ್ತು ಸಾಲದ ಮೊತ್ತದ ಕುರಿತ ಅಭಿಪ್ರಾಯ 60
4.3.2 ಯೋಜನೆಯ ಲಾಭ ಮತ್ತು ಉಪಯುಕ್ತತೆ 61
4.3.3 ಅರಿವು ಸಾಲದ ಆರ್ಥಿಕೇತರ ಲಾಭಗಳು 61
4.3.4 ಅರಿವು ಶಿಕ್ಷಣ ಸಾಲದ ಬಳಕೆ 62
4.3.5 ಸಾಲದ ಬಿಡುಗಡೆ: ಪಾವತಿಸುವ ವಿಧಾನ, ಸಮಯೋಚಿತತೆ 63
4.3.6 ಸಾಲ ಬಿಡುಗಡೆಯ ಸಮಯೋಚಿತತೆ 64
4.4 ಅರಿವು ಯೋಜನೆ ಅನುಷ್ಠಾನದ ಪರಿಣಾಮಕಾರಿತ್ವ 65
4.4.1 ಫಲಾನುಭವಿ ಆಯ್ಕೆ ವಿಧಾನ: ತೊಂದರೆಗಳು ಮತ್ತು ಸಮಸ್ಯೆಗಳು 67
4.4.2 ಯೋಜನೆ ಅನುಷ್ಠಾನದ ಬಗ್ಗೆ ಫಲಾನುಭವಿ ಗ್ರಹಿಕೆಗಳು: ಸುಲಭ ಲಭ್ಯತೆ 67
4.4.3 ಕಾರ್ಯವಿಧಾನದ ಅವಶ್ಯಕತೆ ಬಗ್ಗೆ ಫಲಾನುಭವಿ ಗ್ರಹಿಕೆಗಳು 68
4.5 ಶೈಕ್ಷಣಿಕ ಫಲಿತಾಂಶಗಳ ಮೇಲೆ ಅರಿವು ಶಿಕ್ಷಣ ಸಾಲದ ಪರಿಣಾಮಗಳು 71
4.5.1 ಕೋರ್ಸ್ ಪೂರ್ಣಗೊಳಿಸುವಿಕೆಯ ಅನುಪಾತದ ಮೇಲೆ ಅರಿವು ಪರಿಣಾಮ 72
4.5.2 ಉದ್ಯೋಗದ ಮೇಲೆ ಅರಿವು ಶಿಕ್ಷಣ ಸಾಲದ ಪರಿಣಾಮ 76
4.6 ಫಲಾನುಭವಿಗಳು ತಮ್ಮ ಅಧ್ಯಯನದ ಅವಧಿಯಲ್ಲಿ ಮಾಡಿದ ಖರ್ಚು 85
4.7 ಅರಿವು ಫಲಾನುಭವಿಗಳ ಸಾಲ ಮರುಪಾವತಿ ಸ್ಥಿತಿ 90
4.7.1 ಉದ್ಯೋಗಿ ಮತ್ತು ನಿರುದ್ಯೋಗಿ ಫಲಾನುಭವಿಗಳಲ್ಲಿ ಸಾಲ ಮರುಪಾವತಿ ಸ್ಥಿತಿ 91
4.7.2 ಪುರುಷ–ಸ್ತ್ರೀ ಫಲಾನುಭವಿಗಳಲ್ಲಿ ಸಾಲ ಮರುಪಾವತಿ ಸ್ಥಿತಿ 92
4.7.3 ನಾಲ್ಕು ಹಿಂದುಳಿದ ವರ್ಗಗಳ ವಿಭಾಗಗಳಲ್ಲಿ ಸಾಲ ಮರುಪಾವತಿ ಸ್ಥಿತಿ 94
4.7.4 ವಿವಿಧ ಕೋರ್ಸ್‌ಗಳಲ್ಲಿ ಸಾಲ ಮರುಪಾವತಿ 95
4.7.5 ವಿವಿಧ ನಿರ್ವಹಣಾ ಪ್ರಕಾರದ ಸಂಸ್ಥೆಗಳಲ್ಲಿ ಸಾಲ ಮರುಪಾವತಿ ಸ್ಥಿತಿ 97
4.7.6 ಜಿಲ್ಲೆಗಳು / ವಿಭಾಗಗಳಲ್ಲಿ ಸಾಲ ಮರುಪಾವತಿ ಸ್ಥಿತಿ 97
4.8 ಲಾಜಿಸ್ಟಿಕ್ ರಿಗ್ರೆಷನ್ 99
4.9 ಅರಿವು ಶಿಕ್ಷಣ ಸಾಲದ ಬಗ್ಗೆ ಫಲಾನುಭವಿಗಳ ಅರಿವು 101
4.9.1 ಅರ್ಹತಾ ಮಾನದಂಡ 101
4.9.2 ಆಯ್ಕೆ ಮತ್ತು ಅರ್ಜಿಯ ವಿಧಾನ 103
4.9.3 ಅಗತ್ಯವಿರುವ ದಾಖಲೆಗಳ ಬಗ್ಗೆ ಫಲಾನುಭವಿಗಳ ಅರಿವು 107
4.10 ಕಡಿಮೆ ಲಭ್ಯತೆ ಮತ್ತು ಕಳಪೆ ಭಾಗವಹಿಸುವಿಕೆಗೆ ಕಾರಣಗಳು ಮತ್ತು ನಿರ್ಬಂಧಗಳು 108

4.11 ಫಲಾನುಭವಿಗಳ ತುಲನಾತ್ಮಕ ವಿಶ್ಲೇಷಣೆ 108
4.12 ಓರ್ವ ಮಹಿಳಾ ವಿದ್ಯಾರ್ಥಿ ಫಲಾನುಭವಿಯ ಪ್ರಕರಣ ಅಧ್ಯಯನ 110
4.13 ಇತರ ರಾಜ್ಯಗಳ ಇದೇ ರೀತಿಯ ಯೋಜನೆಗಳೊಂದಿಗೆ ಅರಿವು ಯೋಜನೆಯ ತುಲನಾತ್ಮಕ ವಿಶ್ಲೇಷಣೆ ... 112
ಅಧ್ಯಾಯ 5 ಫಲಿತಾಂಶಗಳು, ಸಲಹೆಗಳು ಮತ್ತು ಶಿಫಾರಸ್ಸುಗಳು **115**
5.1 ಪ್ರಮುಖ ಶೋಧನೆಗಳು 115
5.2 ಸಲಹೆಗಳು ಮತ್ತು ಶಿಫಾರಸ್ಸುಗಳು 121
ಉಲ್ಲೇಖಗಳು / ಗ್ರಂಥಸೂಚಿ **125**
ಅನುಬಂಧ **128**

ಕೋಷ್ಟಕದ ಪಟ್ಟಿ

ಕೋಷ್ಟಕ 1 ಮೌಲ್ಯಮಾಪನ ಮಾತೃಕೆ....16
ಕೋಷ್ಟಕ 2 ಮಾದರಿಗಳ ವಿನ್ಯಾಸ....21
ಕೋಷ್ಟಕ 3 ರಾಜ್ಯ ಮಟ್ಟದಲ್ಲಿ ಅರಿವು ಶಿಕ್ಷಣ ಸಾಲ ಯೋಜನೆಯ ಪ್ರಗತಿ....36
ಕೋಷ್ಟಕ 4 ರಾಜ್ಯ ಮಟ್ಟದಲ್ಲಿ ಅಲೆಮಾರಿ ಮತ್ತು ಅರೆ–ಅಲೆಮಾರಿ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ.....37
ಕೋಷ್ಟಕ 5 ರಾಜ್ಯ ಮಟ್ಟದಲ್ಲಿ ಮಡಿವಾಳ ಹಿಂದುಳಿದ ವರ್ಗ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ....38
ಕೋಷ್ಟಕ 6 ರಾಜ್ಯ ಮಟ್ಟದಲ್ಲಿ ಸವಿತಾ ಸಮಾಜದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ....38
ಕೋಷ್ಟಕ 7 ರಾಜ್ಯ ಮಟ್ಟದಲ್ಲಿ ಕುಂಬಾರ ಸಮಾಜದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ....39
ಕೋಷ್ಟಕ 8 ರಾಜ್ಯ ಮಟ್ಟದಲ್ಲಿ ತಿಗಳ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ....39
ಕೋಷ್ಟಕ 9 ರಾಜ್ಯ ಮಟ್ಟದಲ್ಲಿ ಉಪ್ಪಾರ ಸಮಾಜದ ಹಿಂದುಳಿದ ವರ್ಗ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ....40
ಕೋಷ್ಟಕ 10 ಸಿಇಟಿ (ಒಟ್ಟಾರೆ ರಾಜ್ಯ) ಅಡಿಯಲ್ಲಿ ಭೌತಿಕ ಮತ್ತು ಆರ್ಥಿಕ ಹಂಚಿಕೆಗಳು....40
ಕೋಷ್ಟಕ 11 ಸಿಇಟಿ ಮತ್ತು ಸಿಇಟಿಯೇತರ ಕೋರ್ಸ್‌ಗಳಲ್ಲಿ ಅರಿವು ಶಿಕ್ಷಣ ಫಲಾನುಭವಿಗಳು....41
ಕೋಷ್ಟಕ 12 ವರ್ಗ I ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳ ಅಡಿಯಲ್ಲಿ ಅರಿವು ಫಲಾನುಭವಿ ವ್ಯಾಪ್ತಿ....43
ಕೋಷ್ಟಕ 13 ವರ್ಗ IIಎ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳ ಅಡಿಯಲ್ಲಿ ಅರಿವು ಫಲಾನುಭವಿ ವ್ಯಾಪ್ತಿ....44
ಕೋಷ್ಟಕ 14 ವರ್ಗ IIIಎ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳ ಅಡಿಯಲ್ಲಿ ಅರಿವು ಫಲಾನುಭವಿ ವ್ಯಾಪ್ತಿ....45
ಕೋಷ್ಟಕ 15 ವರ್ಗ IIIಎ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳ ಅಡಿಯಲ್ಲಿ ಅರಿವು ಫಲಾನುಭವಿ ವ್ಯಾಪ್ತಿ....46
ಕೋಷ್ಟಕ 16 ಮಾದರಿ ಜಿಲ್ಲೆಗಳಲ್ಲಿ ಲಿಂಗವಾರು ವ್ಯಾಪ್ತಿ (ಸಾರ್ವತ್ರಿಕವಾಗಿ–ಎಲ್ಲಾ ಫಲಾನುಭವಿಗಳು)....47
ಕೋಷ್ಟಕ 17 ಹಿಂದುಳಿದ ವರ್ಗ–ಮಾದರಿ ಜಿಲ್ಲೆಗಳಲ್ಲಿ ಹೊಂದಿರುವ ವ್ಯಾಪ್ತಿ (ಎಲ್ಲಾ ಫಲಾನುಭವಿಗಳು)....49
ಕೋಷ್ಟಕ 18 ಮಾದರಿ ಜಿಲ್ಲೆಗಳಲ್ಲಿ ಕೋರ್ಸ್ವಾರು ವಿತರಣೆ ಮತ್ತು ಫಲಾನುಭವಿಗಳ ವ್ಯಾಪ್ತಿ (ಸಾರ್ವತ್ರಿಕವಾಗಿ ಎಲ್ಲಾ ಫಲಾನುಭವಿಗಳು).51
ಕೋಷ್ಟಕ 19 ಅರಿವು ಫಲಾನುಭವಿಗಳ ಭೂ ಮಾಲೀಕತ್ವದ ಸ್ಥಿತಿ....53
ಕೋಷ್ಟಕ 20 ಫಲಾನುಭವಿ ವರ್ಗಗಳಾದ್ಯಂತ ಭೂಮಾಲೀಕತ್ವದ ಸ್ಥಿತಿ....54
ಕೋಷ್ಟಕ 21 ಫಲಾನುಭವಿ ವರ್ಗಗಳಲ್ಲಿ ಭೂ ಮಾಲೀಕತ್ವದ ಪ್ರಕಾರ....54
ಕೋಷ್ಟಕ 22 ಜಿಲ್ಲೆಗಳಾದ್ಯಂತ ಫಲಾನುಭವಿಗಳ ಒಡೆತನದ ಮನೆಯ ಸ್ವತ್ತುಗಳು....56
ಕೋಷ್ಟಕ 23 ಕಾಲೇಜಿನ ಪ್ರಕಾರಗಳಲ್ಲಿ ಫಲಾನುಭವಿಗಳು....57
ಕೋಷ್ಟಕ 24 ಫಲಾನುಭವಿಗಳ ಕಾಲೇಜು ಪ್ರಕಾರ ಮತ್ತು ಅವರ ಪೋಷಕರ ವಾರ್ಷಿಕ ಆದಾಯ....58
ಕೋಷ್ಟಕ 25 ಫಲಾನುಭವಿ ಕಾಲೇಜು ಪ್ರಕಾರ ಮತ್ತು ಪೋಷಕರ ಶೈಕ್ಷಣಿಕ ಮಟ್ಟ....59
ಕೋಷ್ಟಕ 26 ಫಲಾನುಭವಿ ಕಾಲೇಜು ಪ್ರಕಾರ ಮತ್ತು ಪೋಷಕರ ಶೈಕ್ಷಣಿಕ ಮಟ್ಟ....59
ಕೋಷ್ಟಕ 27 ಅರಿವು ಕಾರ್ಯಕ್ರಮದ ಲಾಭದ ಬಗ್ಗೆ ಫಲಾನುಭವಿ ಗ್ರಹಿಕೆಗಳು....62
ಕೋಷ್ಟಕ 28 ಫಲಾನುಭವಿಗಳಿಂದ ಅರಿವು ಸಾಲದ ಬಳಕೆ....62
ಕೋಷ್ಟಕ 29 ಸಾಲದ ಕಂತುಗಳು....64
ಕೋಷ್ಟಕ 30 ಸಮಯಕ್ಕೆ ಸಾಲ ಬಿಡುಗಡೆ....65
ಕೋಷ್ಟಕ 31 ಸಾಲದ ಸುಲಭ ಲಭ್ಯತೆ ಕುರಿತು ಫಲಾನುಭವಿಗಳ ಪ್ರತಿಕ್ರಿಯೆಗಳು....68
ಕೋಷ್ಟಕ 32 ಕಷ್ಟಕರವಾದ ಕಾರ್ಯವಿಧಾನದ ಕಾರ್ಯಗಳ ಬಗ್ಗೆ ಫಲಾನುಭವಿಗಳ ಅಭಿಪ್ರಾಯಗಳು....69
ಕೋಷ್ಟಕ 33 ಗ್ರಾಮೀಣ ವಿದ್ಯಾರ್ಥಿಗಳು ಎದುರಿಸುತ್ತಿರುವ ಕಕಣ ಕಾರ್ಯವಿಧಾನದ ಕಾರ್ಯಗಳು....70
ಕೋಷ್ಟಕ 34 ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವಲ್ಲಿ ಅನುಕೂಲ....71
ಕೋಷ್ಟಕ 35 ಕೋರ್ಸ್ ವಾರು ಫಲಾನುಭವಿ ಸ್ಥಿತಿ....72

ಕೋಷ್ಟಕ 36 ಕೋರ್ಸ್ ಪೂರ್ಣಗೊಳಿಸದಿರಲು (ಶಾಲೆ ತೊರೆದವರು) ಕಾರಣಗಳು (ಸಂಖ್ಯೆ = 23) 73
ಕೋಷ್ಟಕ 37 ವಿದ್ಯಾರ್ಥಿ ಫಲಾನುಭವಿಗಳ ಕೋರ್ಸ್ ಪೂರ್ಣಗೊಳಿಸುವಿಕೆ ಜಿಲ್ಲಾವಾರು ಸ್ಥಿತಿ 73
ಕೋಷ್ಟಕ 38 ಪುರುಷ– ಸ್ತ್ರೀ ವಿದ್ಯಾರ್ಥಿ ಫಲಾನುಭವಿಗಳ ಕೋರ್ಸ್ ಪೂರ್ಣಗೊಳಿಸುವಿಕೆ ಸ್ಥಿತಿ 74
ಕೋಷ್ಟಕ 39 ಜಿಲ್ಲಾವಾರು ಪುರುಷ–ಮಹಿಳೆಯರ ಕೋರ್ಸ್ ಪೂರ್ಣಗೊಳಿಸುವಿಕೆಯ ಸ್ಥಿತಿ 75
ಕೋಷ್ಟಕ 40 ಹಿಂದುಳಿದ ವರ್ಗಗಳಲ್ಲಿ – ವರ್ಗಾವಾರು ವಿದ್ಯಾರ್ಥಿ ಫಲಾನುಭವಿ ಹಂಚಿಕೆ 76
ಕೋಷ್ಟಕ 41 ಕೋರ್ಸ್ ಪೂರ್ಣಗೊಂಡ ಮತ್ತು ಡ್ರಾಪ್ ಔಟ್‌ಗಳ ಉದ್ಯೋಗದ ಸ್ಥಿತಿ 76
ಕೋಷ್ಟಕ 42 ಪುರುಷ – ಸ್ತ್ರೀಯರ ಉದ್ಯೋಗದ ಸ್ಥಿತಿ 77
ಕೋಷ್ಟಕ 43 ಹಿಂದುಳಿದ ವರ್ಗಗಳ ಫಲಾನುಭವಿಗಳಾದ್ಯಂತ ಉದ್ಯೋಗದ ಸ್ಥಿತಿ 77
ಕೋಷ್ಟಕ 44 ಫಲಾನುಭವಿಗಳಲ್ಲಿ ಕೋರ್ಸ್ ವಾರು ಉದ್ಯೋಗದ ಸ್ಥಿತಿ 78
ಕೋಷ್ಟಕ 45 ಜಿಲ್ಲೆಗಳಲ್ಲಿ ಉದ್ಯೋಗದ ಸ್ಥಿತಿ 79
ಕೋಷ್ಟಕ 46 ಫಲಾನುಭವಿಗಳ ಉದ್ಯೋಗದ ಪ್ರಕಾರ 80
ಕೋಷ್ಟಕ 47 ಉದ್ಯೋಗಿ ಫಲಾನುಭವಿಗಳ ಕೆಲಸದ ಸ್ಥಳ 80
ಕೋಷ್ಟಕ 48 ಉದ್ಯೋಗದ ಫಲಾನುಭವಿಗಳ ಮಾಸಿಕ ಗಳಿಕೆ 81
ಕೋಷ್ಟಕ 49 ಫಲಾನುಭವಿಗಳು ಕೋರ್ಸ್ ಮುಗಿದ ಕೂಡಲೇ ಕೆಲಸ ಪಡೆಯುತ್ತಾರೆಯೇ 82
ಕೋಷ್ಟಕ 50 ಕೆಲಸ ಪಡೆಯಲು ವಿಳಂಬದ ವಿಸ್ತರಣೆ 83
ಕೋಷ್ಟಕ 51 ಕೆಲಸ ಪಡೆಯಲು ವಿಳಂಬಕ್ಕೆ ಕಾರಣಗಳು 84
ಕೋಷ್ಟಕ 52 ಜಿಲ್ಲೆಗಳಾದ್ಯಂತ ಸಿಇಟಿ ಮತ್ತು ಸಿಇಟಿ ಅಲ್ಲದ ಪ್ರತಿ ಫಲಾನುಭವಿಗೆ ಸರಾಸರಿ ವಾರ್ಷಿಕ ಶೈಕ್ಷಣಿಕ ಖರ್ಚು 85
ಕೋಷ್ಟಕ 53 ಪ್ರತಿ ಫಲಾನುಭವಿಗೆ ಕೋರ್ಸ್‌ಗಳಾದ್ಯಂತ ತಗಲುವ ಶಿಕ್ಷಣ ಸಂಬಂಧಿತ ಸರಾಸರಿ ವಾರ್ಷಿಕ ಖರ್ಚು 87
ಕೋಷ್ಟಕ 54 ಜಿಲ್ಲೆಗಳು ಮತ್ತು ವಿಭಾಗಗಳಲ್ಲಿ ಸರಾಸರಿ ಶಿಕ್ಷಣಕ್ಕೆ ಸಂಬಂಧಿಸಿದ ಖರ್ಚು 87
ಕೋಷ್ಟಕ 55 ವರ್ಗಗಳಾದ್ಯಂತ ಸರಾಸರಿ ಶಿಕ್ಷಣಕ್ಕೆ ಸಂಬಂಧಿಸಿದ ಖರ್ಚು 88
ಕೋಷ್ಟಕ 56 ಸಿಇಟಿ ಫಲಾನುಭವಿಗಳಿಗೆ ಸರಾಸರಿ ಸಾಲಕ್ಕೆ ವಿರುದ್ಧವಾಗಿ ಸರಾಸರಿ ವಾರ್ಷಿಕ ಖರ್ಚು (ರೂ.ಗಳಲ್ಲಿ) 88
ಕೋಷ್ಟಕ 57 ಸಿಇಟಿ ಅಲ್ಲದ ಫಲಾನುಭವಿಗಳಿಗೆ ಸರಾಸರಿ ಸಾಲಕ್ಕೆ ವಿರುದ್ಧವಾಗಿ ಸರಾಸರಿ ವಾರ್ಷಿಕ ಖರ್ಚು (ರೂ.ಗಳಲ್ಲಿ) 89
ಕೋಷ್ಟಕ 58 ಫಲಾನುಭವಿಗಳಲ್ಲಿ ಸಾಲ ಮರುಪಾವತಿ ಅಂಕಿಅಂಶಗಳು 91
ಕೋಷ್ಟಕ 59 ಫಲಾನುಭವಿಗಳ ಉದ್ಯೋಗ ಸ್ಥಿತಿ ಮತ್ತು ಸಾಲ ಮರುಪಾವತಿ ಸ್ಥಿತಿ 92
ಕೋಷ್ಟಕ 60 ಉದ್ಯೋಗ–ನಿರುದ್ಯೋಗಿ ಪುರುಷ–ಸ್ತ್ರೀ ಫಲಾನುಭವಿಗಳ ಸಾಲ ಮರುಪಾವತಿ ಸ್ಥಿತಿ 93
ಕೋಷ್ಟಕ 61 ಫಲಾನುಭವಿಗಳ ವಿವಿಧ ವರ್ಗಗಳಲ್ಲಿ ಸಾಲ ಮರುಪಾವತಿ 94
ಕೋಷ್ಟಕ 62 ವಿವಿಧ ವರ್ಗದ ಉದ್ಯೋಗಿ–ನಿರುದ್ಯೋಗಿ ಫಲಾನುಭವಿಗಳಲ್ಲಿ ಸಾಲ ಮರುಪಾವತಿ 95
ಕೋಷ್ಟಕ 63 ವಿವಿಧ ಕೋರ್ಸ್‌ಗಳಲ್ಲಿ ಫಲಾನುಭವಿಗಳ ಸಾಲ ಮರುಪಾವತಿ ಸ್ಥಿತಿ 96
ಕೋಷ್ಟಕ 64 ವಿವಿಧ ರೀತಿಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಫಲಾನುಭವಿಗಳ ಸಾಲ ಮರುಪಾವತಿ ಸ್ಥಿತಿ 97
ಕೋಷ್ಟಕ 65 ಸಾಲ ಮರುಪಾವತಿಯ ಸ್ಥಿತಿ 97
ಕೋಷ್ಟಕ 66 ಸಾಲದ ಮರುಪಾವತಿಯ ಸ್ಥಿತಿ – ಸ್ವತಂತ್ರ ಅಸ್ಥಿರಗಳೊಂದಿಗೆ ಉದ್ಯೋಗದ ಸ್ಥಿತಿಯ ರಿಗ್ರೆಶನ್ ಮ್ಯಾಟ್ರಿಕ್ಸ್ ಫಲಿತಾಂಶಗಳು 100
ಕೋಷ್ಟಕ 67 ಅರಿವು ಯೋಜನೆಯ ಬಗ್ಗೆ ಅರಿವಿನ ಮೂಲ 101
ಕೋಷ್ಟಕ 68 ಕಾರ್ಯಕ್ರಮದ ಅರ್ಹತಾ ಮಾನದಂಡಗಳ ಬಗ್ಗೆ ಫಲಾನುಭವಿಗಳ ಜ್ಞಾನ 102
ಕೋಷ್ಟಕ 69 ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ / ಕಾರ್ಯವಿಧಾನದ ಬಗ್ಗೆ ಜ್ಞಾನ 103
ಕೋಷ್ಟಕ 70 ಫಲಾನುಭವಿಗಳಲ್ಲಿ ಸಾಲದ ಮೊತ್ತವನ್ನು ಬಿಡುಗಡೆ ಮಾಡುವ ವಿಧಾನದ ಬಗ್ಗೆ ಜಾಗೃತಿ 105
ಕೋಷ್ಟಕ 71 ಅರ್ಜಿಗಳ ಕಾರ್ಯವಿಧಾನಗಳ ಬಗ್ಗೆ ಫಲಾನುಭವಿಗಳಲ್ಲಿರುವ ಜ್ಞಾನ 106
ಕೋಷ್ಟಕ 72 ಫಲಾನುಭವಿಗಳಿಗೆ ಯೋಜನೆಗೆ ಅಗತ್ಯವಾದ ದಾಖಲೆಗಳ ಬಗ್ಗೆ ಜ್ಞಾನ 107
ಕೋಷ್ಟಕ 73 ಉನ್ನತ ಶಿಕ್ಷಣದ ಬಗ್ಗೆ ಹಿಂದುಳಿದ ವರ್ಗದ ಅರಿವು ಫಲಾನುಭವಿ ಗಳಲ್ಲದವರ ಮನೋಭಾವಗಳು [ಸಂಖ್ಯೆ= 12] 109

ಚಿತ್ರಗಳ ಪಟ್ಟಿ

ಚಿತ್ರ 1 ಬದಲಾವಣೆಯ ಸಿದ್ಧಾಂತ 15
ಚಿತ್ರ 2 ಕರ್ನಾಟಕದ ಪ್ರಾದೇಶಿಕವಾರು ಆಯ್ಕೆಯ ಜಿಲ್ಲೆಗಳು 22
ಚಿತ್ರ 3 ರಾಜ್ಯ ಮಟ್ಟದಲ್ಲಿ ಅರಿವು ಶಿಕ್ಷಣ ಸಾಲ ಯೋಜನೆಯ ಪ್ರಗತಿ (ಲಕ್ಷಗಳಲ್ಲಿ) 36
ಚಿತ್ರ 4 ರಾಜ್ಯ ಮಟ್ಟದಲ್ಲಿ ಅರಿವು ಶಿಕ್ಷಣ ಸಾಲ ಯೋಜನೆಯ ಪ್ರಗತಿ (ಶೇಕಡವಾರು) 37
ಚಿತ್ರ 5 ಮಾದರಿ ಜಿಲ್ಲೆಗಳಲ್ಲಿ ಲಿಂಗವಾರು ವ್ಯಾಪ್ತಿ 48
ಚಿತ್ರ 6 ಹಿಂದುಳಿದ ವರ್ಗ–ಮಾದರಿ ಜಿಲ್ಲೆಗಳಲ್ಲಿ ಹೊಂದಿರುವ ವ್ಯಾಪ್ತಿ (ಎಲ್ಲಾ ಫಲಾನುಭವಿಗಳು) 50
ಚಿತ್ರ 7 ಕಾಲೇಜುಗಳಲ್ಲಿ ಫಲಾನುಭವಿಗಳ ವಿತರಣೆ (%) 58
ಚಿತ್ರ 8 ಕಾಲೇಜುಗಳನ್ವಯ ಫಲಾನುಭವಿ ಕಾಲೇಜು ಪ್ರಕಾರ ಮತ್ತು ಪೋಷಕರ ಶೈಕ್ಷಣಿಕ ಮಟ್ಟ 60
ಚಿತ್ರ 9 ಫಲಾನುಭವಿಗಳ ಉದ್ಯೋಗ ಸ್ಥಿತಿ ಮತ್ತು ಸಾಲ ಮರುಪಾವತಿ ಸ್ಥಿತಿ (ಶೇಕಡದಲ್ಲಿ) 92
ಚಿತ್ರ 10 ಉದ್ಯೋಗಿ–ನಿರುದ್ಯೋಗಿ ಪುರುಷ–ಸ್ತ್ರೀ ಫಲಾನುಭವಿಗಳ ಸಾಲ ಮರುಪಾವತಿ ಸ್ಥಿತಿ 93
ಚಿತ್ರ 11 ಪುರುಷ ಮತ್ತು ಸ್ತ್ರೀ ಉದ್ಯೋಗಿ ಫಲಾನುಭವಿಗಳಲ್ಲಿ ಸಾಲ ಮರುಪಾವತಿ 95
ಚಿತ್ರ 12 ವಿವಿಧ ಕೋರ್ಸ್‌ಗಳಲ್ಲಿ ಫಲಾನುಭವಿಗಳ ಸಾಲ ಮರುಪಾವತಿ ಸ್ಥಿತಿ 96
ಚಿತ್ರ 13 ಸಾಲ ಮರುಪಾವತಿಯ ಸ್ಥಿತಿ (ಜಿಲ್ಲಾವಾರು) 99

ಭಾವ ಚಿತ್ರಗಳ ಪಟ್ಟಿ

ಭಾವಚಿತ್ರಗಳು 1 ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಬೆಂಗಳೂರು ಜಿಲ್ಲಾ ವ್ಯವಸ್ಥಾಪಕರೊಂದಿಗೆ ಸಂದರ್ಶನ 129
ಭಾವಚಿತ್ರಗಳು 2 ಅರಿವು ಶಿಕ್ಷಣ ಸಾಲ ಪಡೆದ ಫಲಾನುಭವಿ ಪೋಷಕರೊಂದಿಗೆ ಸಂದರ್ಶನ 129
ಭಾವಚಿತ್ರಗಳು 3 ಬೆಳಗಾವಿಯ ಇಂಜಿನಿಯರ್ ಕಾಲೇಜಿನ ಪ್ರಾಂಶುಪಾಲರೊಂದಿಗೆ ಸಂದರ್ಶನ 129
ಭಾವಚಿತ್ರಗಳು 4 ಅರಿವು ಸಾಲದ ಅಧ್ಯಯನದ ನಮೂನೆಗಳ ಬಗ್ಗೆ ದತ್ತಾಂಶ ಸಂಗ್ರಹಕಾರರಿಗೆ ತರಬೇತಿ ಕಾರ್ಯಗಾರ 129

ಸಂಕ್ಷೇಪಣಗಳ ಪಟ್ಟಿ

BC/ಬಿಸಿ	Backward Class	ಹಿಂದುಳಿದ ವರ್ಗ
BE/ಬಿಇ	Bachelor of Engineering	ಇಂಜಿನಿಯರಿಂಗ್ ಪದವಿ
CEO/ಸಿಇಒ	Chief Executive Officer	ಮುಖ್ಯ ಕಾರ್ಯ ನಿರ್ವಹಣಾಧಿಕಾರಿ
CET/ಸಿಇಟಿ	Common Entrance Test	ಸಾಮಾನ್ಯ ಪ್ರವೇಶ ಪರೀಕ್ಷೆ
DDUBCDC D/ ಡಿಡಿಯುಬಿಸಿಡಿಸಿ	Devaraj Urs Backward Class Development Corporation	ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ
EQUIPÀ/ ಇಕ್ಯೂಯುಐಪಿ	Education Quality upgradation and Inclusion programme	ಶಿಕ್ಷಣದ ಗುಣಮಟ್ಟ ಸುಧಾರಣೆ ಮತ್ತು ಒಳಗೊಳ್ಳುವಿಕೆ ಕಾರ್ಯಕ್ರಮ
FGDs/ ಎಫ್‌ಜಿಡಿ	Focus Group Discussion	ಕೇಂದ್ರೀಕೃತ ಗುಂಪು ಚರ್ಚೆ
GDPÀ / ಜಿಡಿಪಿ	Gross Domestic Product	ನಿವ್ವಳ ದೇಶೀಯ ಉತ್ಪನ್ನ
GER/ ಜಿಇಆರ್	Gross Enrolment Ratio	ಒಟ್ಟು ದಾಖಲಾತಿ ಅನುಪಾತ
GOK/ ಜಿಒಕೆ	Government of Karnataka	ಕರ್ನಾಟಕ ಸರ್ಕಾರ
HEI/ ಹೆಚ್‌ಇಐ	Higher Educational Institutions	ಉನ್ನತ ಶಿಕ್ಷಣ ಸಂಸ್ಥೆಗಳು
IDIs/ ಐಡಿಐ	In-depth Interviews	ಆಳ ಸಂದರ್ಶನ
KEA/ ಕೆಇಎ	Karnataka Examination Authority	ಕರ್ನಾಟಕ ಪರೀಕ್ಷಾ ಪ್ರಾಧಿಕಾರ
MHRD/ ಎಮ್‌ಎಚ್‌ಆರ್‌ಡಿ	Ministry of Human Resource Development	ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ
PG / ಪಿಜಿ	Post-Graduation	ಸ್ನಾತಕೋತ್ತರ
ZP/ ಝಡ್‌ಪಿ	Zilla Panchayat	ಜಿಲ್ಲಾ ಪಂಚಾಯತ್

ಕಾರ್ಯಕಾರಿ ಸಾರಂಶ

ಈ ಅಧ್ಯಯನವು ಕರ್ನಾಟಕ ರಾಜ್ಯ ಸರ್ಕಾರವು ಪ್ರಾರಂಭಿಸಿದ ಅರಿವು ಶೈಕ್ಷಣಿಕ ಸಾಲ ಕಾರ್ಯಕ್ರಮದ ಮೌಲ್ಯಮಾಪನವಾಗಿದೆ. ಹಿಂದುಳಿದ ವರ್ಗಗಳಾದ ಪ್ರವರ್ಗ I, II–ಎ, III–ಎ ಮತ್ತು III–ಬಿ ವರ್ಗಗಳ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವೇಶಾತಿಯನ್ನು ಹೆಚ್ಚಿಸುವುದು, ಶಿಕ್ಷಣದಿಂದ ಹೊರಗುಳಿಯುವ ಪ್ರಮಾಣವನ್ನು ಕಡಿಮೆಗೊಳಿಸುವುದು ಹಾಗೂ ಉದ್ಯೋಗವನ್ನು ಹೆಚ್ಚಿಸುವ ಉದ್ದೇಶಗಳನ್ನು ಈ ಯೋಜನೆಯು ಹೊಂದಿದೆ. ಈ ಯೋಜನೆಯು ಸಿಇಟಿ ಮತ್ತು ಸಿಇಟಿಯೇತರ ಕೋರ್ಸುಗಳಡಿಯಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಪಡೆಯಲು ಶೈಕ್ಷಣಿಕ ಸಾಲವನ್ನು ಒದಗಿಸುತ್ತದೆ. ಈ ಯೋಜನೆ ರಾಜ್ಯದ ೩೦ ಜಿಲ್ಲೆಗಳನ್ನೂ ಒಳಗೊಂಡಿದೆ. ಈ ಯೋಜನೆಯನ್ನು ಕರ್ನಾಟಕ ಸರ್ಕಾರದ ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಜಾರಿಗೊಂಡಿದೆ. ಈ ಯೋಜನೆಯು ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ಶೇ.೨ ರ ಬಡ್ಡಿ ದರದಲ್ಲಿ ಒಂದು ಲಕ್ಷ ರೂಪಾಯಿ ಸಾಲವನ್ನು ನೀಡುತ್ತದೆ. ಈ ಯೋಜನೆಯ ಅವಕಾಶವನ್ನು ಪಡೆಯಲು ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ರೂ.೩.೫ ಲಕ್ಷಗಳ ಒಳಗಿನ ಮಿತಿಯನ್ನು ಹೊಂದಿರಬೇಕು.

ಕರ್ನಾಟಕ ಮೌಲ್ಯಮಾಪನದ ಉಲ್ಲೇಖ ನಿಯಮದಡಿ ನೀಡಿದಂತೆ ಈ ಯೋಜನೆಯ ಅನುಷ್ಠಾನದ ವಿನ್ಯಾಸ, ರಚನೆ ಮತ್ತು ಪ್ರಕ್ರಿಯೆಗಳನ್ನು ಪರಿಶೀಲಿಸುವ ಜೊತೆಗೆ ಈ ಕೆಳಗಿನ ಉದ್ದೇಶಗಳನ್ನು ಹೊಂದಿದೆ.

೧. ಉದ್ದೇಶಿತ ಫಲಿತಾಂಶಗಳ ದೃಷ್ಟಿಯಿಂದ ಕಾರ್ಯಕ್ರಮದ ಪ್ರಭಾವವನ್ನು ನಿರ್ಣಯಿಸುವುದು.

೨. ಅದರ ವಿಸ್ತಾರ, ವ್ಯಾಪ್ತಿ, ಸಮಯೋಚಿತ ಲಭ್ಯತೆ, ಬಳಕೆಯನ್ನು ಪರೀಕ್ಷಿಸುವುದು.

೩. ಕಾರ್ಯಕ್ರಮದ ಅನುಷ್ಠಾನ ಮತ್ತು ಪ್ರಭಾವಕ್ಕೆ ಸಂಬಂಧಿಸಿದಂತೆ ಫಲಾನುಭವಿ ಮತ್ತು ಮಧ್ಯಸ್ಥಗಾರರ ಗ್ರಹಿಕೆಗಳನ್ನು ಅರ್ಥಮಾಡಿಕೊಳ್ಳುವುದು.

ಈ ಅಧ್ಯಯನವು ಪ್ರಕರಣ ಅಧ್ಯಯನಗಳ ಜೊತೆಗೆ ಮೌಲ್ಯಮಾಪನಕ್ಕೆ ಕ್ಷೇತ್ರ ಸಮೀಕ್ಷೆಯ ವಿಧಾನವನ್ನು ಬಳಸಿದೆ. ದತ್ತಾಂಶ ಸಂಗ್ರಹ ವಿಧಾನಗಳಲ್ಲಿ ಪ್ರಶ್ನಾವಳಿಗಳು, ದಾಖಲೆಗಳ ವಿಶ್ಲೇಷಣೆ, ಕೇಂದ್ರೀಕೃತ ಗುಂಪು ಚರ್ಚೆ, ವೈಯುಕ್ತಿಕ ಸಂದರ್ಶನಗಳು ಸೇರಿವೆ. ಈ ಅಧ್ಯಯನಕ್ಕೆ ರಾಜ್ಯದ ೪ ಪ್ರಾದೇಶಿಕ ವಿಭಾಗಗಳ ೧೨ ಜಿಲ್ಲೆಗಳಿಂದ ೧೧೩೦ ಫಲಾನುಭವಿಗಳ ಮಾದರಿ ಆಯ್ಕೆಯನ್ನು ಬಹುಹಂತದ ಶ್ರೇಣೀಕೃತ ಮಾದರಿ ಆಯ್ಕೆ ವಿಧಾನದಿಂದ ಆರಿಸಲಾಗಿದೆ. ದತ್ತಾಂಶ ವಿಶ್ಲೇಷಣೆಯು ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳನ್ನು ಒಳಗೊಂಡಿದೆ.

ಪ್ರಮುಖ ಶೋಧನೆಗಳು:

೧. ರಾಜ್ಯವು ೨೦೧೧–೧೨ ನೇ ಸಾಲಿನಿಂದ ೨೦೧೮–೧೯ ನೇ ಸಾಲಿನವರೆಗೆ 'ಅರಿವು ಶೈಕ್ಷಣಿಕ ಸಾಲ ಕಾರ್ಯಕ್ರಮದಡಿ ಒಟ್ಟು ೧೬,೪೩೦ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಕಾರ್ಯಕ್ರಮದ ಗುರಿ ೧೫,೦೯೫ ಫಲಾನುಭವಿಗಳನ್ನು ತಲುಪುವುದಾಗಿದ್ದು ಇದಕ್ಕಾಗಿ ರೂ.೧೦,೨೯೭.೭೧ ಲಕ್ಷಗಳ ಆರ್ಥಿಕ ಹಂಚಿಕೆ ಮಾಡಲಾಗಿದೆ. ಯೋಜನೆಗೆ ಖರ್ಚು ಮಾಡಿದ ಒಟ್ಟು ಮೊತ್ತವನ್ನು, ಸಾಧನೆಯ ದೃಷ್ಟಿಯಿಂದ ಗಮನಿಸಿದರೆ ದಕ್ಷತೆಯು ಹಿಂದಿನವರೆಗೆ ಶೇಕಡಾ ೧೦೮.೮ ರಷ್ಟಿದ್ದು ಈಗ ಶೇಕಡಾ ೮೩.೮ ರಷ್ಟಿದೆ. ವರ್ಗವಾರು ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡರೆ, ೨೦೧೩–೧೪ ಮತ್ತು ೨೦೧೫–೧೬ ನೇ ಸಾಲಿನಲ್ಲಿ ವಾರ್ಷಿಕ ವ್ಯಾಪ್ತಿಗೆ

ಸಂಬಂಧಿಸಿದಂತೆ ಉತ್ತಮ ಕಾರ್ಯಕ್ಷಮತೆಯನ್ನು ಕಾಣಬಹುದು. **ಸಿಇಟಿ ವರ್ಗದ ಅಡಿಯಲ್ಲಿ ನೀಡಲಾದ ಗುರಿಗಳ ಸಾಧನೆಯ ದೃಷ್ಟಿಯಿಂದ ಗಮನಿಸಿದಾಗ ಯೋಜನೆಯು ಸತತವಾಗಿ/ಸ್ಥಿರವಾದ ಸಕಾರಾತ್ಮಕ ಸಾಧನೆಯನ್ನು ಮಾಡಿರುವುದನ್ನು ಕಾಣಬಹುದಾಗಿದೆ.**

೨. ಅಲೆಮಾರಿ ಮತ್ತು ಅರೆ–ಅಲೆಮಾರಿ, ಕುಂಬಾರ, ತಿಗಳ, ಮಡಿವಾಳ, ಸವಿತಾ ಸಮಾಜ ಮುಂತಾದ ಅತ್ಯಂತ ದುರ್ಬಲ ಸಮುದಾಯಗಳ ವ್ಯಾಪ್ತಿಯಲ್ಲಿ ಈ ಸ್ಥಿರತೆಯನ್ನು ಸಾಧಿಸುವಲ್ಲಿ ಯೋಜನೆಯು ವಿಫಲಗೊಂಡಿದ್ದು, ಇದು ಕಾರ್ಯಕ್ರಮದ ವಿನ್ಯಾಸವನ್ನು ಮರುಪರಿಶೀಲಿಸುವ ಅಗತ್ಯವನ್ನು ಸೂಚಿಸುತ್ತದೆ. ಅಲ್ಲದೇ, ರಾಜ್ಯ ಮಟ್ಟದಲ್ಲಿ ನೀತಿ ನಿರೂಪಣೆಯನ್ನು ಪರಿಷ್ಕರಿಸಬೇಕಾದ ಅಗತ್ಯತೆಯನ್ನು ಸೂಚಿಸುತ್ತಿದೆ.

೩. ಅಧ್ಯಯನಕ್ಕಾಗಿ ಆಯ್ದ ೧೨ ಮಾದರಿ ಜಿಲ್ಲೆಗಳಲ್ಲಿ ೨೦೧೧ ರಿಂದ ೨೦೧೫ ಅವಧಿಯನ್ನು ಗಮನಿಸಿದಾಗ ವಿವಿಧ ಕೊರ್ಸ್‌ಗಳಲ್ಲಿ ಬಿಇ/ಬಿ.ಟೆಕ್ ಕೋರ್ಸ್ ಅತ್ಯಧಿಕ ವ್ಯಾಪ್ತಿಯನ್ನು ಹೊಂದಿರುವುದು ಸ್ಪಷ್ಟವಾಗುತ್ತಿದೆ. ೨೦೧೬ ರ ನಂತರ ಈ ವ್ಯಾಪ್ತಿ ಅತ್ಯಧಿಕವಾಗಿದ್ದು, ಉನ್ನತ ಶಿಕ್ಷಣ ವಲಯದಲ್ಲಿ ಇಂಜಿನಿಯರಿಂಗ್‌ನಂತಹ ವೃತ್ತಿಪರ ಕೋರ್ಸುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಈ ರೀತಿಯ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ. ಉನ್ನತ ಶಿಕ್ಷಣ ಕ್ಷೇತ್ರದ ಶ್ಲಾಘನೀಯ ಸಾಧನೆ ಇದಾಗಿದೆ. ಸ್ನಾತಕೋತ್ತರ ಹಾಗೂ ವೈದ್ಯಕೀಯ ಮತ್ತು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಇಲ್ಲದ ಕೋರ್ಸುಗಳಿಗೆ ಯೋಜನೆಯ ವ್ಯಾಪ್ತಿ/ಲಭ್ಯತೆ ಸೀಮಿತ ವಾಗಿದ್ದರೂ, ಇದರ ಹೊರತಾಗಿಯೂ ಕಳೆದ ವರ್ಷಗಳಲ್ಲಿ ಕಾರ್ಯಕ್ರಮದಲ್ಲಿ ಕಂಡುಬರುವ ನಿರಂತರ ಪ್ರಗತಿಯು ಹೆಚ್ಚಿದ ಬೇಡಿಕೆಗೆ ಸಾಕ್ಷಿಯಾಗಿದೆ. **ಗ್ರಾಮೀಣ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಮಾಣ ಪದವಿ ಕೋರ್ಸುಗಳಿಗೆ ಅಧಿಕವಾಗಿದೆ ಎಂಬ ಅಂಶವನ್ನು ಗಮನಿಸಿದರೆ ಈ ವರ್ಗದ ವಿದ್ಯಾರ್ಥಿಗಳಿಗೆ ಸಹ ಅರಿವು ಸಾಲದ ಪ್ರಸ್ತುತತೆಯನ್ನು ಪರಿಶೀಲಿಸುವ ಮತ್ತು ವಿಸ್ತರಿಸುವ ಅವಶ್ಯಕತೆ ಇದೆ.**

೪. ಕಳೆದ ವರ್ಷಗಳಲ್ಲಿ ಹಿಂದುಳಿದ ವರ್ಗಗಳಲ್ಲಿ ಯೋಜನೆಯ ವ್ಯಾಪ್ತಿಯ/ಲಭ್ಯತೆಯ ಪ್ರಮಾಣವು ರಾಜ್ಯದ ವಿತರಣಾ ಮಾನದಂಡಗಳೊಂದಿಗೆ ಹೊಂದಾಣಿಕೆಯಾಗುತ್ತಿರುವುದು ಕಂಡುಬರುತ್ತದೆ. ಹಾಲಿ ವ್ಯವಸ್ಥೆಯಲ್ಲಿ ವರ್ಗ IIಎ ಅತಿದೊಡ್ಡ ಫಲಾನುಭವಿಗಳ ಗುಂಪಾಗಿ ಹೊರಹೊಮ್ಮಿರುತ್ತದೆ. ಬೆಂಗಳೂರು, ಮೈಸೂರು ಜಿಲ್ಲೆಗಳು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಕಂಡುಬರುವ ಈ ವೈಪರೀತ್ಯಗಳನ್ನು ಜನಸಂಖ್ಯಾ ಸಂಯೋಜನೆ ಮತ್ತು ಜನಸಂಖ್ಯೆಯ ಹಂಚಿಕೆಯ ಆಧಾರದಲ್ಲಿ ಸಮರ್ಥಿಸಿದರೂ, ಈ ವರ್ಗದ ಅಡಿಯಲ್ಲಿರುವ ಕೆಲವು ಪ್ರಮುಖ ಜಾತಿಗಳು ಪ್ರಸ್ತುತ ಯೋಜನೆಯ ಉಪಯೋಗವನ್ನು ಪಡೆಯಲು ಅರ್ಹತೆ ಹೊಂದಿಲ್ಲದಿರಬಹುದು. ಆದ್ದರಿಂದ ಫಲಾನುಭವಿಗಳ ಅಂತಿಮ ಆಯ್ಕೆಯಲ್ಲಿ ಫಲಾನುಭವಿಗಳನ್ನು **ಕೇವಲ ಜಾತಿಯ ಆಧಾರದ ಮೇಲೆ ಆಯ್ಕೆ ಮಾಡುವುದರ ಬದಲಾಗಿ ಆ ಜಾತಿ ಗುಂಪುಗಳಲ್ಲಿ ದುರ್ಬಲರು, ಬಡವರು ಮತ್ತು ಅಶಕ್ತರನ್ನು ಆಯ್ಕೆ ಮಾಡಬೇಕು.**

೫. ಈ ಕಾರ್ಯಕ್ರಮವು ಪ್ರತಿ ಆರು ಹುಡುಗರಿಗೆ ನಾಲ್ಕು ಹುಡುಗಿಯರನ್ನು ವ್ಯಾಪಿಸಿರುತ್ತದೆ. ಇದು ಕಲಬುರಗಿ, ಬೀದರ್ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಲಿಂಗ ಸಂವೇದನಾ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಆಯೋಜಿಸಬೇಕಾದ ಅಗತ್ಯವನ್ನು ಸೂಚಿಸುತ್ತದೆ.

೬. ಒಟ್ಟಾರೆಯಾಗಿ ಫಲಾನುಭವಿಗಳಲ್ಲಿ ಹೆಚ್ಚಿನವರು (ಶೇ.೮೧.೭) ಬಿಇ ಕೋರ್ಸ್ ನಲ್ಲಿ ಕಂಡು ಬಂದಿರುತ್ತಾರೆ. ಎಲ್ಲಾ ಪ್ರದೇಶಗಳಲ್ಲೂ ಇದೇ ರೀತಿಯ ಪ್ರವೃತ್ತಿಯನ್ನು ಕಾಣಬಹುದಾಗಿದೆ. **ಹಿಂದುಳಿದ ಜಿಲ್ಲೆಗಳಾದ ಬಾಗಲಕೋಟೆ ಮತ್ತು ಉತ್ತರಕನ್ನಡ ಜಿಲ್ಲೆಗಳು ಸಹ ಬಿಇ ಯಂತಹ ಕೋರ್ಸ್‌ಗಳಲ್ಲಿ ಶೇ.೯೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವುದು**

ಇದಕ್ಕೆ ಪುರಾವೆಯನ್ನು ಒದಗಿಸುತ್ತದೆ. ಹಿಂದುಳಿದ ಜಿಲ್ಲೆಗಳಲ್ಲಿಯೂ ಇಂಜಿನಿಯರಿಂಗ್ ಕೋರ್ಸುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹೆಚ್ಚಿನ ಭಾಗವಹಿಸುವಿಕೆ ಅರಿವು ಕಾರ್ಯಕ್ರಮದ ಸಕಾರಾತ್ಮಕ ಪರಿಣಾಮಕ್ಕೆ ಹಿಡಿದ ಕನ್ನಡಿಯಾಗಿದೆ.

೭. ಫಲಾನುಭವಿ ಕುಟುಂಬಗಳಲ್ಲಿ ಹೆಚ್ಚಿನವರು (ಶೇ.೫೮) ಯಾವುದೇ ರೀತಿಯ ಕೃಷಿ ಭೂಮಿಯನ್ನು ಹೊಂದಿಲ್ಲ, ಇದು ಯೋಜನೆಯಲ್ಲಿ ಆರ್ಥಿಕ ದುರ್ಬಲವರ್ಗದವರಿಗೆ ನೀಡಿದ ಆದ್ಯತೆಯನ್ನು ಸೂಚಿಸುತ್ತದೆ. ಅದರಲ್ಲೂ ಬೆಂಗಳೂರು (ಶೇ.೭೩) ಮತ್ತು ಬೆಳಗಾವಿ (ಶೇ.೬೦) ವಿಭಾಗಗಳಲ್ಲಿ ಕೃಷಿ ಭೂರಹಿತರ ಸಂಖ್ಯೆ ಹೆಚ್ಚಳವಿದೆ. ವರ್ಗ ೩ಬಿಯಲ್ಲಿ ಭೂರಹಿತ ಫಲಾನುಭವಿಗಳು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಕಲಬುರಗಿ ಮತ್ತು ಮೈಸೂರು ಪ್ರದೇಶಗಳಲ್ಲಿ ಫಲಾನುಭವಿಗಳು ಹೆಚ್ಚಿನ ಪ್ರಮಾಣದ (ಶೇಕಡ ೭೫ ರಿಂದ ೮೦) ಖುಷ್ಕಿ/ಒಣ ಕೃಷಿ ಭೂಮಿಯನ್ನು ಹೊಂದಿರುವುದನ್ನು ಈ ವರದಿಯು ಬಹಿರಂಗಪಡಿಸುತ್ತದೆ. ಒಣಭೂಮಿಯು ಯಾವುದೇ ರೀತಿಯ ಖಚಿತ ಆದಾಯವನ್ನು ಧೃಢೀಕರಿಸುವುದಿಲ್ಲ ಹಾಗಾಗಿ ಈ ವಲಯದ ಜನರಿಗೆ ದುರ್ಬಲ ವರ್ಗದ ಗುಂಪಿನಿಂದ ವಿನಾಯಿತಿ ನೀಡುವ ಅಗತ್ಯವಿಲ್ಲ.

೮. ಫಲಾನುಭವಿಗಳ ಅತಿದೊಡ್ಡ ಭಾಗ (ಶೇ.೬೩.೨) ಅನುದಾನ ರಹಿತ ಖಾಸಗಿ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವುದು ಕಂಡುಬಂದಿದೆ. ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ವಲಯದ ಪ್ರಾಧಾನ್ಯತೆಯೇ ಹೆಚ್ಚು ಎಂಬ ಅಂಶವನ್ನು ಪರಿಗಣಿಸಿದಾಗ ಈ ಪ್ರವೃತ್ತಿ ನಿರೀಕ್ಷಿತ. ಇದಲ್ಲದೇ ಕಾಲೇಜಿನ ಆಯ್ಕೆ ವಿದ್ಯಾರ್ಥಿಯ ಸಿಇಟಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಅದಾಗ್ಯೂ ಈ ವಿದ್ಯಮಾನವು ಗಮನಾರ್ಹವಾಗಿದೆ ಮತ್ತು ಈ ಪ್ರವೃತ್ತಿಯನ್ನು ಸುಗಮಗೊಳಿಸುವ ಅರಿವು ಕಾರ್ಯಕ್ರಮವು ಇನ್ನಷ್ಟು ಭರವಸೆಯಿಂದ ಕೂಡಿದೆ.

೯. ಕೋಲಾರ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಹೊರತುಪಡಿಸಿ ಸಾಮಾನ್ಯವಾಗಿ ಎಲ್ಲಾ ಫಲಾನುಭವಿಗಳು ಸಹ ಸಾಲ ಪಾವತಿ ವಿಧಾನ, ಸುಲಭ ಲಭ್ಯತೆ (ಶೇ.೮೨.) ಆನ್‌ಲೈನ್ ಅರ್ಜಿಯನ್ನು ಪಡೆಯುವ ಹಾಗೂ ಸಲ್ಲಿಸುವ ವಿಧಾನ (ಶೇ.೯೪) ಸಾಲವನ್ನು ಸಕಾಲಿಕವಾಗಿ ಬಿಡುಗಡೆ ಮಾಡುವುದು (ಶೇ.೮೭.೩) ಈ ಪ್ರಕ್ರಿಯೆಗಳ ಕುರಿತು ತೃಪ್ತಿ ಹೊಂದಿದ್ದಾರೆ. **ಅದಾಗ್ಯೂ ಹೆಚ್ಚಿನ ಜಿಲ್ಲೆಗಳಲ್ಲಿ ಕಾರ್ಯವಿಧಾನ (ಶೇ.೪೪.೩), ಜಾಮೀನು ನೀಡುವುದು ಮತ್ತು ಅಫಿಡವಿಟ್ ಸಲ್ಲಿಸುವುದು(ಶೇ.೩೨.೫) ಮತ್ತು ವಿವಿಧ ದಾಖಲೆಗಳನ್ನು ಸಲ್ಲಿಸುವುದು (ಶೇ.೨೮.೪) ಮುಂತಾದವುಗಳು ಸಾಲ ಪಡೆಯುವಲ್ಲಿ ಪ್ರಮುಖ ತೊಡಕುಗಳಾಗಿವೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.**

೧೦. ಫಲಾನುಭವಿಗಳಲ್ಲಿ ಹೆಚ್ಚಿನವರು (ಶೇ.೯೪.೫೧) ಅರಿವು ಸಾಲವನ್ನು ಶಿಕ್ಷಣದ ಉದ್ದೇಶಕ್ಕಾಗಿ ಮಾತ್ರ ಬಳಸಲಾಗುತ್ತಿದೆ ಎನ್ನುತ್ತಾರೆ. ಸಾಲವು ಅವರ ಹಣಕಾಸಿನ ತೊಂದರೆಗಳನ್ನು ಮತ್ತು ಮನೆಯ ಹೊರೆಯನ್ನು ತಗ್ಗಿಸುವುದರ ಹೊರತಾಗಿ, ಯಾವುದೇ ಅಡೆತಡೆಗಳಿಲ್ಲದೇ ತಮ್ಮ ಆಯ್ಕೆಯ ಕಾಲೇಜುಗಳಲ್ಲಿ ಉನ್ನತ ಶಿಕ್ಷಣವನ್ನು ಪೂರ್ಣಗೊಳಿಸಲು ಮತ್ತು ಆರ್ಥಿಕ ಮತ್ತು ಸಾಮಾಜಿಕ ಚಲನಶೀಲತೆಗೆ ದಾರಿ ಮಾಡಿಕೊಟ್ಟಿದೆ. **ಇದರೊಂದಿಗೆ ಶೇ.೯೬.೬ ಕ್ಕಿಂತಲೂ ಹೆಚ್ಚು ಫಲಾನುಭವಿಗಳು ತಮ್ಮ ಆತ್ಮವಿಶ್ವಾಸ ಮತ್ತು ಸಮಾಧಾನವನ್ನು ಹೆಚ್ಚಿಸುವಲ್ಲಿ ಅರಿವು ಕಾರ್ಯಕ್ರಮದ ಪಾತ್ರ ಹಿರಿದು ಎಂಬುದನ್ನು ಸಮ್ಮತಿಸುತ್ತಾರೆ. ಸಾಲದ ಮೊತ್ತವು ದೊಡ್ಡ ಪ್ರಮಾಣದಲ್ಲಿದ್ದರೂ, ವೈದ್ಯಕೀಯ ವಿದ್ಯಾರ್ಥಿಗಳು ಭರಿಸುವ ಖರ್ಚಿಗೆ ಅದು ಸರಿ ಹೊಂದುತ್ತಿಲ್ಲ. ಹಾಗಾಗಿ ವೈದ್ಯಕೀಯ ವಿಭಾಗದ**

ವಿದ್ಯಾರ್ಥಿಗಳಿಗಿರುವ ಅಧಿಕ ಖರ್ಚು ವೆಚ್ಚಗಳನ್ನು ಗಮನದಲ್ಲಿಟ್ಟುಕೊಂಡು ಸಾಲದ ಪ್ರಮಾಣವನ್ನು ವರ್ಧಿಸುವ ಅಗತ್ಯವಿದೆ.

೧೧. ಅರಿವು ಕಾರ್ಯಕ್ರಮದ ಸಕಾರಾತ್ಮಕ ಪ್ರಭಾವವನ್ನು ಸೂಚಿಸುವ ಪ್ರೋತ್ಸಾಹದಾಯಕ ಲಕ್ಷಣವೆಂದರೆ ಕೋರ್ಸ್ ಪೂರ್ಣಗೊಳಿಸುವಿಕೆಯ ಅನುಪಾತವು ಶೇಕಡ ೪೬.೫ ರಷ್ಟಿರುವುದು. ಇದರಲ್ಲಿ ಹೆಚ್ಚಿನ ಪ್ರಮಾಣವನ್ನು ಸ್ನಾತಕೋತ್ತರ ಪದವಿಗಳಲ್ಲಿ (ಶೇ.೮೨.೮) ಮತ್ತು ಬಿಇ ಕೋರ್ಸ್ (ಶೇ.೪೬.೩) ಗಳಲ್ಲಿ ಗಮನಿಸಬಹುದು. ಕೋರ್ಸ್ ಪೂರ್ಣಗೊಳಿಸುವಿಕೆಯ ವಿಥಯದಲ್ಲಿ ಈ ಕಾರ್ಯಕ್ರಮವು ವರ್ಗ IIಎ ಫಲಾನುಭವಿಗಳ ಮೇಲೆ ಸಂಪೂರ್ಣ ಸಕಾರಾತ್ಮಕ ಪರಿಣಾಮವನ್ನು ಬೀರಿದೆ. ಆದರೆ ವರ್ಗ IIIಬಿ ಯ ಮೇಲೆ ಕಾರ್ಯಕ್ರಮವು ಇದೇ ಪರಿಣಾಮವನ್ನು ಬೀರುವಲ್ಲಿ ವಿಫಲವಾಗಿದೆ. ಇದರೊಂದಿಗೆ ಈ ವರ್ಗಕ್ಕೆ ಸೇರಿದವರಲ್ಲಿ ಕೋರ್ಸ್‌ನ್ನು ಅರ್ಧಕ್ಕೆ ಬಿಟ್ಟವರು ಹೆಚ್ಚಿದ್ದಾರೆ. ಕೋರ್ಸ್‌ನ್ನು ಪೂರ್ಣಗೊಳಿಸದೆ ಹೊರಗುಳಿಯುವ ೨೩ ಮಂದಿಯಲ್ಲಿ ೧೪ ಮಂದಿ ಈ ವರ್ಗಕ್ಕೆ ಸೇರಿದವರಾಗಿದ್ದಾರೆ. ಮೈಸೂರು ವಿಭಾಗವು ಕೋರ್ಸ್ ಪೂರ್ಣಗೊಳಿಸುವಿಕೆಯ ಅನುಪಾತಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸಕಾರಾತ್ಮಕ ಪರಿಣಾಮಗಳನ್ನು ಬಹಿರಂಗಪಡಿಸುತ್ತದೆ.

೧೨. ಒಟ್ಟಾರೆಯಾಗಿ, ಈ ಕೋರ್ಸ್ ಪೂರ್ಣಗೊಳಿಸುವಿಕೆಯ ಅನುಪಾತವು ಹುಡುಗರು ಹಾಗೂ ಹುಡುಗಿಯರಲ್ಲಿ ಬಹುತೇಕ ಸಮನಾಗಿದೆ. ಅದಾಗ್ಯೂ ಪ್ರಾದೇಶಿಕ ಆಯಾಮವನ್ನು ಸೇರಿಸಿದಾಗ ಭಿನ್ನ ಮಾದರಿಗಳು ಹೊರಹೊಮ್ಮುತ್ತವೆ. ಕೋಲಾರ ಮತ್ತು ಕೊಡಗು ಜಿಲ್ಲೆಗಳಲ್ಲಿ ಪುರುಷ ವಿದ್ಯಾರ್ಥಿಗಳಿಗಿಂತ ಮಹಿಳಾ ವಿದ್ಯಾರ್ಥಿಗಳ ಮೇಲೆ ಕಾರ್ಯಕ್ರಮವು ಹೆಚ್ಚಿನ ಸಕಾರಾತ್ಮಕ ಪರಿಣಾಮವನ್ನು ಬೀರಿದೆ.

೧೩. ಉದ್ಯೋಗದ ಮೇಲೆ ಅರಿವು ಕಾರ್ಯಕ್ರಮ ಹೇಗೆ ಪ್ರಭಾವವನ್ನು ಬೀರಿದೆ ಎಂಬುದನ್ನು ವಿಶ್ಲೇಷಿಸಿದಾಗ ಉದ್ಯೋಗಿಗಳಿಗೆ (ಶೇ.೪೧.೫) ಹೋಲಿಸಿದರೆ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳು ನಿರುದ್ಯೋಗಿಗಳಾಗಿದ್ದಾರೆ (ಶೇ.೫೮.೧). ಅದರಲ್ಲಿಯೂ ವರ್ಗ IIಎ ಹೆಚ್ಚಿನ ಮಟ್ಟದ ನಿರುದ್ಯೋಗಿಗಳನ್ನು ಹೊಂದಿದೆ (ಶೇ.೬೦.೦). ಈ ವರ್ಗವು ಕಾರ್ಯಕ್ರಮದ ಲಾಭವನ್ನು ಹೆಚ್ಚಾಗಿ (ಶೇ.೫೪) ಪಡೆಯುವುದರಿಂದ ಈ ವರ್ಗದವರಲ್ಲಿಯೇ ನಿರುದ್ಯೋಗವೂ ಹೆಚ್ಚಾಗಿರುವುದು ಸಹಜವಾಗಿದೆ. ಕೋರ್ಸುಗಳಾದ್ಯಂತ, ಕಡಿಮೆ ಫಲಾನುಭವಿಗಳನ್ನು ಹೊಂದಿರುವ ಸಾಮಾನ್ಯ ಪದವಿ ಮತ್ತು ವೈದ್ಯಕೀಯ ಕಾರ್ಯಕ್ರಮವನ್ನು ಹೊರತುಪಡಿಸಿದರೆ ನಿರುದ್ಯೋಗಿಗಳ ಪ್ರಮಾಣ ಸ್ನಾತಕೋತ್ತರ ಫಲಾನುಭವಿಗಳಲ್ಲಿ (ಶೇ.೬೬) ಮತ್ತು ಇಂಜಿನಿಯರಿಂಗ್ (ಬಿಇ) ಪದವೀಧರ (ಶೇ.೫೭) ರಲ್ಲಿ ಹೆಚ್ಚಿದೆ. ಇದಲ್ಲದೇ ರಿಗ್ರೆಶನ್ ಅನಾಲಿಸಿಸ್ ಪ್ರಕಾರ ಈ ಕಾರ್ಯಕ್ರಮವು ಬೆಂಗಳೂರು ವಿಭಾಗದ ಫಲಾನುಭವಿಗಳು, ಪುರುಷ ಫಲಾನುಭವಿಗಳು ಮತ್ತು ಸರ್ಕಾರಿ ಕಾಲೇಜುಗಳ ಫಲಾನುಭವಿಗಳ ಮೇಲೆ ಗಮನಾರ್ಹ ಪ್ರಭಾವ ಬೀರುತ್ತದೆ. ಸಹಜವೆಂಬಂತೆ, ಸಾಲದ ಮರುಪಾವತಿ ನಡವಳಿಕೆಯು ಉದ್ಯೋಗದ ಸ್ಥಿತಿಗತಿಯೊಂದಿಗೆ ನಿರ್ಧರಿತವಾಗಿರುವುದು ಕಂಡುಬರುತ್ತದೆ.

೧೪. ಈ ಅಧ್ಯಯನದ ಮಾದರಿಯಲ್ಲಿ ಎಂಜಿನಿಯರಿಂಗ್ ಪದವೀಧರರು ಪ್ರಮುಖ ಭಾಗವಾಗಿರುವುದರಿಂದ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳು ಎಂಜಿನಿಯರಿಂಗ್ ಉದ್ಯೋಗಗಳನ್ನು ಹೊಂದಿದ್ದಾರೆ ಮತ್ತು ಅದರಲ್ಲಿ ಹೆಚ್ಚಿನವರು (ಶೇ.೫೬.೮೪) ಬೆಂಗಳೂರಿನಲ್ಲಿ ಮತ್ತು ಕರ್ನಾಟಕದೊಳಗೆ (ಶೇ.೩೫.೯) ಕೆಲಸ ಮಾಡುತ್ತಿದ್ದಾರೆ.

೧೫. ಹೆಚ್ಚಿನ ಸಂಖ್ಯೆಯ ಅಂದರೆ ಶೇಕಡಾ ೪೮ ಪ್ರಮಾಣದ ಇಂಜಿನಿಯರಿಂಗ್ ಉದ್ಯೋಗದಲ್ಲಿರುವ ಫಲಾನುಭವಿಗಳ ಮಾಸಿಕ ಆದಾಯ ರೂ. ೧೫,೦೦೦ ದಿಂದ ೨೫,೦೦೦ ದವರೆಗಿದೆ. ಜಿಲ್ಲೆಯಿಂದ ಜಿಲ್ಲೆಗೆ ವೇತನ ರೂಪುರೇಷೆಗಳು ಬದಲಾಗುತ್ತಿರುವಂತೆ ಗೋಚರಿಸುತ್ತಿದೆ.

೧೬. ವಿದ್ಯಾರ್ಥಿ ಫಲಾನುಭವಿಗಳು ವರದಿ ಮಾಡುವ ವಾರ್ಷಿಕ ಖರ್ಚು ಜಿಲ್ಲೆಯಿಂದ ಜಿಲ್ಲೆಗೆ ರೂ.೧.೦ ಲಕ್ಷದಿಂದ ರೂ.೪.೦ ಲಕ್ಷದವರೆಗೆ ಬದಲಾಗುತ್ತಾ ಹೋಗುತ್ತದೆ. ಅಲ್ಲದೆ, ಸಿಇಟಿ ಮತ್ತು ಸಿಇಟಿಯೇತರ ವಿದ್ಯಾರ್ಥಿಗಳ ಖರ್ಚುಗಳ ನಡುವೆಯೂ ವ್ಯತ್ಯಾಸವಿದೆ. ಒಟ್ಟಾರೆ, ಸಿಇಟಿ ಫಲಾನುಭವಿಯು ಅಧ್ಯಯನದ ಅವಧಿಯಲ್ಲಿ ಪ್ರತಿವರ್ಷ ರೂ.೩೮,೯೨೯.೮೫ ಖರ್ಚನ್ನು ತಾನೇ ಸ್ವತಃ ಭರಿಸಬೇಕಾಗುತ್ತದೆ. ಈ ಖರ್ಚಿನ ಅಂತರವು ರೂ.೨೫ ಸಾವಿರಕ್ಕಿಂತ ಕಡಿಮೆ ಮತ್ತು ರೂ. ೯೭ ಸಾವಿರದಷ್ಟು ಹೆಚ್ಚೂ ಇರಬಹುದು. ಆಸಕ್ತಿದಾಯಕ ಸಂಗತಿಯೆಂದರೆ ಶಿವಮೊಗ್ಗ ಜಿಲ್ಲೆಯು ಪಡೆದ ಸಾಲಕ್ಕೆ ಹೋಲಿಸಿದರೆ ಕಡಿಮೆ ಖರ್ಚನ್ನು ದಾಖಲಿಸಿದೆ.

೧೭. ಒಟ್ಟು ಅರ್ಹ ೫೭೯ ಫಲಾನುಭವಿಗಳಲ್ಲಿ ಕೇವಲ ೧೦೧ ಮಂದಿ ಮಾತ್ರ ಸಾಲವನ್ನು ಮರುಪಾವತಿಸಿದ್ದಾರೆ, ಎಂದರೆ ಸಾಲ ಮರುಪಾವತಿಯ ದರ ಶೇಕಡ ೧೮.೪ ರಷ್ಟಿದೆ. ಜಿಲ್ಲೆಗಳಲ್ಲಿ ಹಾಸನ ಮತ್ತು ಬಳ್ಳಾರಿ ತುಲನಾತ್ಮಕವಾಗಿ ಉತ್ತಮ ಕಾರ್ಯಕ್ಷಮತೆಯನ್ನು ಹೊಂದಿರುವುದು ಕಂಡುಬರುತ್ತದೆ. ಆದರೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಈ ಪ್ರಮಾಣ ತುಂಬಾ ಕಡಿಮೆ ಇದೆ (ಶೇ.೧.೪೯). ವಿವಿಧ ವರ್ಗಗಳನ್ನು ಹೋಲಿಕೆ ಮಾಡಿದಲ್ಲಿ ವರ್ಗ IIIಬಿ ಫಲಾನುಭವಿಗಳಲ್ಲಿ ಸಾಲ ಮರುಪಾವತಿಯು ಉತ್ತಮವಾಗಿದೆ. ಅವರಲ್ಲಿ ಶೇ.೩೦ ಪ್ರತಿಶತದಷ್ಟು ಜನರು ಸಾಲವನ್ನು ಮರುಪಾವತಿಸುತ್ತಿದ್ದಾರೆ. ವರ್ಗ IIಎ ದವರು ಅರಿವು ಕಾರ್ಯಕ್ರಮದ ಅತಿದೊಡ್ಡ ಫಲಾನುಭವಿಗಳಾಗಿದ್ದರೂ ಸಹ ವರ್ಗ೧ ಮತ್ತು ವರ್ಗ IIಎ ಫಲಾನುಭವಿಗಳಲ್ಲಿ ಮರುಪಾವತಿಯ ಪ್ರಮಾಣ ಕಡಿಮೆ ಇರುವುದನ್ನು ಕಾಣಬಹುದಾಗಿದೆ. ಇತರ ಮೂಲಗಳಿಂದ ಸಾಲ ಪಡೆಯುವ ಪ್ರಮಾಣ ನಗಣ್ಯವಾಗಿದೆ.

ಶಿಫಾರಸ್ಸುಗಳು

೧. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಉಪಯುಕ್ತತೆ ಮತ್ತು ಹೆಚ್ಚಿನ ಲಾಭವನ್ನು ಪರಿಗಣಿಸಿ **ಅರಿವು ಕಾರ್ಯಕ್ರಮವನ್ನು ಮುಂದುವರೆಸಬಹುದಾಗಿದೆ. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಸಾಮಾನ್ಯ ಪದವಿ ಶಿಕ್ಷಣ ಕಾರ್ಯಕ್ರಮ ಪಡೆಯುವಲ್ಲಿ ನೆರವಾಗುವಂತೆ ಈ ಯೋಜನೆಯನ್ನು ಮತ್ತಷ್ಟು ವಿಸ್ತರಿಸಬಹುದು.**

೨. ನಿರ್ದಿಷ್ಟ ಹಿಂದುಳಿದ ಸಮುದಾಯಗಳಾದ ಅಲೆಮಾರಿ ಮತ್ತು ಅರೆ ಅಲೆಮಾರಿ, ಸವಿತಾ, ಕುಂಬಾರ, ತಿಗಳ, ಉಪ್ಪಾರ ಸಮುದಾಯಗಳಿಗೆ ಈ ಯೋಜನೆಯು ವ್ಯಾಪ್ತಿ ಮತ್ತು ಗುರಿಗಳನ್ನು ಹೊಂದಿಲ್ಲ. **ಈ ಅತ್ಯಂತ ದುರ್ಬಲ ಸಮುದಾಯಗಳ ಮನೆಗಳನ್ನು ಅದರಲ್ಲೂ ವಿಶೇಷವಾಗಿ ಮೊದಲ ತಲೆಮಾರಿನ ಕುಟುಂಬಗಳು. ತಲುಪಲು ವಿನ್ಯಾಸಗೊಳಿಸಲಾಗಿರುವ ಕಾರ್ಯಕ್ರಮದ ವಿಧಾನವನ್ನು ರಾಜ್ಯವು ಗಂಭೀರವಾಗಿ ಪರಿಶೀಲಿಸುವ ಅಗತ್ಯವಿದೆ.**

೩. ಅರಿವು ಕಾರ್ಯಕ್ರಮದಲ್ಲಿ ಹುಡುಗಿಯರ ಪ್ರಾತಿನಿಧ್ಯ ಕಡಿಮೆ ಇರುವುದನ್ನು ಪರಿಗಣಿಸಿ ಯೋಜನೆಯಲ್ಲಿ **ಹೆಣ್ಣುಮಕ್ಕಳಿಗೆ ಅದರಲ್ಲೂ ವಿಶೇಷವಾಗಿ ಹಿಂದುಳಿದ ಪ್ರದೇಶಗಳಲ್ಲಿನ ಹೆಣುಮಕ್ಕಳಿಗೆ ಶೇಕಡ ೩೦ ರಷ್ಟು ಆದ್ಯತೆ ನೀಡುವುದನ್ನು ಶಿಫಾರಸ್ಸು ಮಾಡಲಾಗಿದೆ.**

೪. ಈ ಕಾರ್ಯಕ್ರಮದಿಂದ ನಗರ ಮತ್ತು ಅರೆ ನಗರದ ಫಲಾನುಭವಿಗಳಿಗೆ ಹೆಚ್ಚಾಗಿ ಅನುಕೂಲವಾಗಿರುವುದು ಕಂಡು ಬರುತ್ತದೆ. ಆದ್ದರಿಂದ **ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಕಾರ್ಯಕ್ರಮದ ಗುರಿ ಮತ್ತು ವ್ಯಾಪ್ತಿಯನ್ನು ಹೆಚ್ಚಿಸಿ ಅವರನ್ನು ನಗರ ವಲಯಗಳಿಗೆ ಸಮನಾಗಿ ತರಲು ಅಧ್ಯಯನವು ಶಿಫಾರಸ್ಸು ಮಾಡುತ್ತದೆ.**

೫. ಒಟ್ಟಾರೆಯಾಗಿ ಕಾರ್ಯಕ್ರಮದ ವ್ಯಾಪ್ತಿ ಮತ್ತು ಲಭ್ಯತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಕಾರ್ಯಕ್ರಮದ ಗುರಿ ಮತ್ತು ಹಂಚಿಕೆಯನ್ನು ನಿಗದಿಗೊಳಿಸುವಲ್ಲಿ ಸೂಕ್ತ ಕಾರಣಗಳನ್ನು ನೀಡುವುದರೊಂದಿಗೆ **ಕಾರ್ಯವಿಧಾನವನ್ನು ಸುಧಾರಿಸುವ ಅಗತ್ಯವಿದೆ. ಫಲಾನುಭವಿಗಳ ಆಯ್ಕೆ ನಿಷ್ಪಕ್ಷಪಾತ ಮತ್ತು ಪಾರದರ್ಶಕವಾಗಿರಲು ಜಿಲ್ಲಾ ಕೇಂದ್ರಿತವಾದ ಕಾರ್ಯತಂತ್ರಗಳನ್ನು ರೂಪಿಸಬಹುದು.**

೬. ಕಾಲಾನಂತರದಲ್ಲಿ ಯಾವುದೇ ಕಾರ್ಯಕ್ರಮದ ಪ್ರಗತಿ ಮತ್ತು ಪ್ರಭಾವವನ್ನು ಪತ್ತೆಹಚ್ಚಲು ಮಾನದಂಡಗಳ ದತ್ತಾಂಶ ವ್ಯವಸ್ಥೆ ಮತ್ತು ಸರಿಯಾದ ಬೇಸ್‌ಲೈನ್ ಡೇಟಾಸೆಟ್‌ಗಳನ್ನು ಅಭಿವೃದ್ಧಿಪಡಿಸುವ ಅವಶ್ಯಕತೆಯಿದೆ. ಇಂತಹ ವ್ಯವಸ್ಥೆಯ ಸರ್ಕಾರಗಳಿಗೆ ಸಾರ್ವಜನಿಕ ಸಂಪನ್ಮೂಲಗಳಲ್ಲಿ ಹೂಡಿಕೆಗಳನ್ನು ಸಮರ್ಥಿಸಲು ಹಾಗೂ ವಿವಿಧ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಅನುವು ಮಾಡಿಕೊಡುತ್ತದೆ. **ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸಂಖ್ಯಾಶಾಸ್ತ್ರೀಯ ಘಟಕವೊಂದನ್ನು ಆರಂಭಿಸಬಹುದು. ಇದನ್ನು ಸಂಖ್ಯಾಶಾಸ್ತ್ರೀಯ ದತ್ತಸಂಚಯವನ್ನು ಉತ್ಪಾದಿಸಲು ಮಾತ್ರವಲ್ಲದೇ ವಿವಿಧ ಶಿಕ್ಷಣ ಕಾರ್ಯಕ್ರಮಗಳ ಸರಿಯಾದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೂ ಪರಿಗಣಿಸಬಹುದು ಎಂದು ಶಿಫಾರಸ್ಸು ಮಾಡಲಾಗಿದೆ.**

೭. ಫಲಾನುಭವಿಗಳು ಜಾಮೀನು, ಅಫಿಡವಿಟ್‌ಗಳು ಮತ್ತು ಇತರ ಹಲವಾರು ದಾಖಲೆಗಳನ್ನು ಒದಗಿಸುವಲ್ಲಿನ ತೊಂದರೆಗಳ ಬಗ್ಗೆ ಮಾಹಿತಿ ನೀಡಿರುವುದನ್ನು ಪರಿಗಣಿಸಿ ಇಲಾಖೆಯು ಕೆಲವು ಕಾರ್ಯವಿಧಾನಗಳನ್ನು ಸುವ್ಯವಸ್ಥಿತಗೊಳಿಸುವುದು ಮತ್ತು ಸರಳೀಕರಿಸುವುದು ಅವಶ್ಯಕವಾಗಿದೆ. **ಆದ್ದರಿಂದ ಖಾತರಿ/ಸಾಕ್ಷಿಗಳನ್ನು ಒದಗಿಸಬೇಕಾಗಿರುವ ಪ್ರಸ್ತುತ ವ್ಯವಸ್ಥೆಯನ್ನು, ಫಲಾನುಭವಿಗಳ ಸ್ವಂತ ಕುಟುಂಬವು ಒದಗಿಸುವ ಪರ್ಯಾಯ ಅಧಿಕೃತ ಪುರಾವೆ ವ್ಯವಸ್ಥೆಗೆ ಬದಲಾಯಿಸುವುದು ಸೂಕ್ತವೆನಿಸುತ್ತದೆ ಎಂದು ಶಿಫಾರಸ್ಸು ಮಾಡಲಾಗಿದೆ.**

೮. ಕೆಲವು ಕೋರ್ಸುಗಳಲ್ಲಿ ಫಲಾನುಭವಿಗಳಿಗೆ ತಗುಲುವ ಹೆಚ್ಚಿನ ಖರ್ಚಿನ ದೃಷ್ಟಿಯಿಂದ **ಪ್ರಸ್ತುತ ಶಿಕ್ಷಣದ ಸಾಲದ ಮೊತ್ತವನ್ನು ವೈದ್ಯಕೀಯ ಶಿಕ್ಷಣ ಕೋರ್ಸುಗಳಿಗೆ ವಾರ್ಷಿಕವಾಗಿ ೨.೦ ಲಕ್ಷಕ್ಕೆ ಹೆಚ್ಚಿಸುವುದು ವಿದ್ಯಾರ್ಥಿಗಳಿಗೆ ಅನುಕೂಲಕರವಾಗಲಿದೆ.**

೯. ಫಲಾನುಭವಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಾಲವನ್ನು ಪಾವತಿಸದಿರುವುದು ಗಂಭೀರ ವಿಷಯವಾಗಿದೆ. ಇದಕ್ಕೆ ನಿರುದ್ಯೋಗವು ಪ್ರಮುಖ ಅಂಶವೆಂದು ತೋರುತ್ತದೆಯಾದರೂ, ಉದ್ಯೋಗ ಹೊಂದಿದ ಫಲಾನುಭವಿಗಳಲ್ಲಿಯೂ ಸಹ ಮರುಪಾವತಿ ಮಾಡದ ಉದಾಹರಣೆಗಳಿವೆ. ಕೆಲವು ವಿದ್ಯಾರ್ಥಿಗಳು ಹಣಕಾಸಿನ ಅಡಚಣೆಯನ್ನು ಎದುರಿಸುತ್ತಾರೆ ಮತ್ತು ಸಾಲ ಮರುಪಾವತಿಗೆ ನಿಜವಾದ ಕಾರಣಗಳನ್ನು ಹೊಂದಿದ್ದಾರೆ ಎಂಬ ಅಂಶವನ್ನು ಪರಿಗಣಿಸಿ, **ಸಾಲ ಮರುಪಡೆಯುವಿಕೆಗಾಗಿ ಕಾಯುವ ಅವಧಿಯನ್ನು ಉದ್ಯೋಗವನ್ನು ಬಯಸುವವರಿಗೆ ಅನುವು ಮಾಡಿಕೊಡಲು ವಿಸ್ತರಿಸಬಹುದಾಗಿದೆ. ಪರ್ಯಾಯವಾಗಿ ಗಂಭೀರ ಸಮಸ್ಯೆಗಳನ್ನು/ಅಡಚಣೆಗಳನ್ನು**

ಅನುಭವಿಸುವವರಿಂದ ಸಾಲವನ್ನು ಹಿಂಪಡೆಯಲು ಈಗಾಗಲೇ ವಿಧಿಸಿರುವ ಬಡ್ಡಿಯ ದರವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಪರಿಶೀಲಿಸಬಹುದು. ಮತ್ತೊಂದೆಡೆ ಈಗಾಗಲೇ ಉದ್ಯೋಗದಲ್ಲಿರುವವರಿಂದ ಸಾಲ ಮರುಪಡೆಯುವಿಕೆ ಕಷ್ಟವಾಗುತ್ತಿದ್ದಲ್ಲಿ ಕೆಲವು ಗಂಭೀರ ಶಿಸ್ತು ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

೧೦. ಕಾರ್ಯಕ್ರಮದ ಪರಿಶೀಲನೆ ಮತ್ತು ಸಾಲ ಜಮಾ ವಿವರಗಳನ್ನು ತೆಗೆದುಕೊಳ್ಳಲು ಇಲಾಖೆಯ ದುರ್ಬಲ ಮೇಲ್ವಿಚಾರಣಾ ವ್ಯವಸ್ಥೆಯನ್ನು ಹೊಂದಿರುವುದು ಗಮನಕ್ಕೆ ಬಂದಿದೆ. **ಆದ್ದರಿಂದ ಡಿಜಿಟಲ್ ಸಾಫ್ಟ್‌ವೇರ್ ವ್ಯವಸ್ಥೆಯ ಮೂಲಕ ಸಾಲದ ಫಲಾನುಭವಿಗಳನ್ನು ಪತ್ತೆಹಚ್ಚುವ ಮತ್ತು ದಾಖಲೆಗಳನ್ನು ಸಂಗ್ರಹಿಸುವ ಕೆಲಸವನ್ನು ಇಲಾಖೆಯು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸಬೇಕು ಎಂದು ಬಲವಾಗಿ ಶಿಫಾರಸ್ಸು ಮಾಡಲಾಗಿದೆ.**

೧೧. **ಫಲಾನುಭವಿಯು ಕಾಲೇಜಿನ ಮೊದಲ ಸೆಮಿಸ್ಟರ್/ವರ್ಷದಲ್ಲಿ ಅಭ್ಯಸಿಸುತ್ತಿರುವಾಗ ಸಾಲದ ಮೊತ್ತವನ್ನು ನೇರವಾಗಿ ಕಾಲೇಜಿಗೆ ನೀಡಬಹುದು.** ಎರಡನೇ ವರ್ಷದಿಂದ ಕಾಲೇಜು ಶುಲ್ಕವನ್ನು ಪಾವತಿಸುವ ಸಮಯದಲ್ಲಿ ಇದನ್ನು ನೀಡಬಹುದು. ಇದು ಶುಲ್ಕದ ಮೊತ್ತವನ್ನು ಒಟ್ಟುಗೂಡಿಸುವಲ್ಲಿ ವಿದ್ಯಾರ್ಥಿಗಳ ಪೋಷಕರ ಮೇಲಿನ ಹೊರೆ ಕಡಿಮೆ ಮಾಡುತ್ತದೆ.

೧೨. ಹಿಂದುಳಿದ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಮೈಸೂರು ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮಾಹಿತಿಯನ್ನು ಪ್ರಚಾರಮಾಡಲು ಕಾರ್ಯತಂತ್ರಗಳನ್ನು ರೂಪಿಸುವ ಅಗತ್ಯವಿದೆ. ಅಂತೆಯೇ, ಈ ಹಿಂದುಳಿದ ಜಿಲ್ಲೆಗಳಲ್ಲಿ ಯೋಜನೆಯ ವ್ಯಾಪ್ತಿ ಹೆಚ್ಚಿಸಲು ಮತ್ತು ಹೆಚ್ಚು ಜನರನ್ನು ತಲುಪಲು ಅರಿವು ಯೋಜನೆ ಕುರಿತಂತೆ ಜಾಗೃತಿ ಮೂಡಿಸುವ ಮತ್ತು ಆಡಳಿತಾತ್ಮಕ ಬೆಂಬಲ ವ್ಯವಸ್ಥೆಯನ್ನು ಬಲಗೊಳಿಸುವ ಕಾರ್ಯಗಳನ್ನು ಕೈಗೊಳ್ಳಬಹುದು.

೧೩. ವಿವಿಧೆಡೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಪರಿಣಾಮ ಬೀರುವ ಪ್ರದೇಶ ಸೀಮಿತ (ರೀಜನ್ ಸ್ಪೆಸಿಫಿಕ್) ಅಂಶಗಳನ್ನು ಗುರುತಿಸಲು ಮತ್ತು ಅರ್ಥಮಾಡಿಕೊಳ್ಳಲು ಪ್ರಕರಣ ಅಧ್ಯಯನಗಳಲ್ಲಿ ಹೆಚ್ಚಿನ ಸಂಶೋಧನೆ ಮಾಡಬಹುದು.

ಅಧ್ಯಾಯ 1 – ಪರಿಚಯ

ಮುಂದಿನ ಕೆಲವು ದಶಕಗಳಲ್ಲಿ ನಿರೀಕ್ಷಿತವಾಗಿರುವ ಜನಸಂಖ್ಯೆಯ ಹೆಚ್ಚಳವನ್ನು ಗಮನದಲ್ಲಿಟ್ಟುಕೊಂಡು ಅದರ ಲಾಭಾಂಶಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಭಾರತೀಯ ಆರ್ಥಿಕತೆಯು ಸ್ಪರ್ಧೆಗೆ ಸನ್ನದ್ಧವಾಗುತ್ತಿದೆ. ಆದ್ದರಿಂದ ಹೆಚ್ಚಿನ ಉತ್ಪಾದಕತೆ ಮತ್ತು ದಕ್ಷತೆಗಾಗಿ ಮಾನವನ ಸಾಮರ್ಥ್ಯಗಳ ಗುಣಮಟ್ಟವನ್ನು ಸುಧಾರಿಸುವುದು ದೇಶದ ಮೊದಲ ಆದ್ಯತೆಯ ಅಭಿವೃದ್ಧಿ ಕಾರ್ಯಸೂಚಿಯಾಗಿ ಹೊರಹೊಮ್ಮಿದೆ. ಭಾರತದ ಮಾನವ ಸಂಪನ್ಮೂಲದ ಸಾಮರ್ಥ್ಯವನ್ನು ಉನ್ನತ ಶಿಕ್ಷಣ ಕ್ಷೇತ್ರದ ಮೂಲಕ ಸಂಪೂರ್ಣವಾಗಿ ಅರಿತುಕೊಳ್ಳುವ ಮತ್ತು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅರ್ಹತೆ ಇರುವ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ಅದರಲ್ಲೂ ವಿಶೇಷವಾಗಿ ದುರ್ಬಲ ವರ್ಗದವರಿಗೆ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಅವಕಾಶಗಳನ್ನು ಒದಗಿಸುವ ಧ್ಯೇಯದೊಂದಿಗೆ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಗಮನಾರ್ಹ ಉತ್ತೇಜನವನ್ನು ನೀಡಲಾಗಿದೆ. ಉನ್ನತ ಶಿಕ್ಷಣ ಕ್ಷೇತ್ರವು ತನ್ನ ವಿಸ್ತರಣೆ ಮತ್ತು ಗುಣಾತ್ಮಕ ಸುಧಾರಣೆಗಳನ್ನು ಗಮನದಲ್ಲಿಟ್ಟುಕೊಂಡು ೨೦೨೦ ರ ಅಂತ್ಯದ ವೇಳೆಗೆ ಒಟ್ಟು ಪ್ರವೇಶಾತಿ ಅನುಪಾತವನ್ನು ಶೇ.೩೦ ಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಿದೆ (ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ, ೨೦೧೯). ಭಾರತ ಸರ್ಕಾರ ಇತ್ತೀಚಿಗೆ ಬಿಡುಗಡೆಗೊಳಿಸಿರುವ ಶಿಕ್ಷಣದ ಗುಣಮಟ್ಟ ಸುಧಾರಣೆ ಮತ್ತು ಸೇರ್ಪಡೆ/ಒಳಗೊಳ್ಳುವಿಕೆ ಕಾರ್ಯಕ್ರಮ (ಇಕ್ಯೂಐಐಪಿ) ವನ್ನು ಒಳಗೊಂಡ ೫ ವರ್ಷದ ದೂರ ದೃಷ್ಟಿಕೋನ (ವಿಶನ್) ದಂತೆ, ಯೋಜನೆಯ ಪ್ರಮುಖ ಗಮನ ಸೆಳೆಯುವ ಪ್ರದೇಶವೆಂದರೆ ಒಟ್ಟು ಪ್ರವೇಶಾತಿ ಪ್ರಮಾಣವನ್ನು ದ್ವಿಗುಣಗೊಳಿಸುವುದು ಮತ್ತು ಉನ್ನತ ಶಿಕ್ಷಣಕ್ಕೆ ಪ್ರವೇಶಾತಿ ಪಡೆಯುವ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಭೌಗೋಳಿಕವಾಗಿ ಮತ್ತು ಸಾಮಾಜಿಕವಾಗಿ ಇರುವ ಅಸಮಾನತೆಯನ್ನು ಪರಿಹರಿಸುವುದು. ಈ ಸಂಸ್ಥೆಗಳಿಂದ ಹೊರಹೋಗುವ ವಿದ್ಯಾರ್ಥಿಗಳ ಉದ್ಯಮಶೀಲತೆಯನ್ನು ದ್ವಿಗುಣಗೊಳಿಸುವ ಅಂಶವೂ ಇದರೊಂದಿಗೆ ಸೇರಿದೆ.

ಕರ್ನಾಟಕ ರಾಜ್ಯವು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅದ್ಭುತ ಬೆಳವಣಿಗೆಯೊಂದಿಗೆ ಭರವಸೆಯನ್ನೂ ನೀಡುತ್ತಿದೆ. ಉನ್ನತ ಶಿಕ್ಷಣದಲ್ಲಿ ಮುಂಚೂಣಿಯಲ್ಲಿರುವ ಈ ರಾಜ್ಯವು ೨೦೨೦ ರ ವೇಳೆಗೆ ಈಗಾಗಲೇ ರಾಷ್ಟ್ರಮಟ್ಟದ ಸರಾಸರಿಗಿಂತ ಹೆಚ್ಚಿಗೆ ಹೊಂದಿರುವ ಒಟ್ಟು ಪ್ರವೇಶಾತಿ ಪ್ರಮಾಣ ಶೇ.೨೫ಯನ್ನು (ಕರ್ನಾಟಕ ಜ್ಞಾನ ಆಯೋಗ ಕರ್ನಾಟಕ ಸರ್ಕಾರ ೨೦೧೨) ಸರಾಸರಿ ಶೇ.೩೫ಕ್ಕೆ ಏರಿಸುವ ಗುರಿಯನ್ನು ಹೊಂದಿದೆ. ಅದಾಗ್ಯೂ ಪ್ರವೇಶಾತಿಯಲ್ಲಿ ಅಸಮಾನತೆ, ಪ್ರಾದೇಶಿಕ ಅಸಮಾನತೆಗಳು, ಸಾಮಾಜಿಕ ಅಸಮಾನತೆಗಳು, ಕಳಪೆ ಗುಣಮಟ್ಟ ಮತ್ತು ಶೋಚನೀಯ ಶೈಕ್ಷಣಿಕ ಮಾನದಂಡಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವ ಅಸಾಧಾರಣ ಸವಾಲುಗಳನ್ನು ಇದು ಎದುರಿಸುತ್ತಿದೆ. ಕಡಿಮೆ ಪರಿವರ್ತನೆ, ಶಿಕ್ಷಣದಿಂದ ಹೊರಗುಳಿಯುವ ಪ್ರಮಾಣದಲ್ಲಿ ಹೆಚ್ಚಳ, ಶಿಕ್ಷಣವನ್ನು ಪೂರ್ಣಗೊಳಿಸುವ ಪ್ರಮಾಣದಲ್ಲಿ ಹಿಂದುಳಿಯುವಿಕೆ ಇವು ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ಭರವಸೆಯನ್ನು ಮಂಕಾಗಿಸುತ್ತಿದೆ. ಇದಲ್ಲದೇ ಹೆಚ್ಚುತ್ತಿರುವ ವೆಚ್ಚ, ಸಾಲದ ನಿರ್ಬಂಧಗಳು ಮತ್ತು ದುರ್ಬಲ ಜನಸಂಖ್ಯೆಯ ವಿಭಾಗಗಳಿಗೆ ಅವಕಾಶಗಳ ಕೊರತೆ ಇವು ಶಿಕ್ಷಣ ಕ್ಷೇತ್ರಕ್ಕೆ ಮತ್ತಷ್ಟು ಸವಾಲೊಡ್ಡುತ್ತಿವೆ. ಈ ಸವಾಲುಗಳು ಕೇವಲ ಉನ್ನತ ಶಿಕ್ಷಣವನ್ನು ಪ್ರವೇಶಿಸಲು ಮಾತ್ರ ಸೀಮಿತವವಾಗಿಲ್ಲ. ಯಶಸ್ವಿ ಪೂರ್ಣಗೊಳಿಸುವಿಕೆ ಮತ್ತು ಆರ್ಥಿಕ ಲಾಭಗಳಿಗೂ ಸಹ ತಡೆಯೊಡ್ಡುತ್ತವೆ.

1.1 ಅರಿವು ಶೈಕ್ಷಣಿಕ ಸಾಲ ಯೋಜನೆಯ ಹಿನ್ನೆಲೆ.

ಕರ್ನಾಟಕ ರಾಜ್ಯವು ಕಡಿಮೆ ಸವಲತ್ತಿನ ವರ್ಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಹಣಕಾಸು ಒದಗಿಸುವ ನಿಟ್ಟಿನಲ್ಲಿ ಶಿಕ್ಷಣ ಸಾಲ ಯೋಜನೆಯಾಗಿ 'ಅರಿವು' ಪ್ರಾರಂಭಿಸಿದೆ. ಹಿಂದುಳಿದ ವರ್ಗದ ವಿದ್ಯಾರ್ಥಿಗಳಲ್ಲಿ ಪ್ರವೇಶ, ಉನ್ನತ ಶಿಕ್ಷಣದಲ್ಲಿ ಭಾಗವಹಿಸುವಿಕೆ ಮತ್ತು ಆರ್ಥಿಕ ಚಲನಶೀಲತೆಯನ್ನು ಹೆಚ್ಚಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಬಡತನ ಮತ್ತು ಆರ್ಥಿಕ ನಿಬಂಧನೆಗಳಿಂದಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಸಾಲವನ್ನು ಪಡೆಯಲು ಸಾಧ್ಯವಾಗದ ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಪಡೆಯಲು ಈ ಯೋಜನೆ ಆರ್ಥಿಕ ನೆರವು ನೀಡುತ್ತದೆ. ಈ ಯೋಜನೆಯು ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಶಿಕ್ಷಣದಿಂದ ಹೊರಗುಳಿಯುವವರ ಪ್ರಮಾಣವನ್ನು ತಗ್ಗಿಸುವುದು ಮತ್ತು ಹಿಂದುಳಿದ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳ ಉದ್ಯಮಶೀಲತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಮತ್ತು ಇದನ್ನು ಡಿ ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮೂಲಕ ಜಾರಿಗೆ ತರಲಾಗಿದೆ. ಈ ಯೋಜನೆಯು ಎಲ್ಲಾ ೩೦ ಜಿಲ್ಲೆಗಳನ್ನು ಮತ್ತು ಹಿಂದುಳಿದ ವರ್ಗ I, II–ಎ, III–ಎ ಮತ್ತು III–ಬಿ ಗೆ ಸೇರಿದ ಉನ್ನತ ಶಿಕ್ಷಣದ ವಿದ್ಯಾರ್ಥಿಗಳನ್ನು ಅನುಕ್ರಮವಾಗಿ ಶೇ. ೧೪, ಶೇ.೫೪%, ಶೇ.೧೪% ಮತ್ತು ಶೇ.೧೮ ಅನುಪಾತದಲ್ಲಿ ಒಳಗೊಳ್ಳುತ್ತದೆ. ಈ ಮೊದಲು ಸಿಇಟಿ ಮತ್ತು ಸಿಇಟಿ ಯೇತರ ಶೈಕ್ಷಣಿಕ ಸಾಲಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಗಳ ಮೂಲಕ ಮಂಜೂರು ಮಾಡಲಾಯಿತು ಮತ್ತು ವಿತರಿಸಲಾಯಿತು. ಪ್ರಸ್ತುತ ೨೦೧೭–೧೮ ರಿಂದ ಸಿಇಟಿ ಶೈಕ್ಷಣಿಕ ಸಾಲಗಳನ್ನು ನೇರವಾಗಿ ಆನ್‌ಲೈನ್ ಮೂಲಕ ಡಿ.ದೇವರಾಜ ಅರಸ್ ಅಭಿವೃದ್ಧಿ ನಿಗಮದ ಪ್ರಧಾನ ರಾಜ್ಯ ಕಚೇರಿ ಬೆಂಗಳೂರಿನಿಂದ ಹಾಗೂ ಸಿಇಟಿ ಯೇತರ ಸಾಲಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಗಳ ಮೂಲಕ ವಿತರಿಸಲಾಗುತ್ತಿದೆ. ಅರಿವು ಸಾಲ ಯೋಜನೆಯ ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಇತರ ೨೮ ಕೋರ್ಸುಗಳನ್ನು ಒಳಗೊಂಡಿದೆ.

೨೦೧೧–೨೦೧೨ ನೇ ಸಾಲಿನಲ್ಲಿ ಜಾರಿಗೆ ಬಂದ ಈ ಯೋಜನೆಯು ಆರಂಭದಲ್ಲಿ ವಿದ್ಯಾರ್ಥಿಯ ಕೋರ್ಸ್ ನ ಪ್ರಾರಂಭದ ವೇಳೆಯಲ್ಲಿ ಶೇ.೨ ರ ಬಡ್ಡಿದರದಲ್ಲಿ ಗರಿಷ್ಠ ರೂ.೧೦,೦೦೦ (ಹತ್ತು ಸಾವಿರ) ವಾರ್ಷಿಕವಾಗಿ ನೀಡುತ್ತಿತ್ತು. ನಿಯಮಗಳ ಪ್ರಕಾರ ಫಲಾನುಭವಿಗಳು ಕೋರ್ಸ್ ಮುಗಿದ ನಾಲ್ಕು ತಿಂಗಳ ನಂತರ ಯಾವುದೇ ಉದ್ಯೋಗ ಸಿಗದಿದ್ದರೂ ಶೈಕ್ಷಣಿಕ ಸಾಲವನ್ನು ಬಡ್ಡಿಯೊಂದಿಗೆ ಮರುಪಾವತಿಸಲು ಪ್ರಾರಂಭಿಸಬೇಕು. ಶಿಕ್ಷಣವನ್ನು ಪೂರ್ಣಗೊಳಿಸಿದ ಅಥವಾ ಕೋರ್ಸ್ ಮುಗಿಸಿದ ಮೂರು ವರ್ಷಗಳ ಒಳಗೆ ಅವರು ಸಮಾನ ಮಾಸಿಕ ಕಂತಿನಲ್ಲಿ ಬಡ್ಡಿಯೊಂದಿಗೆ ಸಾಲವನ್ನು ತೀರಿಸಬೇಕು. ಇದು ಕೇವಲ ಹಿಂದುಳಿದ ವರ್ಗಗಳ ಎರಡು ವರ್ಗಗಳಿಗೆ ಮತ್ತು ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದಲ್ಲಿ ವೃತ್ತಿಪರ ಕೋರ್ಸ್‌ಗಳನ್ನು ಕಲಿಯುವ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿತ್ತು. ಈ ಸಾಲ ಪಡೆಯುವವರ ವಾರ್ಷಿಕ ಆದಾಯ ಮಿತಿ ರೂ. ೨೨,೦೦೦ (ಇಪ್ಪತ್ತ ಎರಡು ಸಾವಿರ) ಇರಬೇಕಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ಯೋಜನೆಯು ಇತರ ಹಿಂದುಳಿದ ವರ್ಗಗಳನ್ನು ಒಳಗೊಳ್ಳುವುದರೊಂದಿಗೆ, ಉನ್ನತ ಶಿಕ್ಷಣದಲ್ಲಿ ಇತರ ವೃತ್ತಿಪರ ಮತ್ತು ಸಾಮಾನ್ಯ ಪದವಿ ಕೋರ್ಸ್‌ಗಳಿಗೂ ವಿಸ್ತರಿಸಿದೆ. ಸಾಲದ ಮೊತ್ತವನ್ನು ಹೆಚ್ಚಿಗೆ ಮಾಡಲಾಗಿದೆ ಹಾಗೂ ಅರ್ಹತಾ ಮಾನದಂಡಗಳನ್ನು ಪರಿಷ್ಕರಿಸಲಾಗಿದೆ. ಪ್ರಸ್ತುತ ಈ ಯೋಜನೆಯು ಕುಟುಂಬದ ವಾರ್ಷಿಕ ಆದಾಯವು ರೂ.೩.೫ ಲಕ್ಷ ಮಿತಿಯಲ್ಲಿರುವ ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ರೂ.೨ ರ ಬಡ್ಡಿ ದರದಲ್ಲಿ ಗರಿಷ್ಠ ರೂ. ಒಂದು ಲಕ್ಷ ದವರೆಗೆ ಸಾಲವನ್ನು ನೀಡುತ್ತಿದೆ. ೨೦೧೮–೧೯ ನೇ ಸಾಲಿನವರೆಗೆ ಒಟ್ಟು ೧೬,೪೩೦ ವಿದ್ಯಾರ್ಥಿ ಫಲಾನುಭವಿಗಳಿಗೆ ರೂ.೮೫೫೮.೭೫ ಲಕ್ಷವನ್ನು ವ್ಯಯಿಸಲಾಗಿದೆ. ಅರಿವು ಯೋಜನೆ ಸುಮಾರು

ಒಂದು ದಶಕದಿಂದ ಜಾರಿಯಲ್ಲಿದೆ. ಈ ಯೋಜನೆ/ಕಾರ್ಯಕ್ರಮವು ಕಳೆದ ವರ್ಷಗಳಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದೆ, ಎಷ್ಟು ವಿದ್ಯಾರ್ಥಿ ಫಲಾನುಭವಿಗಳನ್ನು ಒಳಗೊಂಡಿದೆ ಮತ್ತು ಇದು ವಿದ್ಯಾರ್ಥಿಗಳಲ್ಲಿ ಯಾವ ರೀತಿಯ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳನ್ನು ತಂದಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಹೀಗಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಮೌಲ್ಯಮಾಪನ ಅಧ್ಯಯನವು ನೀತಿ ಮತ್ತು ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸೂಕ್ತವಾದ ಪ್ರತಿಕ್ರಿಯೆಯನ್ನು ನೀಡುತ್ತದೆ ಮತ್ತು ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರವು ಎದುರಿಸುತ್ತಿರುವ ಪ್ರಮುಖ ಸವಾಲುಗಳು ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಮರ್ಶಾತ್ಮಕ ಒಳನೋಟಗಳನ್ನು ಬಹಿರಂಗಪಡಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

1.2 ಸಮಸ್ಯೆಯ ಹೇಳಿಕೆ

ಈಗಾಗಲೇ ಹೇಳಿದಂತೆ ಉನ್ನತ ಶಿಕ್ಷಣದಲ್ಲಿ ದಾಖಲಾತಿ ಮತ್ತು ಭಾಗವಹಿಸುವಿಕೆಯನ್ನು ಹೆಚ್ಚಿಸುವ ಜೊತೆಗೆ ಶೈಕ್ಷಣಿಕ ಸಾಲದ ಬೆಂಬಲದ ಮೂಲಕ ನಿರ್ಲಕ್ಷಕ್ಕೊಳಗಾದ ಸಮುದಾಯಗಳ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉದ್ಯೋಗದ ಅವಕಾಶಗಳನ್ನು ಸುಧಾರಿಸುವ ಉದ್ದೇಶದಿಂದ ಅರಿವು ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯು ಜನಸಂಖ್ಯೆಯ ವಿಭಾಗಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯನ್ನು ತರುವ ಮೂಲಕ ಸಮಾನ ಪ್ರಗತಿ ಮತ್ತು ಸಮಗ್ರ ಅಭಿವೃದ್ಧಿಯ ಸಮಸ್ಯೆಗಳನ್ನು ಪರಿಹರಿಸುತ್ತದೆ.

ಕಾರ್ಯಕ್ರಮವು ಅತ್ಯಂತ ದುರ್ಬಲ ಕುಟುಂಬದ ಹಿಂದುಳಿದ ವರ್ಗದ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡರೆ, ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ಹಿಂದುಳಿದ ವರ್ಗದ ಜನಸಂಖ್ಯೆಯ ಹಂಚಿಕೆ ಏಕರೂಪವಾಗಿಲ್ಲ ಮತ್ತು ಆರ್ಥಿಕ ಮತ್ತು ಸಾಮಾಜಿಕ ದುರ್ಬಲತೆಯ ಅಂಶಗಳು ಮನೆಯಿಂದ ಮನೆಗೆ ಬದಲಾಗುತ್ತವೆ. ಈ ವಿದ್ಯಮಾನವು ರಾಜ್ಯದ ವಿವಿಧ ಪ್ರದೇಶಗಳಲ್ಲಿ ಉನ್ನತ ಶಿಕ್ಷಣದ ಅಸಮ ಅನುಪಾತದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಕಾರಣವಾಗುವುದರೊಂದಿಗೆ ಕಾರ್ಯಕ್ರಮದ ಉದ್ದೇಶಿತ ಫಲಿತಾಂಶಗಳ ಮೇಲೆ ಋಣಾತ್ಮಕ ಪರಿಣಾಮವನ್ನು ಬೀರುತ್ತದೆ. ಇದಲ್ಲದೇ ಅರೆ ಸರ್ಕಾರಿ ಸಂಸ್ಥೆಯಾಗಿರುವ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ವಿವಿಧ ಸಂಬಂಧಿತ ಇಲಾಖೆಗಳ ಸಮನ್ವಯತೆಯಿಂದ ಅನುಷ್ಠಾನಗೊಳ್ಳುತ್ತಿರುವ ಈ ಕಾರ್ಯಕ್ರಮವು ಯೋಜನೆಯ ಸುಗಮ ಮತ್ತು ಪರಿಣಾಮಕಾರಿ ಅನುಷ್ಠಾನದಲ್ಲಿ ಸಂಕೀರ್ಣತೆಯನ್ನು ಸೃಷ್ಟಿಸುತ್ತದೆ. ಈ ಸನ್ನಿವೇಶದಲ್ಲಿ ಕಾರ್ಯಕ್ರಮದ ಕಾರ್ಯಕ್ಷಮತೆಯನ್ನು ಅದರ ಉದ್ದೇಶಿತ ಪ್ರಯೋಜನಗಳ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದು ಯೋಗ್ಯವಾಗಿದೆ. ಆದರೆ ಪರಿಣಾಮಕಾರಿ ಅನುಷ್ಠಾನದ ಹಾದಿಯಲ್ಲಿ ಬರುವ ನಿರ್ಣಾಯಕ ಅಡೆತಡೆಗಳು, ಸಮಸ್ಯೆಗಳು ಮತ್ತು ಸವಾಲುಗಳನ್ನು ಗುರುತಿಸುವುದು ಸಹ ಯೋಗ್ಯವಾಗಿದೆ. ಹೀಗಾಗಿ ವಿನ್ಯಾಸ, ಯೋಜನೆ ಅನುಷ್ಠಾನ, ಒಳಹರಿವು ಚಟುವಟಿಕೆಗಳು/ ಕಾರ್ಯಗಳು ಹಾಗೂ ಫಲಿತಾಂಶಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮ ವಿವಿಧ ಸಂಪರ್ಕಗಳ ಪರಸ್ಪರ ನಿರೂಪಣೆಯನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ.

1.3 ಮೌಲ್ಯಮಾಪನದ ಉದ್ದೇಶ

ಕರ್ನಾಟಕ ರಾಜ್ಯ ಸರ್ಕಾರದ ಡಿ.ದೇವರಾಜ ಅರಸ್ ಹಿಂದುಳಿದ ವರ್ಗ ಅಭಿವೃದ್ಧಿ ನಿಗಮವು ನೀಡಿದ ಮೌಲ್ಯಮಾಪನದ ಉದ್ದೇಶ, ಯೋಜನೆಯ ವ್ಯಾಪ್ತಿ ಮತ್ತು ಆಯಾಮ, ಅನುಷ್ಠಾನ, ವಿನ್ಯಾಸ, ರಚನೆ ಮತ್ತು ಪ್ರಕ್ರಿಯೆಯನ್ನು ಪರಿಶೀಲಿಸುವುದು ಆಗಿರುತ್ತದೆ. ಉನ್ನತ ಶಿಕ್ಷಣದ ದಾಖಲಾತಿ, ಪೂರ್ಣಗೊಳಿಸುವಿಕೆಯ ಅನುಪಾತ, ಶಿಕ್ಷಣದಿಂದ ಹೊರಗುಳಿಯುವ ಪ್ರಮಾಣವನ್ನು ಕಡಿಮೆ ಮಾಡುವುದು, ಉದ್ಯೋಗವಕಾಶಗಳನ್ನು ಹೆಚ್ಚಿಸುವುದು ಮತ್ತು ಆರ್ಥಿಕ ಚಲನಶೀಲತೆಯ (ಪ್ರಾಬಲ್ಯವನ್ನು) ಪ್ರಭಾವವನ್ನು ಅಧ್ಯಯನ ಮಾಡುವುದು ಮತ್ತು ನಿರ್ಣಯಿಸುವುದನ್ನು ಇದು ಒಳಗೊಂಡಿದೆ.

1.4 ಅಧ್ಯಯನದ ಉದ್ದೇಶಗಳು :

೧. ಅರಿವು ಯೋಜನೆಯ ವ್ಯಾಪ್ತಿ, ವಿಸ್ತಾರ, ಕ್ಲುಪ್ತ ಸಮಯಕ್ಕೆ ಲಭ್ಯತೆ ಮತ್ತು ವಿತರಣೆ ಹಾಗೂ ಬಳಕೆಯ ವ್ಯಾಪ್ತಿಯನ್ನು ಮೌಲ್ಯಮಾಪನ ಮಾಡುವುದು.

೨. ಅರಿವು ಸಾಲ ಯೋಜನೆಗೆ ಸಂಬಂಧಿಸಿದಂತೆ ಫಲಾನುಭವಿ ಮತ್ತು ಮಧ್ಯಸ್ಥಗಾರರ ಗ್ರಹಿಕೆ ಮತ್ತು ತೃಪ್ತಿಯ ಮಟ್ಟವನ್ನು ಅಳೆಯುವುದು

೩. ಉನ್ನತ ಶಿಕ್ಷಣದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಪ್ರವೇಶ, ದಾಖಲಾತಿ, ಭಾಗವಹಿಸುವಿಕೆ ಮತ್ತು ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸುವದರಲ್ಲಿ ಅರಿವು ಯೋಜನೆಯ ಪ್ರಭಾವವನ್ನು ಅಧ್ಯಯನ ಮಾಡುವುದು.

೪. ಅರಿವು ಯೋಜನೆ ಅನುಷ್ಠಾನದ ಪರಿಣಾಮಕಾರಿತ್ವವನ್ನು ಅಧ್ಯಯನ ಮಾಡಲು (ಪ್ರಾರಂಭದಿಂದ ಫಲಾನುಭವಿಯವರೆಗೆ ಪೂರೈಕೆ ಮತ್ತು ವಿತರಣೆಯನ್ನು ಅನುಪಾಲನೆಯ ಜಾಡು ಹಿಡಿಯುವುದು)

೫. ಹಿಂದುಳಿದ ವರ್ಗದ ವಿದ್ಯಾರ್ಥಿಗಳಲ್ಲಿ ಅರಿವು ಯೋಜನೆಯ ಅರಿವಿನ ಮಟ್ಟವನ್ನು ಮೌಲ್ಯಮಾಪನ ಮಾಡುವುದು.

೬. ಹಿಂದುಳಿದ ವರ್ಗದ ಯುವಕರಲ್ಲಿ ಉನ್ನತ ಶಿಕ್ಷಣಕ್ಕೆ ಕಡಿಮೆ ಶೈಕ್ಷಣಿಕ ದಾಖಲಾತಿ ಮತ್ತು ಕಳಪೆ ಭಾಗವಹಿಸುವಿಕೆಗೆ ಕಾರಣಗಳು ಮತ್ತು ನಿರ್ಬಂಧಗಳನ್ನು ಕಂಡುಹಿಡಿಯುವುದು.

೭. ಇತರೆ ರಾಜ್ಯಗಳ ಇದೇ ರೀತಿಯ ಯೋಜನೆಗಳೊಂದಿಗೆ ಯೋಜನೆಯ ತುಲನಾತ್ಮಕ ವಿಶ್ಲೇಷಣೆ ಮಾಡವುದು.

೮. ಅರಿವು ಸಾಲ ವಿದ್ಯಾರ್ಥಿ ಫಲಾನುಭವಿಗಳು ತಮ್ಮ ಅಧ್ಯಯನದ ಅವಧಿಯಲ್ಲಿ ಇತರ ಖರ್ಚುಗಳನ್ನು ನಿರ್ವಹಿಸಲು ಅನುಭವಿಸಿದ ನಿರ್ಬಂಧಗಳು ಮತ್ತು ತೊಂದರೆಗಳನ್ನು ಗುರುತಿಸುವುದು.

೯. ಫಲಾನುಭವಿಗಳಿಂದ ಅರಿವು ಸಾಲದ ಮರುಪಾವತಿ ಮತ್ತು ಉನ್ನತ ಶಿಕ್ಷಣ ಉದ್ದೇಶಕ್ಕಾಗಿ ಅವರು ಪರ್ಯಾಯ ಸಾಲಗಳನ್ನು ಪಡೆದಿದ್ದರೆ ಅದರ ಸ್ಥಿತಿಗತಿಗಳನ್ನು ಪರಿಶೀಲಿಸುವುದು.

೧೦. ಡಿ.ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಹಿನ್ನೆಲೆ ಮತ್ತು ಉನ್ನತ ಶಿಕ್ಷಣ ಕ್ಷೇತ್ರದ ಯೋಜನೆ ಮತ್ತು ಬೆಳವಣಿಗೆಯೊಂದಿಗಿನ ಅದರ ವಿಚಾರಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದು.

೧೧. ಅರಿವು ಸಾಲ ಯೋಜನೆಯಲ್ಲಿ ಹಣಕಾಸಿನ ಅಂಶಗಳಾದ ಸಾಲ ಮತ್ತು ಸಬ್ಸಿಡಿಯನ್ನು ಒಳಗೊಂಡಂತೆ ಹಣಕಾಸಿನ ವಿವಿಧ ಆಯಾಮಗಳನ್ನು ಅನ್ವೇಷಿಸುವುದು.

೧೨. ಪ್ರದೇಶದ ಒಟ್ಟಾರೆ ಜನಸಂಖ್ಯಾ ಸಂಯೋಜನೆಯೊಳಗೆ ವಿವಿಧ ಸ್ತರಗಳಲ್ಲಿ [ಜಾತಿ, ವರ್ಗಗಳು, ಮನೆಗಳು, ಕೋರ್ಸ್‌ಗಳು, ಹುಡುಗರು, ಹುಡುಗಿಯರು] ವಿದ್ಯಾರ್ಥಿ ಫಲಾನುಭವಿಗಳ ಆಯ್ಕೆಗಾಗಿ ಅಳವಡಿಸಿಕೊಂಡ ಮಾನದಂಡಗಳು ಮತ್ತು ಕಾರ್ಯವಿಧಾನವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದು.

ಅಧ್ಯಾಯ 2 – ವೈಧಾನಿಕತೆ.

ಸಾರ್ವಜನಿಕ ನೀತಿಯ ಮೌಲ್ಯಮಾಪನವಾಗಿರುವ ಈ ಅಧ್ಯಯನವು ಸಾಮಾಜಿಕ ಕಾರ್ಯಕ್ರಮದ ಮೌಲ್ಯಮಾಪನಕ್ಕೆ ಪ್ರಮಾಣಿತ ಸಾಮಾಜಿಕ ಸಂಶೋಧನಾ ವಿಧಾನವನ್ನು ಬಳಸಿಕೊಳ್ಳುತ್ತದೆ. ಮೌಲ್ಯಮಾಪನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನಗಳು– ಯೋಜನೆಯ ಅನುಷ್ಠಾನದ ವಿನ್ಯಾಸ, ರಚನೆ ಮತ್ತು ಪ್ರಕ್ರಿಯೆಯನ್ನು ಪರಿಶೀಲಿಸುವುದು, ಉನ್ನತ ಶಿಕ್ಷಣಕ್ಕೆ ದಾಖಲಾತಿ/ಪ್ರವೇಶ, ಪೂರ್ಣಗೊಳಿಸುವಿಕೆಯ ಅನುಪಾತ, ಶಿಕ್ಷಣದಿಂದ ಹೊರಗುಳಿಯುವುದನ್ನು ಕಡಿತಗೊಳಿಸುವುದು. ಉದ್ಯೋಗವಕಾಶಗಳನ್ನು ಹೆಚ್ಚಿಸುವುದು ಮತ್ತು ಆರ್ಥಿಕ ಚಲನಶೀಲತೆಯನ್ನು ಒಳಗೊಳ್ಳುತ್ತವೆ. ಅಧ್ಯಯನವು ಮೂಲಭೂತವಾಗಿ ದ್ವಿತೀಯ ಮೂಲದ ದತ್ತಾಂಶದ ಸ್ಥೂಲ ಸಮೀಕ್ಷೆ ಮತ್ತು ಕ್ಷೇತ್ರ ದತ್ತಾಂಶದ ಸೂಕ್ಷ್ಮ ಸಮೀಕ್ಷೆಯನ್ನು ಒಳಗೊಂಡ ವಿಶ್ಲೇಷಣಾತ್ಮಕ ಸಂಶೋಧನಾ ವಿನ್ಯಾಸವನ್ನು ಬಳಸಿಕೊಳ್ಳುತ್ತದೆ. ಈ ಸಮೀಕ್ಷೆಗೆ ಪೂರಕವಾಗಿ ಗುಣಾತ್ಮಕ ವಿಧಾನಗಳನ್ನು ಬಳಸಿಕೊಳಲಾಗುತ್ತಿದೆ. ಸ್ಥೂಲ ಮಟ್ಟದಲ್ಲಿ ಆರ್ಥಿಕ ನಿಯತಾಂಕಗಳಿಗೆ ಸಂಬಂಧಿಸಿದ ಸಂಖ್ಯಾತ್ಮಕ ದತ್ತಾಂಶಗಳನ್ನು ಮತ್ತು ದ್ವಿತೀಯ ಮೂಲಗಳಿಂದ ಪಡೆಯಲಾದ ಫಲಾನುಭವಿಗಳ ವ್ಯಾಪ್ತಿಯನ್ನು, ಸಮಯ ಮತ್ತು ಸ್ಥಳಕ್ಕನುಗುಣವಾಗಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ಕ್ಷೇತ್ರ ಸಮೀಕ್ಷೆಯು ಕೌಟುಂಬಿಕ ದತ್ತಾಂಶಗಳನ್ನು ಬಳಸಿಕೊಂಡು ಫಲಾನುಭವಿಗಳ ಸಾಮಾಜಿಕ–ಆರ್ಥಿಕ ಸ್ಥಿತಿ–ಗತಿಗಳನ್ನು ಸಮೀಕ್ಷೆ ಮಾಡುವ ಗುರಿಯನ್ನು ಹೊಂದಿದೆ.

ಇದನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಮೌಲ್ಯಮಾಪನ ಸಂಶೋಧನಾ ವಿಧಾನದಲ್ಲಿ ಸಾಮಾನ್ಯವಾಗಿ ಅನುಸರಿಸುವ ಸಾಮಾನ್ಯ ತತ್ವಗಳು, ಪ್ರಕಾರಗಳು ಮತ್ತು ತಂತ್ರಗಳನ್ನು ಈ ಸಂಶೋಧನಾ ವಿಧಾನವು ಅನುಸರಿಸುತ್ತದೆ. ಅವುಗಳೆಂದರೆ ಒಳಹರಿವು ಮಾಪನ/ಹೊರಹರಿವು/ಕಾರ್ಯಕ್ಷಮತೆ ಮಾಪನ, ಪರಿಣಾಮ / ಫಲಿತಾಂಶಗಳ ಮೌಲ್ಯಮಾಪನ, ಸೇವೆಯ ಗುಣಮಟ್ಟದ ಮೌಲ್ಯಮಾಪನ, ಪ್ರಕ್ರಿಯೆಯ ಮೌಲ್ಯಮಾಪನ, ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳು. ಮೌಲ್ಯಮಾಪನ ಸಂಶೋಧನೆಯು ಕಟ್ಟುನಿಟ್ಟಿನ ವ್ಯವಸ್ಥಿತ ಪ್ರಕ್ರಿಯೆಯಾಗಿದ್ದು, ಇದು ಸಂಸ್ಥೆಗಳು, ಪ್ರಕ್ರಿಯೆಗಳು, ಸೇವೆಗಳು, ಕಾರ್ಯಕ್ರಮಗಳು ಮತ್ತು ಸಂಪನ್ಮೂಲಗಳ ಕುರಿತು ವಿದ್ಯಾರ್ಥಿ ಫಲಾನುಭವಿಗಳು ಮತ್ತು ಇತರ ಮಧ್ಯಸ್ಥಗಾರರಿಂದ ದತ್ತಾಂಶಗಳನ್ನು ಸಂಗ್ರಹಿಸುವುದನ್ನು ಒಳಗೊಂಡಿರುತ್ತದೆ.

2.1 ಬದಲಾವಣೆಯ ಸಿದ್ಧಾಂತ

ಹಿಂದುಳಿದ ವರ್ಗಗಳ ಸಮುದಾಯದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಲಭ್ಯತೆ, ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾತಿ, ಉನ್ನತ ಶಿಕ್ಷಣದಲ್ಲಿ ಭಾಗವಹಿಸುವಿಕೆ ಮತ್ತು ಆ ಮೂಲಕ ಅವರ ಉದ್ಯೋಗ ಭವಿಷ್ಯವನ್ನು ಹೆಚ್ಚಿಸುವಲ್ಲಿ ಅರಿವು ಶಿಕ್ಷಣ ಸಾಲ ಯೋಜನೆಯಂತಹ ಸಾರ್ವಜನಿಕ ನೀತಿಯ ವ್ಯಾಪಕತೆಯನ್ನು ಹೇಗೆ ಯೋಜಿಸಲಾಗಿದೆ ಮತ್ತು ಕಾರ್ಯಗತಗೊಳಿಸಲಾಗಿದೆ ಎಂಬುದನ್ನು ಮೌಲ್ಯಮಾಪನ ಮಾಡಲು ಪ್ರಸ್ತುತ ಅಧ್ಯಯನವನ್ನು ಬದಲಾವಣೆಯ ಸಿದ್ಧಾಂತದ ಚೌಕಟ್ಟಿನೊಳಗೆ ಹೊಂದಿಸಲಾಗಿದೆ. ಅಧ್ಯಯನದ ಸೈದ್ಧಾಂತಿಕ ಚೌಕಟ್ಟು ಕೊಟ್ಟಿರುವ ಚಟುವಟಿಕೆಗಳು, ಹೊರಹರಿವುಗಳು ಮತ್ತು ನಿರೀಕ್ಷಿತ ಫಲಿತಾಂಶಗಳ ನಡುವಿನ ತಾರ್ಕಿಕ ಸಂಪರ್ಕವನ್ನು ಗುರುತಿಸುತ್ತದೆ. ಒಳಹರಿವುಗಳನ್ನು ಅಯವ್ಯಯದ ಸಂಪನ್ಮೂಲಗಳು (ಹಣಕಾಸಿನ ಹಂಚಿಕೆಗಳು) ಭೌತಿಕ ಮತ್ತು ವಸ್ತು ಮೂಲ ಸೌಕರ್ಯಗಳು (ಕಚೇರಿ, ಸಾಂಸ್ಥಿಕ ರಚನೆ ಮತ್ತು ತಂತ್ರಜ್ಞಾನ ಬೆಂಬಲ ವ್ಯವಸ್ಥೆಗಳು) ಮತ್ತು ಮಾನವ ಸಂಪನ್ಮೂಲ (ಅಧಿಕಾರಿಗಳು, ಸಚಿವಾಲಯದ ಸಿಬ್ಬಂದಿ, ತಾಂತ್ರಿಕ ಬೆಂಬಲ ಸಿಬ್ಬಂದಿ, ತರಬೇತಿ ಮತ್ತು ಸಾಮರ್ಥ್ಯಾಭಿವೃದ್ಧಿ, ವಿದ್ಯಾರ್ಥಿ ಫಲಾನುಭವಿಗಳು) ಎಂದು ವ್ಯಾಖ್ಯಾನಿಸಲಾಗಿದೆ. ಯೋಜನೆಯ ಅನುಷ್ಠಾನವು ಭೌತಿಕ ಮತ್ತು ಆರ್ಥಿಕ ಯೋಜನೆ ಗುರಿಗಳನ್ನು ಸಿದ್ದಪಡಿಸುವುದು, ಸಾಂಸ್ಥಿಕ ರಚನೆಗಳನ್ನು ಸ್ಥಾಪಿಸುವುದು,

ವಿವಿಧ ಕಚೇರಿಗಳು ಮತ್ತು ಇಲಾಖೆಗಳಲ್ಲಿ ಯೋಜನೆಯ ಸಮನ್ವಯತೆ ಮತ್ತು ನಿರ್ವಹಣೆ ಮುಂತಾದ ಹಲವಾರು ಚಟುವಟಿಕೆಗಳನ್ನು ಗುರುತಿಸುತ್ತದೆ. ಫಲಾನುಭವಿಗಳಿಗೆ ಖರ್ಚು ಮಾಡಿದ ಅಥವಾ ಬಳಸಿದ ಹಣದ ಮೊತ್ತ, ಫಲಾನುಭವಿಗಳ ವ್ಯಾಪ್ತಿ ಮತ್ತು ವಿವಿಧ ಪ್ರದೇಶಗಳಲ್ಲಿ ಯೋಜನೆಯ ವ್ಯಾಪ್ತಿ ಮತ್ತು ವಿವಿಧ ಗುಂಪುಗಳ ನಡುವೆ ಯೋಜನೆಯು ವಿಸ್ತರಣೆಗೆ ಸಂಬಂಧಿಸಿದ ಅಂಶಗಳನ್ನು ಹೊರಹರಿವು ಎಂದು ಗುರುತಿಸಲಾಗುತ್ತದೆ. ಅಂತಿಮ ಫಲಿತಾಂಶಗಳನ್ನು ಮಾನವ ಬಂಡವಾಳ ಮತ್ತು ಮಾನವ ಸಂಪನ್ಮೂಲಗಳ ಒಟ್ಟಾರೆ ಲಾಭದ ದೃಷ್ಟಿಯಿಂದ ವ್ಯಾಖ್ಯಾನಿಸಲಾಗಿದೆ. ಈ ತಾರ್ಕಿಕ ಚೌಕಟ್ಟನ್ನು ಕೆಳಗಿನ ಚಿತ್ರದಲ್ಲಿ ಅಂಕಿ ೨.೧ ರಲ್ಲಿ ರೇಖಾಚಿತ್ರವಾಗಿ ನಿರೂಪಿಸಲಾಗಿದೆ.

ಚಿತ್ರ 1 ಬದಲಾವಣೆಯ ಸಿದ್ಧಾಂತ



ಊಹೆಗಳು : ಅಯವ್ಯಯದ ಸಮಯೋಚಿತ ಹಂಚಿಕೆ ಮತ್ತು ಖರ್ಚು ಅಗತ್ಯವಾದ ಮಾನವ ಶಕ್ತಿಯ ಲಭ್ಯತೆ . ಅಧಿಕಾರಿಗಳಿಂದ ಸಾಲ ವಿತರಣೆಯಲ್ಲಿ ದಕ್ಷತೆ.
ಅಪಾಯಗಳು: ಸರ್ಕಾರಿ ಮಟ್ಟದಲ್ಲಿ ಸಂಪನ್ಮೂಲಗಳ ಬಿಕ್ಕಟ್ಟು, ಕಾರ್ಯಕ್ರಮದ ಅನುಷ್ಠಾನದಲ್ಲಿ ಅಸಮರ್ಥತೆ, ಫಲಾನುಭವಿಗಳು ಪ್ರಯೋಜನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿಲ್ಲ.

ಮೂಲ : ಲೇಖಕ

2.2 ದತ್ತಾಂಶ ಸಂಗ್ರಹ ವಿಧಾನಗಳು ಮತ್ತು ವಿಶ್ಲೇಷಣೆ

ಮೌಲ್ಯಮಾಪನ ಪ್ರಶ್ನೆಗಳು, ದತ್ತಾಂಶ ಸೂಚಕಗಳು, ದತ್ತಾಂಶ ಮೂಲಗಳು, ದತ್ತಾಂಶ ಸಂಗ್ರಹ ಸಾಧನಗಳು ಮತ್ತು ವಿಶ್ಲೇಷಣಾ ವಿಧಾನವನ್ನು ವಿವರಿಸುವ ಸಂಪೂರ್ಣ ಮೌಲ್ಯಮಾಪನ ವಿಧಾನವನ್ನು ಈ ಕೆಳಗಿನ ಕೋಷ್ಟಕ–೨ ರಲ್ಲಿ ನಿರೂಪಿಸಲಾಗಿದೆ.

ಕೋಷ್ಟಕ 1 ಮೌಲ್ಯಮಾಪನ ಮಾತೃಕೆ

ಮೌಲ್ಯಮಾಪನ ಪ್ರಶ್ನೆಗಳು	ಸೂಚಕಗಳು	ದತ್ತಾಂಶಗಳ ಮೂಲ	ಸಂಗ್ರಹ ಮಾದರಿ/ಸಾಧನ	ವಿಶ್ಲೇಷಣೆ ವಿಧಾನ
೧. ಅರಿವು ಯೋಜನೆಯ ವಿಸ್ತರಣೆ ಮತ್ತು ವ್ಯಾಪ್ತಿ, ಸಮಯೋಚಿತ ಲಭ್ಯತೆ, ವಿತರಣೆ ಮತ್ತು ಬಳಕೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವುದು	ಆರ್ಥಿಕ – ಅಯವ್ಯಯಯ ಹಂಚಿಕೆಗಳು (ರೂ.ಗಳಲ್ಲಿ) ಹಂಚಿಕೆ ಮತ್ತು ಫಲಾನುಭವಿಗಳ ಸಂಖ್ಯೆಗೆ ಎದುರಾಗಿ ಖರ್ಚು ವಾಸ್ತವವಾಗಿ ಭೌತಿಕ ಗುರಿ ನಿಗದಿ [ವರ್ಗವಾರು; ಸಿಇಟಿ/ಸಿಇಟಿಯೇತರ] – ಭೌತಿಕ – ಫಲಾನುಭವಿಗಳ ಸಂಖ್ಯೆ – ಮೂಡಿಸಲಾದ ಜಾಗೃತಿ – ಹಿಂದುಳಿದ ವರ್ಗದ ವಿದ್ಯಾರ್ಥಿಗಳಲ್ಲಿ ಅರಿವು ಕಾರ್ಯಕ್ರಮದ ಬಗೆಗಿನ ತಿಳುವಳಿಕೆಯ ಮಟ್ಟ – ಯೋಜನೆಯ ವಿಸ್ತರಿಸುವಿಕೆ ಮತ್ತು ವ್ಯಾಪ್ತಿ – ಸಾಲದ ಸಮಯೋಚಿತ ಲಭ್ಯತೆ ಮತ್ತು ವಿತರಣೆ – ಬಳಕೆಯ ಪ್ರಮಾಣ	- ಅಧಿಕೃತ ದಾಖಲೆಗಳಿಂದ ಪಡೆದ ದ್ವಿತೀಯ ಮೂಲಗಳ ದತ್ತಾಂಶ - ಅಧಿಕೃತ, ದಾಖಲೆಗಳ ವಿಮರ್ಶೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ	- ದಾಖಲಾತಿಗಳ ಪರಿಶೀಲನೆ ಸಂದರ್ಶನಗಳು [ವೈಯುಕ್ತಿಕ ಹಾಗೂ ಕೇಂದ್ರೀಕೃತ ಗುಂಪು ಚರ್ಚೆ]	ಅಯವ್ಯಯಯ ಹಂಚಿಕೆ, ಅದರ ಬಿಡುಗಡೆ ಮತ್ತು ನಿಜವಾದ ಖರ್ಚಿನ ವಿಷಯದಲ್ಲಿ ಸಂಗ್ರಹಿಸಲಾದ ದತ್ತಾಂಶಗಳು ಮತ್ತು ಮಾಹಿತಿಯನ್ನು ವಿಶ್ಲೇಷಿಸಲಾಗುತ್ತದೆ. ಸಂಬಂಧಿಸಿದ ಇಲಾಖೆಗಳಿಗೆ ಮತ್ತು ಫಲಾನುಭವಿಗಳಿಗೆ ಅರಿವು ಯೋಜನೆಯ ಸಾಲದ ಸಮಯೋಚಿತ ಬಿಡುಗಡೆ ಮತ್ತು ಲಭ್ಯತೆ. ಜಾಗೃತಿ, ಸೂಕ್ತ ಫಲಾನುಭವಿಗಳ ಗುರುತಿಸುವಿಕೆ ಮತ್ತು ಅರಿವು ಸಾಲದ ಸಮಯೋಚಿತ ವಿತರಣೆ.
೨. ಸಾಲ ಯೋಜನೆಗೆ ಸಂಬಂಧಿಸಿದಂತೆ ಫಲಾನುಭವಿ ಮತ್ತು ಭಾಗೀದಾರರುಗಳ ಗ್ರಹಿಕೆ ಮತ್ತು ತೃಪ್ತಿಯನ್ನು ನಿರ್ಣಯಿಸುವುದು.	- ಅರಿವು ಕಾರ್ಯಕ್ರಮದ ಬಗ್ಗೆ ಫಲಾನುಭವಿಗಳ ತೃಪ್ತಿ - ಅರಿವು ಕಾರ್ಯಕ್ರಮದಮ ಬಗ್ಗೆ ಫಲಾನುಭವಿಗಳು ಮತ್ತು ಇತರ ಭಾಗೀದಾರರುಗಳ ಗ್ರಹಿಕೆಗಳು	- ಫಲಾನುಭವಿಗಳು ಮತ್ತು ಇತರೆ ಭಾಗೀದಾರರೊಂದಿಗೆ ಸಂದರ್ಶನಗಳು	- ಪ್ರಶ್ನಾವಳಿಗಳು - ಸಂದರ್ಶನದ ನಮೂನೆಗಳು - ಕೇಂದ್ರೀಕೃತ ಗುಂಪು ಚರ್ಚೆಗಳು ಆಳವಾದ ಸಂದರ್ಶನ	- ಅರಿವು ಸಾಲ ಯೋಜನೆಯ ಬಗ್ಗೆ ಫಲಾನುಭವಿಗಳು ಎಷ್ಟು ಸಂತೋಷ ಹೊಂದಿದ್ದಾರೆ ಮತ್ತು ತೃಪ್ತರಾಗಿದ್ದಾರೆ ಮತ್ತು

	- ಅರಿವು ಕಾರ್ಯಕ್ರಮದ ಬಗ್ಗೆ ಇರುವ ಜಾಗೃತಿ •ಉನ್ನತ ಶಿಕ್ಷಣದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಕಡಿಮೆ ಭಾಗವಹಿಸುವಿಕೆಗೆ ಇರುವ ನಿರ್ಬಂಧಗಳು / ಅಡೆತಡೆಗಳು	- ಆಳವಾದ ಸಂದರ್ಶನಗಳು ಮತ್ತು ಕೇಂದ್ರೀಕೃತ ಗುಂಪು ಚರ್ಚೆಗಳು ರಚನಾ ಕ್ರಮ ಹೊಂದಿದ/ವಿನ್ಯಾಸಗೊಳಿಸಿದ ಪ್ರಶ್ನಾವಳಿಗಳು/ಸಂದರ್ಶನದ ಪ್ರಶ್ನೆಗಳು/ನಮೂನೆಗಳು		ಅವರ ಅರಿವಿನ ಮಟ್ಟ ಎಷ್ಟು? ಉನ್ನತ ಶಿಕ್ಷಣದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಕಡಿಮೆ ಭಾಗವಹಿಸುವಿಕೆಗೆ ಕಾರಣಗಳು– (ಯಾವುದಾದರೂ ಇದ್ದರೆ)
೩. ಉನ್ನತ ಶಿಕ್ಷಣದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಪ್ರವೇಶ, ದಾಖಲಾತಿ, ಭಾಗವಹಿಸುವಿಕೆ ಮತ್ತು ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಯೋಜನೆಯ ಪ್ರಭಾವವನ್ನು ಅಧ್ಯಯನ ಮಾಡುವುದು.	- ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ [ಉನ್ನತ ಶಿಕ್ಷಣ ಸಂಸ್ಥೆಗಳು] - ನಿರ್ದಿಷ್ಟ ಪ್ರದೇಶದಲ್ಲಿನ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಸಂಖ್ಯೆಗೆ ವಿರುದ್ಧವಾಗಿ ಆ ಪ್ರದೇಶದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳ ಲಭ್ಯತೆ. - ಉನ್ನತ ಶಿಕ್ಷಣ ಸಂಸ್ಥೆಗಳನ್ನು ತಲುಪಲು ಇರುವ ಅಂತರ/ದೂರ - ಉನ್ನತ ಶಿಕ್ಷಣ ಸಂಸ್ಥೆಗಳ ಪ್ರಕಾರ, ಅಂದರೆ ಸರ್ಕಾರ, ಅನುದಾನಿತ ಖಾಸಗಿ ಮತ್ತು ಖಾಸಗಿ ಅನುದಾನರಹಿತ - ಶಿಕ್ಷಣದ ಪ್ರಕಾರ – ಸಾಮಾನ್ಯ ಪದವಿ, ವೃತ್ತಿಪರ ತಾಂತ್ರಿಕ. - ನಿರ್ದಿಷ್ಟ ಶೈಕ್ಷಣಿಕ ವರ್ಗದಲ್ಲಿ ಪಿಯುಸಿಯಲ್ಲಿ ಉತ್ತೀರ್ಣರಾದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸೇರಲು ಅರ್ಹರಾಗಿರುವ ಹಿಂದುಳಿದ ವರ್ಗಗಳ	ಅಧಿಕೃತ ದಾಖಲೆಗಳು, ಇಲಾಖೆಗಳ ದಾಖಲೆಗಳು, ಕಾಲೇಜುಗಳು ಮತ್ತು ಅಧಿಕಾರಿಗಳಿಂದ ಪಡೆದ ದ್ವಿತೀಯ ದತ್ತಾಂಶ	ಸಂದರ್ಶನ ಪ್ರಶ್ನೆಗಳು/ಪ್ರಶ್ನಾವಳಿಗಳು/ಕೇಂದ್ರೀಕೃತ ಗುಂಪುಚರ್ಚೆ, ಆಳವಾದ ಸಂದರ್ಶನಗಳು ಮತ್ತು ಪ್ರಮುಖ ಮಾಹಿತಿದಾರರು	ಸಂಗ್ರಹಿಸಿದ ದತ್ತಾಂಶವನ್ನು ಸೂಕ್ತ ತಂತ್ರಗಳನ್ನು ಬಳಸಿಕೊಂಡು ವಿಭಿನ್ನ ರೀತಿಗಳಲ್ಲಿ ಮತ್ತು ಸೂಚಕಗಳಲ್ಲಿ ವಿಶ್ಲೇಷಿಸಲಾಗುತ್ತದೆ.

	ವಿದ್ಯಾರ್ಥಿಗಳ ಸಂಖ್ಯೆ. [ಸಿಇಟಿ/ಸಿಇಟಿ ಯೇತರ] - ನಿರ್ದಿಷ್ಟ ಶೈಕ್ಷಣಿಕ ವರ್ಗದಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ. [ಸಿಇಟಿ / ಸಿಇಟಿ ಯೇತರ] - ನಿರ್ದಿಷ್ಟ ಅವಧಿಯಲ್ಲಿ [ಸಿಇಟಿ/ಸಿಇಟಿಯೇತರ] ಕೋರ್ಸ್ಗಳನ್ನು ಯಶಸ್ವಿಯಾಗಿ ಪೂರೈಸುವ ಹಿಂದುಳಿದ ವರ್ಗದ ವಿದ್ಯಾರ್ಥಿ ಫಲಾನುಭವಿಗಳ ಸಂಖ್ಯೆ ಪದವಿ ಮುಗಿದ ನಂತರ ಉದ್ಯೋಗ ಪಡೆಯುವ ಹಿಂದುಳಿದ ವರ್ಗಗಳ ವಿದ್ಯಾರ್ಥಿ ಫಲಾನುಭವಿಗಳ ಸಂಖ್ಯೆ [ಸಿಇಟಿ / ಸಿಇಟಿ ಯೇತರ]			
೪.ಯೋಜನೆ ಅನುಷ್ಠಾನದ ಪರಿಣಾಮಕಾರಿತ್ವವನ್ನು ಅಧ್ಯಯನ ಮಾಡುವುದು [ಮೂಲದಿಂದ ಕೊನೆಯ ಫಲಾನುಭವಿಯವರೆಗೆ ಪೂರೈಕೆ–ವಿತರಣಾ ಸರಪಳಿಯನ್ನು ಜಾಡು ಹಿಡಿಯುವುದು]	- ಅಯವ್ಯಯದ ಮಂಜೂರಾತಿಯಿಂದ ಆರಂಭಗೊಂಡು ವಿವಿಧ ಸಂಬಂಧಿಸಿದ ಇಲಾಖೆಗಳಿಗೆ ಸಾಲದ ಮೊತ್ತವನ್ನು ಬಿಡುಗಡೆಗೊಳಿಸಿ ಅದು ಫಲಾನುಭವಿಯನ್ನು ತಲುಪುವವರೆಗೆ ವಿವಿಧ ಇಲಾಖೆಗಳು ನಿಗದಿತ ಸಮಯದ ವೇಳಾಪಟ್ಟಿಯನ್ನು ಅನುಸರಿಸುವುದು. - ಜಿಲ್ಲಾ ಪಂಚಾಯತ್ ಸಮಿತಿಯ ಮಾನದಂಡಗಳ ಪ್ರಕಾರ ಫಲಾನುಭವಿಗಳ ಆಯ್ಕೆ. ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿಗಳನ್ನು ಆಹ್ವಾನಿಸಲು ಮತ್ತು ಸಲ್ಲಿಸಲು ಕಾಲೇಜುಗಳಿಗೆ	- ಅನುಷ್ಠಾನಗೊಳಿಸುವ ಏಜೆನ್ಸಿಯಿಂದ ನಿಧಿ ಬಿಡುಗಡೆಯ ಕುರಿತಾದ ದಾಖಲೆಗಳು (ದ್ವಿತೀಯ ದತ್ತಾಂಶ) - ಫಲಾನುಭವಿಗಳಿಗೆ ಸಾಲ ಬಿಡುಗಡೆ ಮಾಡುವಸಂಬಂಧ ಸಂಗ್ರಹಿಸಲಾದ ದಾಖಲೆಗಳು ಫಲಾನುಭವಿಗಳು ಮತ್ತು ಅವರ ಕುಟುಂಬಗಳು	- ದಾಖಲಾತಿಗಳ ಪರಿಶೀಲನೆ. - ಸಂದರ್ಶನ ನಮೂನೆಗಳು - ಕೇಂದ್ರೀಕೃತ ಗುಂಪು ಚರ್ಚೆಗಳು ಮತ್ತು ಆಳವಾದ ಸಂದರ್ಶನಗಳು	– ಪ್ರಕ್ರಿಯೆ ಅನುಷ್ಠಾನ ಮತ್ತು ವಿತರಣೆಗೆ ಸಂಬಂಧಿಸಿದಂತೆ ದತ್ತಾಂಶ ಮತ್ತು ಮಾಹಿತಿಯನ್ನು ವಿಶ್ಲೇಷಿಸಲಾಗುತ್ತದೆ.

	ಸಕಾಲಿಕವಾಗಿ ಅಧಿಸೂಚನೆಯನ್ನು ಬಿಡುಗಡೆ ಮಾಡುವುದು. - ಸಂಬಂಧಪಟ್ಟ ಪ್ರಾಧಿಕಾರದಿಂದ ಅರ್ಜಿಗಳ ಪರಿಶೀಲನೆ ಪ್ರಕ್ರಿಯೆ, ಸಿಇಟಿ/ಸಿಇಟಿಯೇತರ ಫಲಾನುಭವಿಗಳಿಗೆ ಮಂಜೂರಾದ ಸಾಲದ ಮೊತ್ತವನ್ನು ಬಿಡುಗಡೆ ಮಾಡುವುದು. - ಸಮಯೋಚಿತವಾಗಿ ಹಣವನ್ನು ಬಿಡುಗಡೆ ಮಾಡುವುದು. - ಪ್ರವೇಶ, ದಾಖಲಾತಿ ಪ್ರಮಾಣ ಮತ್ತು ಭಾಗವಹಿಸುವಿಕೆ ಮತ್ತು ಫಲಾನುಭವಿಗಳ ಉದ್ಯಮಶೀಲತೆಯ ಮಟ್ಟವನ್ನು ಅಳೆಯುವುದು - ಯೋಜನೆಯ ಪರಿಣಾಮಕಾರಿತ್ವ ಪ್ರಕ್ರಿಯೆ, ಅನುಷ್ಠಾನ ಮತ್ತು ಮೇಲ್ವಿಚಾರಣೆ. •ಸಾಲದ ಮೊತ್ತವನ್ನು ಮರುಪಾವತಿ ಮಾಡುವುದು.	ಮತ್ತು ಅಧಿಕಾರಿಗಳೊಂದಿಗೆ ಸಂದರ್ಶನ.		
೫. ಹಿಂದುಳಿದ ವರ್ಗದ ವಿದ್ಯಾರ್ಥಿಗಳಲ್ಲಿ ಅರಿವು ಯೋಜನೆಯ ಅರಿವಿನ ಮಟ್ಟವನ್ನು ಮೌಲ್ಯಮಾಪನ ಮಾಡುವುದು	ವಿಭಿನ್ನ ಆಯಾಮಗಳಿಗೆ ಸಂಬಂಧಿಸಿದಂತೆ ಅರಿವು ಯೋಜನೆಯ ಬಗ್ಗೆ ಜಾಗೃತಿ, ಜ್ಞಾನ ಮತ್ತು ತಿಳುವಳಿಕೆ [ಸಿಇಟಿ/ಸಿಇಟಿಯೇತರ]	ಫಲಾನುಭವಿಗಳು ಮತ್ತು ಇತರೆ ಭಾಗೀದಾರರು	ರಚನಾ ಕ್ರಮಗಳನ್ನು ಒಳಗೊಂಡ ಪ್ರಶ್ನಾವಳಿಗಳು/ನಮೂನೆಗಳು, ಕೇಂದ್ರೀಕೃತ ಗುಂಪು ಚರ್ಚೆಗಳು, ವೈಯುಕ್ತಿಕ ಆಳವಾದ ಸಂದರ್ಶನಗಳು.	ದತ್ತಾಂಶ, ವಿಶೇಷವಾಗಿ ಗುಣಾತ್ಮಕ ದತ್ತಾಂಶವನ್ನು ಸೂಕ್ತ ತಂತ್ರಗಳನ್ನು ಬಳಸಿ ವಿಶ್ಲೇಷಿಸಲಾಗುತ್ತದೆ.
೬. ಹಿಂದುಳಿದ ವರ್ಗಗಳ ಯುವಕರಲ್ಲಿ ಕನಿಷ್ಠ ಪ್ರವೇಶಾತಿ ಮತ್ತು ಉನ್ನತ ಶಿಕ್ಷಣದಲ್ಲಿ ಕಳಪೆ ಭಾಗವಹಿಸುವಿಕೆಗೆ ಕಾರಣಗಳು ಮತ್ತು ಮತ್ತು	– ಉನ್ನತ ಶಿಕ್ಷಣದಲ್ಲಿ [ಸಿಇಟಿ/ಸಿಇಟಿಯೇತರ] ಹಿಂದುಳಿದ ವರ್ಗಗಳಲ್ಲಿನ ವಿದ್ಯಾರ್ಥಿಗಳ ಮುಂದುವರಿಕೆಗೆ ಸಂಬಂಧಿಸಿದಂತೆ ಫಲಾನುಭವಿ/ ಫಲಾನುಭವಿಗಳಲ್ಲದ ಕುಟುಂಬಗಳು, ಇಲಾಖೆಯ ಸಿಬ್ಬಂದಿ, ಉನ್ನತ ಶಿಕ್ಷಣ	•ಸರ್ಕಾರದ ಕಡತಗಳು/ದಾಖಲೆಗಳು, ಕಾಲೇಜಿನ ಪ್ರಾಂಶುಪಾಲರು, ಫಲಾನುಭವಿ ಮತ್ತು ಇತರೆ ಭಾಗೀದಾರರು.	• ಪ್ರಶ್ನಾವಳಿಗಳು/ನಮೂನೆಗಳು, ಕೇಂದ್ರೀಕೃತ ಗುಂಪು ಚರ್ಚೆಗಳು ಮತ್ತು ಆಳವಾದ ಸಂದರ್ಶನಗಳು.	ಸಂಬಂಧಿತ ಸೂಚಕಗಳನ್ನು ಗಮನದಲ್ಲಿಟ್ಟುಕೊಂಡು ಪರಿಮಾಣಾತ್ಮಕ ಮತ್ತು ಗುಣಾತ್ಮಕ ದತ್ತಾಂಶಗಳು ಎರಡನ್ನೂ ವಿಶ್ಲೇಷಿಸಲಾಗುತ್ತದೆ.

ಅಡೆತಡೆಗಳು/ನಿರ್ಬಂಧಗಳನ್ನು ಕಂಡುಹಿಡಿಯುವುದು	ಸಂಸ್ಥೆಗಳ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ವಿದ್ಯಾರ್ಥಿ ಫಲಾನುಭವಿಗಳು ಮತ್ತು ಫಲಾನುಭವಿಗಳಲ್ಲದ ಭಾಗೀದಾರರ ವೀಕ್ಷಣೆಗಳು.			
೭. ಫಲಾನುಭವಿಗಳಿಂದ ಸಾಲದ ಮರುಪಾವತಿ ಸ್ಥಿತಿಯನ್ನು ಪರೀಕ್ಷಿಸುವುದು.	•ಸಾಲದ ಮರುಪಡೆಯುವಿಕೆ ಪಾವತಿ/ಸುಸ್ಥಿದಾರರ ಬಗ್ಗೆ ವಿದ್ಯಾರ್ಥಿ ಫಲಾನುಭವಿಗಳು, ವಿಭಾಗದ ಕಾರ್ಯಕರ್ತರು ಜಿಲ್ಲಾ ಪಂಚಾಯಿತಿ ಸಮಿತಿ ಸದಸ್ಯರಿಂದ ಅಭಿಪ್ರಾಯಗಳು/ವೀಕ್ಷಣೆಗಳು [ಸಿಇಟಿ ಮತ್ತು ಸಿಇಟಿಯೇತರ]	• ಅಧಿಕೃತ ವರದಿ ಮತ್ತು ದಾಖಲೆಗಳು ಮತ್ತು ಫಲಾನುಭವಿಗಳು	• ಪ್ರಶ್ನಾವಳಿಗಳು/ಸಂದರ್ಶನದ ನಮೂನೆಗಳು, ಕೇಂದ್ರೀಕೃತ ಗುಂಪು ಚರ್ಚೆಗಳು ಮತ್ತು ಆಳವಾದ ಸಂದರ್ಶನಗಳು.	ವಿದ್ಯಾರ್ಥಿ ಫಲಾನುಭವಿಗಳು ಪಡೆದ ಸಾಲ, ಸಾಲ ಮರುಪಾವತಿಯ ಶೇಕಡ/ವ್ಯಾಪ್ತಿ, ಸಾಲ ಬಾಕಿ, ಮತ್ತು ಸಾಲದ ಮೊತ್ತವನ್ನು ಪಾವತಿಸದಿರಲು ಕಾರಣಗಳು ಯಾವುದಾದರೂ ಇದ್ದರೆ ದತ್ತಾಂಶವನ್ನು ವಿಶ್ಲೇಷಿಸಲಾಗುತ್ತದೆ.
೮.ಇತರೆ ರಾಜ್ಯಗಳ ಇದೇ ರೀತಿಯ ಯೋಜನೆಗಳೊಂದಿಗೆ ಯೋಜನೆಯ ತುಲನಾತ್ಮಕ ವಿಶ್ಲೇಷಣೆ ಮಾಡುವುದು	- ವಿವಿಧ ಮೂಲಗಳಿಂದ ವಿದ್ಯಾರ್ಥಿಗಳ ಸಾಲ ದತ್ತಾಂಶದ ವಿಮರ್ಶೆ [ಬ್ಯಾಂಕಿಂಗ್/ಉನ್ನತ ಶಿಕ್ಷಣ ಕ್ಷೇತ್ರ ಮತ್ತು ಇತರ ಸಂಸ್ಥೆಗಳಿಂದ ಮತ್ತು ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯು ಕಲೆಹಾಕಿದ ಅಂತಾರಾಜ್ಯಗಳ ಸಂಖ್ಯಾಶಾಸ್ತ್ರೀಯ ದತ್ತಾಂಶಗಳು] •ಸಮಸ್ಯೆಗಳು ಮತ್ತು ಸವಾಲುಗಳ ಕುರಿತಂತೆ ರಾಜ್ಯಗಳಾದ್ಯಂತ ನಡೆಸಲಾದ ಸಂಶೋಧನಾ ಅಧ್ಯಯನಗಳ ವಿಮರ್ಶೆ ಮತ್ತು ಒಳನೋಟಗಳು.	•ಸಾಹಿತ್ಯದ ವಿಮರ್ಶೆ, ಇತರ ರಾಜ್ಯಗಳ ವರದಿಗಳ ವಿಮರ್ಶೆ, ದ್ವಿತೀಯ ಮೂಲಗಳು, ಅಧಿಕೃತ ದಾಖಲೆಗಳು	• ಸಾಹಿತ್ಯ ಮತ್ತು ವರದಿ/ದಾಖಲೆಗಳು	ತುಲನಾತ್ಮಕ ದೃಷ್ಟಿಕೋನವನ್ನು ಪಡೆಯಲು ವಿಮರ್ಶೆಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಲಾಗುತ್ತದೆ.

ಮೂಲ: ಲೇಖಕರು

2.3 ಮಾದರಿ ವಿನ್ಯಾಸ ಮತ್ತು ಸಂಶೋಧನಾ ಪರಿಕರಗಳು

ಉಲ್ಲೇಖ ನಿಯಮದ ಪ್ರಕಾರ ಈಗಾಗಲೇ ಸೂಚಿಸಲಾದ ಮಾದರಿ ಗಾತ್ರ ಮತ್ತು ಚೌಕಟ್ಟಿನಲ್ಲಿ ಅಧ್ಯಯನವು ಬಹು–ಹಂತದ ಶ್ರೇಣೀಕೃತ ಮಾದರಿ ವಿನ್ಯಾಸವನ್ನು ಬಳಸಿದೆ. ಮೊದಲ ಹಂತದಲ್ಲಿ ನಾಲ್ಕು ಕಂದಾಯ ವಿಭಾಗಗಳನ್ನು ಆಯ್ಕೆ ಮಾಡಲಾಗಿದೆ. ಎರಡನೇ ಹಂತದಲ್ಲಿ ಪ್ರತಿ ವಿಭಾಗದಿಂದ ಗರಿಷ್ಠ, ಮಧ್ಯಮ ಮತ್ತು ಕನಿಷ್ಠ ಫಲಾನುಭವಿ ವ್ಯಾಪ್ತಿಯನ್ನು ಹೊಂದಿದ ಮೂರು ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಹೀಗಾಗಿ ಒಟ್ಟು ೧೨ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಮೂರನೇ ಹಂತದಲ್ಲಿ ವಿದ್ಯಾರ್ಥಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಒಟ್ಟಾರೆ ೧೨ ಜಿಲ್ಲೆಗಳಲ್ಲಿ ಅರಿವು ಸಾಲ ಯೋಜನೆಯಡಿ ೨೨೪೭ ವಿದ್ಯಾರ್ಥಿ ಫಲಾನುಭವಿಗಳ ವ್ಯಾಪ್ತಿ ಇತ್ತು. ಈ ೧೨ ಜಿಲ್ಲೆಗಳಿಂದ ಸರಿಸುಮಾರು ಶೇಕಡ ೫೦ ರಷ್ಟು ಅಂದರೆ ೧೧೩೦ ವಿದ್ಯಾರ್ಥಿ ಫಲಾನುಭವಿಗಳನ್ನು ಅಂತಿಮವಾಗಿ ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ. ಇದಲ್ಲದೇ ಪ್ರತಿ ಮಾದರಿ ಜಿಲ್ಲೆಗಳಿಗೆ ಒಂದು ಶೇಕಡ ಯೋಜನಾ ಫಲಾನುಭವಿಯಲ್ಲದ ವಿದ್ಯಾರ್ಥಿಗಳನ್ನು [೧೨] ಆಯ್ಕೆ ಮಾಡಲಾಗುತ್ತದೆ. ಮಾದರಿ ವಿನ್ಯಾಸ ಮತ್ತು ಗಾತ್ರವನ್ನು ಈ ಕೆಳಗಿನ ಕೋಷ್ಟಕ–೨ ರಲ್ಲಿ ಸೂಚಿಸಲಾಗಿದೆ. ಮಾದರಿ ಜಿಲ್ಲೆಗಳ ಪ್ರಾದೇಶಿಕ ವಿಸ್ತಾರ/ವಿಸ್ತರಣೆ ಮತ್ತು ಸ್ಥಳವನ್ನು ಕೆಳಗಿನ ನಕ್ಷೆ ೧ ರಲ್ಲಿ ತೋರಿಸಲಾಗಿದೆ.

ಕೋಷ್ಟಕ 2 ಮಾದರಿಗಳ ವಿನ್ಯಾಸ

ವಿಭಾಗ/ಜಿಲ್ಲೆಗಳು	ಒಟ್ಟು ಫಲಾನುಭವಿಗಳು	ಪಡೆಯಲಾದ/ಆಯ್ದ ಮಾದರಿ	ಮಾದರಿ ಆಯ್ಕೆಯ ವಿವರಣೆಗಳು
ಬೆಂಗಳೂರು ವಿಭಾಗ			ಮಾದರಿಯ ಆಯ್ಕೆ ೪ ಕಂದಾಯ ವಿಭಾಗಗಳು X ೩ ಜಿಲ್ಲೆಗಳು =೧೨ ಜಿಲ್ಲೆಗಳು ೪ಕಂದಾಯ ವಿಭಾಗಗಳು – ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ಪ್ರತಿ ವಿಭಾಗದಿದಂದ ೩ ಜಿಲ್ಲೆಗಳು ಹೆಚ್ಚಿನ ಸಂಖ್ಯೆಯ ಫಲಾನುಭವಿಗಳನ್ನು ಹೊಂದಿರುವ ಜಿಲ್ಲೆ ಕಡಿಮೆ ಸಂಖ್ಯೆಯ ಫಲಾನುಭವಿಗಳನ್ನು ಹೊಂದಿರುವ ಜಿಲ್ಲೆ ಮಧ್ಯಮ ಸಂಖ್ಯೆಯ ಫಲಾನುಭವಿಗಳನ್ನು ಹೊಂದಿರುವ ಜಿಲ್ಲೆ ಒಟ್ಟು ಫಲಾನುಭವಿಗಳು =೨೨೪೭ ಒಟ್ಟು ಮಾದರಿ ಆಯ್ಕೆ ಫಲಾನುಭವಿಗಳು ೧೧೩೦ ನಾಲ್ಕು ವಿಭಾಗಗಳ ಮಾದರಿ ಫಲಾನುಭವಿಗಳಲ್ಲಿ ಶೇಕಡ ೧ ರಷ್ಟನ್ನು ನಿಯಂತ್ರಣ (ಕಂಟ್ರೋಲ್)ಗುಂಪಾಗಿ ಆಯ್ಕೆ ಮಾಡಲಾಗುವುದು. ಉದಾ: ೧೧೩೦ X ೧/೧೦೦ = ೧೨ ಫಲಾನುಭವಿಗಳಲ್ಲದ ವಿದ್ಯಾರ್ಥಿಗಳು.
ಬೆಂಗಳೂರು ನಗರ	೫೮೯	೨೪೫	
ಶಿವಮೊಗ್ಗ	೧೯೪	೮೧	
ಕೋಲಾರ	೫೯	೨೫	
ಮೈಸೂರು ವಿಭಾಗ			
ಮೈಸೂರು	೨೭೦	೧೬೦	
ಹಾಸನ	೧೧೩	೬೭	
ಕೊಡಗು	೩೦	೧೮	
ಬೆಳಗಾವಿ ವಿಭಾಗ			
ಬೆಳಗಾವಿ	೩೮೯	೧೮೯	
ಬಾಗಲಕೋಟೆ	೧೫೮	೭೮	
ಉತ್ತರಕನ್ನಡ	೮೪	೪೧	
ಕಲಬುರಗಿ ವಿಭಾಗ			
ಕಲಬುರಗಿ	೧೭೭	೧೧೦	
ಬೀದರ್	೧೦೩	೬೫	
ಬಳ್ಳಾರಿ	೮೧	೫೧	
ಒಟ್ಟು	೨೨೪೭	೧೧೩೦	

ಮೂಲ: ಉಲ್ಲೇಖ ನಿಯಮ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ.

ಚಿತ್ರ 2 ಕರ್ನಾಟಕದ ಪ್ರಾದೇಶಿಕವಾರು ಆಯ್ಕೆಯ ಜಿಲ್ಲೆಗಳು

Figure 1: 12 Selected districts for the study (Source: https://www.mapsofindia.com/maps/karnataka/)

2.3.1 ಅರಿವು ಯೋಜನೆಯ ಮಾದರಿ ವಿದ್ಯಾರ್ಥಿ ಫಲಾನುಭವಿಗಳ ಆಯ್ಕೆ.

ಫಲಾನುಭವಿಗಳ ಆಯ್ಕೆಯು ಯಾದೃಚ್ಛಿಕವಾಗಿ ಹಾಗೂ ಸಂಭವನೀಯತೆಯ ಮಾನದಂಡಗಳನ್ನು ಆಧರಿಸಿದೆ. ಇದರಿಂದಾಗಿ ಎಲ್ಲಾ ವಿದ್ಯಾರ್ಥಿ ವರ್ಗಗಳನ್ನು ಉನ್ನತ ಶಿಕ್ಷಣದ ವಿವಿಧ ಕೋರ್ಸುಗಳಿಂದ ಮಾದರಿ ಜಿಲ್ಲೆಗಳಲ್ಲಿ ಸೇರಿಸಿಕೊಳ್ಳಲಾಗಿದೆ. ೧೨ ಜಿಲ್ಲೆಗಳ ಫಲಾನುಭವಿಗಳ ಪಟ್ಟಿಯನ್ನು ನಾವು ಇತರೆ ಸಂಬಂಧಿಸಿದ ಇಲಾಖೆಗಳಿಂದ ಸ್ವೀಕರಿಸಿದ್ದೇವೆ. ಇವರೆಲ್ಲರೂ ಸಿಇಟಿ ಅಭ್ಯರ್ಥಿಗಳು. ಆದರೆ ವಿಶ್ಲೇಷಿಸುವಾಗ ಕೆಲವು ಸಿಇಟಿಯೇತರ ವಿದ್ಯಾರ್ಥಿಗಳೂ ಪಟ್ಟಿಯಲ್ಲಿದ್ದರು. ಸಿಇಟಿ ಮತ್ತು ಸಿಇಟಿಯೇತರ ವಿದ್ಯಾರ್ಥಿ ಫಲಾನುಭವಿಗಳನ್ನು ನಾವು ಪ್ರತ್ಯೇಕವಾಗಿ ವಿಶ್ಲೇಷಿಸಿದ್ದೇವೆ. ಜಿಲ್ಲೆಗಳಲ್ಲಿ ಫಲಾನುಭವಿ ವ್ಯಾಪ್ತಿಯ ಆಧಾರದ ಮೇಲೆ ಶ್ರೇಣೀಕರಣವನ್ನು ಮಾಡಲಾಗುತ್ತದೆ.

2.3.2 ಸಂಶೋಧನಾ ಪರಿಕರಗಳು: ವಿವರಣೆ

ಮುಖ್ಯವಾಗಿ ದತ್ತಾಂಶ ಸಂಗ್ರಹಕ್ಕಾಗಿ ಈ ಅಧ್ಯಯನದಲ್ಲಿ ಬಳಸಲಾದ ಸಂಶೋಧನಾ ಸಾಧನಗಳೆಂದರೆ ಪ್ರಶ್ನಾವಳಿಗಳು, ಆಳ–ಸಂದರ್ಶನಗಳು, ಕೇಂದ್ರೀಕೃತ ಗುಂಪು ಚರ್ಚೆ ಮತ್ತು ಅನೌಪಚಾರಿಕ ಸಂವಹನಗಳು. ಹೆಚ್ಚಿನ ಗುಣಾತ್ಮಕ ದತ್ತಾಂಶವನ್ನು ಅನುಷ್ಠಾನ ಮತ್ತು ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ, ಚಟುವಟಿಕೆಗಳ ಮತ್ತು ಕಾರ್ಯಕ್ರಮಗಳ ವೇಳಾಪಟ್ಟಿ, ವರ್ಗವಾರು ಪ್ರಕಾರ ಆಯ್ಕೆ ಮಾಡಲು ಅಳವಡಿಸಿಕೊಂಡ ಮಾನದಂಡಗಳು, ಸಭೆಗಳ ವಿವರಗಳು, ಸಂಬಂಧಿಸಿದ ಇತರ ಇಲಾಖೆಗಳ ನಡುವೆ ಸಮನ್ವಯತೆ, ಕಾಲೇಜುಗಳು, ಸಿಇಟಿ/ಕೆಇಎ ವಿಭಾಗಗಳು, ಜಿಲ್ಲಾ ಪಂಚಾಯತ್ ಕಚೇರಿಗಳು ಮತ್ತು ವಿವಿಧ ಭಾಗೀದಾರರುಗಳಿಂದ ಪಡೆದುಕೊಳ್ಳಲಾಗಿದೆ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ದತ್ತಾಂಶ ಸಂಗ್ರಹಣೆಗೆ ಬಳಸುವ ಸಂಶೋಧನಾ ಸಾಧನಗಳು ಹೀಗಿವೆ.:

- ಫಲಾನುಭವಿ ವಿದ್ಯಾರ್ಥಿಗಳು ಮತ್ತು ಫಲಾನುಭವಿಗಳಲ್ಲದ ವಿದ್ಯಾರ್ಥಿಗಳ ಸಮೀಕ್ಷೆಗೆ ಪ್ರಶ್ನಾವಳಿಗಳು
- ಹಿಂದುಳಿದ ವರ್ಗಗಳ / ಡಿ.ದೇವರಾಜ ಅರಸ್ ಅಭಿವೃದ್ಧಿ ನಿಗಮ ಇಲಾಖೆಯ ಅಧಿಕಾರಿಗಳಿಗೆ ಸಂದರ್ಶನ ನಮೂನೆಗಳು.
- ಕಾಲೇಜು ಹಂತದಲ್ಲಿ (ಪ್ರಾಂಶುಪಾಲರು ಮತ್ತು ಇತರೆ ಬೋಧಕ ಸಿಬ್ಬಂದಿ) ಕೇಂದ್ರೀಕೃತ ಗುಂಪು ಚರ್ಚೆ.
- ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಂದರ್ಶನ ನಮೂನೆಗಳು
- ಫಲಾನುಭವಿ ವಿದ್ಯಾರ್ಥಿಗಳೊಂದಿಗೆ ಕೇಂದ್ರೀಕೃತ ಗುಂಪು ಚರ್ಚೆ.

2.3.3 ದತ್ತಾಂಶಗಳ ವಿಶ್ಲೇಷಣೆ.

ಪರಿಮಾಣಾತ್ಮಕ ದತ್ತಾಂಶಗಳನ್ನು ಸ್ಪೆಡ್ ಶೀಟ್ (SPÀSS, STATA) ಬಳಸಿ ಸಂಖ್ಯಾಶಾಸ್ತ್ರದ ಆಯಾಮಗಳ ಸಹಕಾರದಿಂದ ವಿಶ್ಲೇಷಿಸಲಾಗುತ್ತದೆ. ದತ್ತಾಂಶ ವಿಶ್ಲೇಷಣೆಯ ಸ್ವರೂಪವನ್ನು ೨ ಮತ್ತು ೩ ವೇ ಮಾದರಿ, ಅಡ್ಡ–ವಿಭಾಗದ ವಿಧಾನಗಳನ್ನು (ಕ್ರಾಸ್ ಸೆಕ್ಷನಲ್ ಮೆಥಡ್) ಬಳಸಿ ಮಾಡಲಾಗುತ್ತದೆ. ಅಗತ್ಯವಿರುವ ಕಡೆ ನೀಲ ನಕ್ಷೆ, ಫ್ಲೋ ಚಾರ್ಟ್, ರೇಖಾಚಿತ್ರವನ್ನು ಮತ್ತು ನಮೂನೆಗಳನ್ನು ಬಳಸಿ ಮಂಡನೆ ಮಾಡಲಾಗುತ್ತದೆ. ವಿಶ್ಲೇಷಣೆಯ ವಿಧಾನವು ವಿವರಣಾತ್ಮಕ ಮತ್ತು ತಾರ್ಕಿಕವಾಗಿದೆ. ಪ್ರಕರಣಗಳ ಅಧ್ಯಯನ (ಕೇಸ್ ಸ್ಟಡೀಸ್) ಗಳನ್ನು ವಿವರಣಾತ್ಮಕ ಮತ್ತು ನಿರೂಪಣಾ ಶೈಲಿಯಲ್ಲಿ ಪ್ರಸ್ತುತಪಡಿಸಲಾಗಿದೆ.

.

ಅಧ್ಯಾಯ 3 – ಸಾಹಿತ್ಯದ ವಿಮರ್ಶೆ

ಉನ್ನತ ಶಿಕ್ಷಣದ ವೆಚ್ಚವನ್ನು ಏರಿಸುವುದು ಜಾಗತಿಕ ವಿದ್ಯಮಾನವಾಗಿದೆ. ಇದರೊಂದಿಗೆ, ಶೈಕ್ಷಣಿಕ ಸಾಧನೆಯನ್ನು ಹೆಚ್ಚಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲಗಳ ಪ್ರವೇಶವನ್ನು ಹೆಚ್ಚಿಸುವ ವಿಷಯವು ಶಿಕ್ಷಣ ತಜ್ಞರು ಮತ್ತು ನೀತಿ ನಿರೂಪಕರಿಗೆ ಉನ್ನತ ಶಿಕ್ಷಣದ ಹಣಕಾಸಿಗೆ ಸಂಬಂಧಿಸಿದಂತೆ ಪ್ರಮುಖ ವಿಷಯವಾಗಿದೆ. ವಿಶ್ವದಾದ್ಯಂತ ಉನ್ನತ ಶಿಕ್ಷಣವು ಜಾಗತಿಕ ಆರ್ಥಿಕತೆ ಮತ್ತು ರಾಜಕೀಯ ಚಟುವಟುಕೆಗಳಿಂದ ತೀವ್ರವಾಗಿ ಪ್ರಭಾವಿಸಲ್ಪಟ್ಟಿರುವುದರಿಂದ ಪ್ರಸ್ತುತ ಶೈಕ್ಷಣಿಕ ಸಾಲವು ಹೆಚ್ಚಿನ ದೇಶಗಳಲ್ಲಿ ತೀವ್ರ ಚರ್ಚೆಯ ವಿಷಯವಾಗಿದೆ. ಉನ್ನತ ಶಿಕ್ಷಣಕ್ಕೆ ಹಣಕಾಸು ಒದಗಿಸುವುದು, ವಿದ್ಯಾರ್ಥಿ ವೇತನದ ರೂಪುರೇಷೆಗಳು, ನಿಗದಿತ ಚೌಕಟ್ಟಿನೊಳಗೆ ಇದನ್ನು ಬೆಂಬಲಿಸುವುದು ಮತ್ತು ನಿರ್ವಹಿಸುವುದರ ಕುರಿತು ಭಿನ್ನ ಅಭಿಪ್ರಾಯಗಳಿವೆ. ಯಾವ ವರ್ಗದ ವಿದ್ಯಾರ್ಥಿಗಳಿಗೆ ಸಾಲದೊಂದಿಗೆ ಬೆಂಬಲ ನೀಡಬೇಕು, ವಿದ್ಯಾರ್ಥಿ ಸಾಲದ ಮೂಲ ಯಾವುದು, ವಿದ್ಯಾರ್ಥಿ ಸಾಲ ನೀಡುವಲ್ಲಿ ಸರ್ಕಾರದ ಪಾತ್ರ ಏನು ಮತ್ತು ವಿದ್ಯಾರ್ಥಿಗೆ ಸಾಲವನ್ನು ಹೇಗೆ ಪಾವತಿಸಬೇಕು ಮತ್ತು ಮರುಪಡೆಯಬೇಕು ಎಂಬ ಪ್ರಶ್ನೆಗಳು ಈ ಚರ್ಚೆಯ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಈ ಪ್ರಶ್ನೆಗಳು ಅಂತಿಮವಾಗಿ ಸಾಲದ ಲಭ್ಯತೆ, ನ್ಯಾಯಯುತ ಫಲಿತಾಂಶ, ಉನ್ನತ ಶಿಕ್ಷಣದ ಮೇಲಿನ ಹೂಡಿಕೆಗಳು ಮತ್ತು ಆದಾಯದಂತಹ ಅಂಶಗಳನ್ನು ಸ್ಪರ್ಶಿಸುತ್ತವೆ. ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಗೆ ಸಾಲ, ಅದರ ನೀತಿಯ ಕುರಿತ ದೃಷ್ಟಿಕೋನ, ಕಾರ್ಯಾಚರಣೆಯ ತಂತ್ರ, ಪರಿಣಾಮ ಮತ್ತು ಫಲಿತಾಂಶದ ಕುರಿತಂತೆ ಸಾಕಷ್ಟು ಸಾಹಿತ್ಯ ಮತ್ತು ಪ್ರಾಯೋಗಿಕ ಪುರಾವೆಗಳಿವೆ. ಇದು ವಿಷಯದ ಕುರಿತಂತೆ ಸಾಕಷ್ಟು ಒಳನೋಟಗಳನ್ನು ನೀಡುತ್ತದೆ. ಅಂತಹ ಸಾಹಿತ್ಯ ವಿಮರ್ಶೆಯಿಂದ ದೊರಕಿದ ಕೆಲವು ಪ್ರಮುಖ ಅಂಶಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

3.1 ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಗೆ ಸಾಲ: ಭಾರತದಲ್ಲಿ ನಡೆದ ಅಧ್ಯಯನಗಳು

ಭಾರತೀಯ ಸನ್ನಿವೇಶದಲ್ಲಿ ಅರ್ಥಶಾಸ್ತ್ರಜ್ಞರು ಮತ್ತು ಸಾರ್ವಜನಿಕ ಹಣಕಾಸು ತಜ್ಞರಾದ ಜೆಬಿಜಿ ತಿಲಕ್ (೧೯೯೧, ೨೦೦೩) ವರ್ಗೀಸ್ (೧೯೯೧, ೨೦೧೪) ಸುಧಂಶು ಭೂಷಣ್ (೨೦೦೮) ಜೆ. ಎಲ್ ಅಜಾದ್ (೨೦೦೮) ಪಿ.ಗೀತಾರಾಣಿ (೨೦೦೯) ರವಿ ಶ್ರೀವಾಸ್ತವ (೨೦೦೮), ರವೀಂದ್ರ ಧೋಲಾಕಿಯಾ (೨೦೦೯) ಮುಂತಾದವರು ಉನ್ನತ ಶಿಕ್ಷಣಕ್ಕೆ ಹಣಕಾಸು ಕುರಿತಂತೆ ತಮ್ಮ ಅಧ್ಯಯನದಲ್ಲಿ ಸಾಕಷ್ಟು ಒಳವುಗಳನ್ನು ನೀಡಿದ್ದಾರೆ. ತಮ್ಮ ಅಧ್ಯಯನದಲ್ಲಿ ಅವರು ಭಾರತೀಯ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳು ಮತ್ತು ಪ್ರಮುಖ ಸವಾಲುಗಳಾದ ಯೋಜನೆ, ಸಂಪನ್ಮೂಲ ಹಂಚಿಕೆ, ಖರ್ಚು, ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಗೆ ಹಣಕಾಸು ಸಹಾಯ, ಬಡತನ ನಿರ್ಮೂಲನೆಯಲ್ಲಿ ಅದರ ಪಾತ್ರ, ಆರ್ಥಿಕ ಚಲನಶೀಲತೆ ಮತ್ತು ಉತ್ತಮ ಉದ್ಯೋಗ ಮತ್ತು ವೇತನ ಸೇರಿದಂತೆ ಶಿಕ್ಷಣದ ಮೇಲೆ ಸಾರ್ವಜನಿಕ ಹೂಡಿಕೆಯ ಕುರಿತು ಬೆಳಕು ಚೆಲ್ಲುತ್ತಾರೆ.

ತಿಲಕ್ ಜೆಬಿಜಿ ಮತ್ತು ವರ್ಗೀಸ್ ಎನ್ವಿ (೧೯೯೧) ಸಂಪನ್ಮೂಲ ನಿರ್ಬಂಧಗಳು ಮತ್ತು ಹೂಡಿಕೆಗಳನ್ನು ಪರಿಗಣಿಸಿದರೆ, ಸಾಮಾನ್ಯ ತೆರಿಗೆ ಆದಾಯದಿಂದ ಉನ್ನತ ಶಿಕ್ಷಣಕ್ಕೆ ಹಣಕಾಸು ಒದಗಿಸುವುದು ದೀರ್ಘಾವಧಿಯವರೆಗೆ ಮುಂದುವರಿಸಬಹುದಾದ ಆಯ್ಕೆಯಾಗಿಲ್ಲ ಎನ್ನುತ್ತಾರೆ. ಈ ನಿಟ್ಟಿನಲ್ಲಿ ಅವರು ಸಾರ್ವಜನಿಕ ಸಂಪನ್ಮೂಲಗಳಿಂದ ಉನ್ನತ ಶಿಕ್ಷಣಕ್ಕೆ ಹಣಕಾಸಿನ ಸಹಾಯ ನೀಡಲು ಹಲವಾರು ಪರ್ಯಾಯ ನೀತಿಗಳ ಆಯ್ಕೆಗಳನ್ನು ಸೂಚಿಸುತ್ತಾರೆ, ಇದರಲ್ಲಿ ವಿದ್ಯಾರ್ಥಿ ಸಾಲವೂ ಸೇರಿದೆ. ಭಾರತದ ಆರ್ಥಿಕತೆಯು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳನ್ನು ಅವಲಂಬಿಸಿರುವುದರಿಂದ ಉನ್ನತ ಶಿಕ್ಷಣಕ್ಕೆ ಹಣಕಾಸು ನೀಡುವಲ್ಲಿ ಸರ್ಕಾರವು ದೊಡ್ಡ ಜವಾಬ್ದಾರಿಯನ್ನು

ಹೊರಬೇಕಾಗುವುದು ಮಾತ್ರವಲ್ಲ ದೀರ್ಘಾವಧಿಯಲ್ಲಿ ಹಂಚಿಕೆಗಳನ್ನು ಪರಿಣಾಮಕಾರಿಯಾಗಿ ಮತ್ತು ಸುಸ್ಥಿರವಾಗಿಸಲು ಹೆಚ್ಚಿನ ಹಣಕಾಸಿನ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಭಾರತದಲ್ಲಿ ರಾಷ್ಟ್ರೀಯ ವಿದ್ಯಾರ್ಥಿವೇತನ ಸಾಲ ಯೋಜನೆಯ ಕುರಿತ ತಮ್ಮ ಅಧ್ಯಯನದಲ್ಲಿ, ತಿಲಕ್ (೧೯೯೨) ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳ ಕುರಿತು ಬೆಳಕು ಚೆಲ್ಲುತ್ತಾರೆ. ಉನ್ನತ ಶಿಕ್ಷಣಕ್ಕೆ ಹಣಕಾಸು ಒದಗಿಸುವ ಇತರ ವಿಧಾನಗಳಿಗಿಂತ ವಿದ್ಯಾರ್ಥಿ ಸಾಲಗಳು ಹೆಚ್ಚು ಪರಿಣಾಮಕಾರಿ ಎಂಬ ಅಭಿಪ್ರಾಯಕ್ಕೆ ಅವರು ಬದ್ದರಾಗಿದ್ದರೂ. ಉನ್ನತ ಶಿಕ್ಷಣಕ್ಕಾಗಿ ಅಯವ್ಯಯದ ಸಂಪನ್ಮೂಲಗಳು ಕ್ಷೀಣಿಸುತ್ತಿರುವ ನಿಟ್ಟಿನಲ್ಲಿ, ಫಲದಾಯಕತೆ ಮತ್ತು ಹೂಡಿಕೆಯ ದೃಷ್ಟಿಯಿಂದ ಬೆಲೆ ತಾರತಮ್ಯ ನೀತಿ ಹೆಚ್ಚು ಪರಿಣಾಮಕಾರಿಯಾಗಿದೆ ಎಂದು ವಾದಿಸುತ್ತಾರೆ [ತಿಲಕ್ ಮತ್ತು ವರ್ಗೀಸ್, ೧೯೯೧].

ಶ್ರೀನಿವಾಸನ್ ಆರ್ ಮತ್ತು ದಾಸ್ ಡಿ (೨೦೧೧) ಭಾರತದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಶಿಕ್ಷಣ ಸಾಲವನ್ನು ನೀಡಲು ಫಲಾನುಭವಿ ವಿದ್ಯಾರ್ಥಿಯನ್ನು ಆಯ್ಕೆಮಾಡುವ ವಿಧಾನಗಳನ್ನು ಪರಿಶೀಲಿಸಿದರು. ಇದು ಅರ್ಜಿದಾರರು ಎದುರಿಸುತ್ತಿರುವ ಸಮಸ್ಯೆಗಳು; ಸಮಸ್ಯಾತ್ಮಕ ಸಾಲಗಾರರ ಹಿನ್ನೆಲೆ ಮತ್ತು ಸಾಲ ಪಡೆಯುವಲ್ಲಿನ ಸಮಸ್ಯೆಗಳನ್ನು ನಿವಾರಿಸಲು ತೆಗೆದುಕೊಂಡ ಕ್ರಮಗಳನ್ನೂ ಒಳಗೊಂಡಿತ್ತು. ದತ್ತಾಂಶದ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಗಾಗಿ ಪ್ರೊಬಿಟ್ ಮಾದರಿಯನ್ನು ಬಳಸಿಕೊಂಡು ಲೇಖಕರು ಶಿಕ್ಷಣ ಸಾಲವನ್ನು ಪದವಿಶಿಕ್ಷಣದ ವಿದ್ಯಾರ್ಥಿಗಳಿಗಿಂತ ಸ್ನಾತಕೋತ್ತರ ವೃತ್ತಿಪರ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳೇ ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದಾರೆ ಎನ್ನುತ್ತಾರೆ. ಸರ್ಕಾರಿ ಮತ್ತು ಸರ್ಕಾರಿ ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳಿಗೆ ಸಾಲ ನೀಡಲು ಬ್ಯಾಂಕುಗಳು ಆದ್ಯತೆ ನೀಡುತ್ತವೆ. ಇದಲ್ಲದೆ, ಕೆಲಸದ ಅನುಭವ ಇರುವ ಅಥವಾ ಇಲ್ಲದಿರುವ ವಿದ್ಯಾರ್ಥಿಗಳಿಗೆ ಸಾಲ ನೀಡುವಲ್ಲಿ ಯಾವುದೇ ತಾರತಮ್ಯವಿಲ್ಲ. ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲವನ್ನು ನೀಡಲು ಖಾಸಗಿ ವಲಯದ ಬ್ಯಾಂಕುಗಳ ಹಿಂಜರಿಯುವುದನ್ನು ಈ ಅಧ್ಯಯನವು ಕಂಡುಹಿಡಿದಿದೆ.

ಜಾಕೋಬ್ ಜಾನ್ (೨೦೧೩) ಭಾರತದಲ್ಲಿ ವಿದ್ಯಾರ್ಥಿ ಸಾಲ ಯೋಜನೆಯ ಕಾರ್ಯಾಚರಣೆಯ ಲಕ್ಷಣಗಳು, ಅನುಷ್ಠಾನದಲ್ಲಿನ ಸಮಸ್ಯೆಗಳು ಮತ್ತು ಪ್ರಭಾವದ ಬಗ್ಗೆ ಸಮಗ್ರ ವಿಶ್ಲೇಷಣೆ ಮಾಡಿದ್ದಾರೆ. ವಿದ್ಯಾರ್ಥಿ ಸಾಲ ಯೋಜನೆಯನ್ನು ವಿಸ್ತರಿಸುವುದನ್ನು ಮತ್ತು ದೇಶಾದ್ಯಂತ ಅಂತಹ ಎಲ್ಲಾ ಪ್ರಯತ್ನಗಳನ್ನು ಸಂಘಟಿಸಲು ರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಲು ಸಹ ಶಿಫಾರಸ್ಸು ಮಾಡುತ್ತಾರೆ. ಅಂತಹ ಯೋಜನೆಯ ಅನಪೇಕ್ಷಿತ ಪರಿಣಾಮಗಳ ಕುರಿತು ಇವರು ಎಚ್ಚರಿಸುತ್ತಾರೆ ಮತ್ತು ಸಮಾಜದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅಗತ್ಯತೆಗಳಿಗೆ ಅನುಗುಣವಾಗಿ ಸಂವೇದನಾಶೀಲ ಕಾರ್ಯ ವಿಧಾನಗಳನ್ನು ಅಳವಡಿಸಿಕೊಳ್ಳುವ ಅಗತ್ಯತೆಯ ಬಗ್ಗೆ ಅವರು ಒತ್ತು ನೀಡಿದ್ದಾರೆ.

ರಾಜೀವ್ ದರೋಲಿಯಾ (೨೦೧೩) ವಿದ್ಯಾರ್ಥಿ ಸಾಲದ ಸಾಲ ಮತ್ತು ಸುಸ್ಥಿದಾರಿಕೆ ಸ್ಥಿರವಾಗಿ ಏರುತ್ತಿದ್ದು ಇದು ಇದಕ್ಕೆ ಸಂಬಂಧಿಸಿದ ಸಾರ್ವಜನಿಕ ಮತ್ತು ಖಾಸಗಿ ಅಪಾಯಗಳ ಬಗ್ಗೆ ಸಾರ್ವಜನಿಕರಲ್ಲಿ ಆತಂಕವನ್ನು ಹುಟ್ಟುಹಾಕಿದೆ ಎಂಬುದನ್ನು ಗಮನಿಸುತ್ತಾರೆ. ನೀತಿ ನಿರೂಪಕರು ಸಾರ್ವಜನಿಕ ನಿಧಿಗಳ (ಶಿಕ್ಷಣ ಸಾಲ) ಸಮರ್ಥ ಬಳಕೆಯನ್ನು ಉತ್ತೇಜಿಸುವ ಮತ್ತು ಉನ್ನತ ಶಿಕ್ಷಣದ ದಾಖಲಾತಿ/ ಪ್ರವೇಶವನ್ನು ಪ್ರೋತ್ಸಾಹಿಸುತ್ತ ವಿದ್ಯಾರ್ಥಿಗಳನ್ನು ರಕ್ಷಿಸುವ ಸವಾಲನ್ನು ಎದುರಿಸುತ್ತಾರೆ.

ವರ್ಗೀಸ್ ಕೆ. ಎಕ್ಸ್. ಮತ್ತು ಮನೋಜ್ ಪಿ. ಕೆ (೨೦೧೩) – ೨೦೦೧ ರಲ್ಲಿ ಭಾರತದಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಶೈಕ್ಷಣಿಕ ಸಾಲ ಯೋಜನೆಯ ಆಗಮನದೊಂದಿಗೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿಯಲ್ಲಿ ಹೆಚ್ಚಳವಾಗಿದೆ.

ಶೈಕ್ಷಣಿಕ ಸಾಲಗಳು ಅರ್ಹ ವಿದ್ಯಾರ್ಥಿಗಳಿಗೆ ಖಾಸಗೀ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ನೀಡಲಾಗುವ ವೃತ್ತಿಪರ ಮತ್ತು ಉದ್ಯೋಗ–ಆಧಾರಿತ ಕೋರ್ಸ್‌ಗಳನ್ನು ಮುಂದುವರಿಸಲು ದಾರಿ ಮಾಡಿಕೊಟ್ಟಿದ್ದಾವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಜೇಶ್ ತಿವಾರಿ ಮತ್ತು ಬಿಮಲ್ ಅಂಜುಮ್ (೨೦೧೩) ಗಮನಿಸಿದಂತೆ, ಜನಸಂಖ್ಯೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯುವಜನರನ್ನು ಹೊಂದಿರುವ ದೇಶದಲ್ಲಿ ಒಟ್ಟು ದಾಖಲಾತಿ ಅನುಪಾತ ತೀರಾ ಕಡಿಮೆ ಇರುವುದನ್ನು ಗಮನಿಸುತ್ತಾರೆ. ಸಾಲದ ಲಭ್ಯತೆಯು ದೇಶದ ಆರ್ಥಿಕ ಪ್ರಗತಿ ಮತ್ತು ಸಂಪತ್ತಿನ ಹಂಚಿಕೆಗಾಗಿ ನುರಿತ ಮಾನವಶಕ್ತಿಯ ಪೂರೈಸುವಲ್ಲಿ ಅಗತ್ಯವಾಗಿದೆ. ಉನ್ನತ ಶಿಕ್ಷಣ ಖಾಸಗೀಕರಣದತ್ತ ಸಾಗುವುದು ಮತ್ತು ಅಯವ್ಯಯದ ಕಳಪೆ ಬೆಂಬಲವು ದೇಶಕ್ಕೆ ಶೈಕ್ಷಣಿಕ ಸಾಲಗಳ ಮಹತ್ವವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಅವರು ವಾದಿಸುತ್ತಾರೆ. ಒಟ್ಟು ದೇಶಿಯ ಉತ್ಪನ್ನದಲ್ಲಿ ಪ್ರತಿ ಶೇಕಡ ೧ ರಷ್ಟು ಹೆಚ್ಚಳಕ್ಕೆ, ಶಿಕ್ಷಣ ಸಾಲದ ಬೇಡಿಕೆ ಶೇಕಡ ೩ ರಷ್ಟು ಹೆಚ್ಚಾಗುತ್ತದೆ. ಶಿಕ್ಷಣ ಸಾಲಗಳಲ್ಲಿ ಸ್ಥಿರ ಏರಿಕೆಯ ಹೊರತಾಗಿಯೂ, ಕಳಪೆ ಬ್ಯಾಂಕಿಂಗ್ ಸೇವೆಗಳು, ಬ್ಯಾಂಕುಗಳಲ್ಲಿ ಸಾಲ ನಿರಾಕರಣೆ ಬಗ್ಗೆ ದೂರುಗಳ ಕುರಿತು ಗಂಭೀರವಾಗಿ ಗಮನಹರಿಸಬೇಕಿದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಮನೋಜ್ ಪಿ.ಕೆ. (೨೦೧೩) ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಸಾಲ ಮತ್ತು ಇತರ ರೀತಿಯ ವೈಯಕ್ತಿಕ ಸಾಲಗಳ ಬೆಳವಣಿಗೆಯನ್ನು ವಿಶ್ಲೇಷಿಸುತ್ತಾರೆ. ೨೦೦೧–೨೦೧೧ರ ಅವಧಿಯಲ್ಲಿ ಖಾಸಗಿ ಕಾಲೇಜುಗಳು ಮತ್ತು ಸ್ವಾಯತ್ತ ವಿಶ್ವವಿದ್ಯಾಲಯಗಳ ಹೆಚ್ಚಳದೊಂದಿಗೆ ಉನ್ನತ ಶಿಕ್ಷಣ ಸಾಲದಲ್ಲಿ ಸ್ಥಿರವಾದ ಹೆಚ್ಚಳ ಮತ್ತು ಉನ್ನತ ಶಿಕ್ಷಣದ ದಾಖಲಾತಿಯಲ್ಲಿ ಏರಿಕೆಯನ್ನು ಅವರು ಗಮನಿಸಿದ್ದಾರೆ.

ಆರತಿ ದಿವಾನ್ ಮತ್ತು ಇತರರು (೨೦೧೩) ಹರಿಯಾಣ ರಾಜ್ಯದಲ್ಲಿ ಶಿಕ್ಷಣ ಸಾಲದ ಕುರಿತು ವಿದ್ಯಾರ್ಥಿಗಳ ಗ್ರಹಿಕೆ ಕುರಿತು ಅಧ್ಯಯನ ನಡೆಸಿದ್ದು. ಮೌಲ್ಯವರ್ಧನೆ, ಅಡಮಾನ, ಪರಿಣಾಮಕಾರಿತ್ವ, ಅರ್ಹತಾ ಮಾನದಂಡಗಳು, ವಿತರಣಾ ವಿಧಾನ, ಅನುಕೂಲತೆ ಮತ್ತು ಬಡ್ಡಿದರದಂತಹ ವಿವಿಧ ವೈಶಿಷ್ಟ್ಯಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಸಾಲದ ಬಗ್ಗೆ ವಿದ್ಯಾರ್ಥಿಗಳ ಗ್ರಹಿಕೆಗಳನ್ನು ಅಧ್ಯಯನವು ಪರಿಶೀಲಿಸಿದೆ. ವಿವಿಧ ನಿಯತಾಂಕಗಳಿಗೆ ಸಂಬಂಧಿಸಿದಂತೆ ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳ ನಡುವಿನ ಭೇದಾತ್ಮಕ ಗ್ರಹಿಕೆಗಳನ್ನು ಅಧ್ಯಯನವು ಕಂಡುಹಿಡಿದಿದೆ.

ಅಸ್ಸೋಚಾಮ್ (೨೦೧೫) ನಡೆಸಿದ ಅಧ್ಯಯನದ ಪ್ರಕಾರ, ಸುಮಾರು ೬೮೦,೦೦೦ ವಿದ್ಯಾರ್ಥಿಗಳು, ಅವರಲ್ಲಿ ಹಲವರು ಮಧ್ಯಮ ವರ್ಗದವರು ವಿದೇಶಕ್ಕೆ ಅಧ್ಯಯನಕ್ಕೆ ಹೋಗುತ್ತಾರೆ, ವಾರ್ಷಿಕ ೬ ಬಿಲಿಯನ್ ನಿಂದ ೭ ಬಿಲಿಯನ್ ಹಣ ವಿದೇಶೀ ವಿನಿಮಯವಾಗುತ್ತಿದೆ. ಇದು ಶ್ರೀಮಂತರು ಮಾತ್ರವಲ್ಲದೆ ಮಧ್ಯಮ ವರ್ಗದವರೂ ಸಹ ಈ ಖರ್ಚನ್ನು ಭರಿಸಬಹುದು ಎಂಬುದನ್ನು ಸೂಚಿಸುತ್ತದೆ. ಈ ಪ್ರವೃತ್ತಿ ಭವಿಷ್ಯದಲ್ಲಿ ವೃತ್ತಿಪರ ಕೋರ್ಸ್‌ಗಳಿಗೆ ಬ್ಯಾಂಕಿನಿಂದ ದೊರಕಬಹುದಾದ ಹಣಕಾಸು ಸಹಾಯವನ್ನು ನಿರ್ಣಯಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಾಲಗಳ ಬಡ್ಡಿದರವನ್ನು ೨೦೦೬ ಮತ್ತು ೨೦೧೦ ರ ನಡುವೆ ಸಹಜವಾಗಿ (ಹಣದುಬ್ಬರವನ್ನು ಲೆಕ್ಕಿಸದೆ) ಶೇಕಡ ೨೬ ರಷ್ಟು ವಾರ್ಷಿಕ ದರದಲ್ಲಿ ಹೆಚ್ಚಿಸಿದರೆ, ಮುಂದಿನ ನಾಲ್ಕು ವರ್ಷಗಳಲ್ಲಿ ವಾರ್ಷಿಕ ಬೆಳವಣಿಗೆಯ ದರವು ಕೇವಲ ಶೇಕಡ ೩ ಕ್ಕೆ ಇಳಿಯಿತು. ಇದಕ್ಕೆ ಸಾಲ ಮರುಪಡೆಯುವಿಕೆ ಸಮಸ್ಯೆ ಭಾಗಶಃ ಕಾರಣವಾಗಿತ್ತು. ಅಂತಹ ಸಾಲಗಳನ್ನು ವಿಧಿಸಿದ ಮಿತಿಗಳೊಂದಿಗೆ ಖಾತರಿಪಡಿಸಿಕೊಳ್ಳಲು ಹಳೆಯ ವಿದ್ಯಾರ್ಥಿಗಳ ಹಣವನ್ನು ಬಳಸಬಹುದು. ಪ್ರಸ್ತುತ ದೇಶದಲ್ಲಿ ಉನ್ನತ ಶಿಕ್ಷಣಕ್ಕೆ ದಾಖಲಾತಿಯ ಒಟ್ಟು ಪ್ರಮಾಣದಲ್ಲಿ ಶೇ.೧೫ ರಷ್ಟು ಪ್ರಮಾಣ ಬ್ಯಾಂಕ್ ಸಾಲಗಳಿಂದ ಹಣಕಾಸು ಸಹಾಯವನ್ನು ಪಡೆಯುತ್ತಿದೆ. ಇದು ವಾರ್ಷಿಕ ಅಭಿವೃದ್ಧಿ ದರ ಶೇ.೨೦ ರೊಂದಿಗೆ

೨೦೨೦–೨೧ರ ವೇಳೆಗೆ ಕನಿಷ್ಠ ಶೇ.೩೦ ರಷ್ಟು ಹೆಚ್ಚಾಗಬೇಕು ಎಂದು ಸೂಚಿಸಲಾಗುತ್ತಿದೆ. ನಿರುದ್ಯೋಗಿ ಪದವೀಧರರು ತಮ್ಮ ಸಾಲವನ್ನು ಮರುಪಾವತಿಸಲು ಸಾಧ್ಯವಾಗದಿರುವ ಸಾಧ್ಯತೆಗಳಿಂದ ಶಿಕ್ಷಣ ಸಂಸ್ಥೆಗಳು ತಮ್ಮನ್ನು ರಕ್ಷಿಸಿಕೊಳ್ಳಲು ವಿಮಾ ಕಂಪನಿಗಳ ಸಹಾಯವನ್ನು ಪಡೆದು ಶಿಕ್ಷಣ ಸಂಸ್ಥೆಗಳಿಗಾಗಿಯೇ ವಿಶೇಷ ವಿಮಾ ಯೋಜನೆಗಳನ್ನು ರೂಪಿಸುವ ನಿಟ್ಟಿನಲ್ಲಿ ಸರ್ಕಾರ ವಿಮಾ ಕಂಪನಿಗಳನ್ನು ಪ್ರೋತ್ಸಾಹಿಸಬಹುದು.

ಭಾರತದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ವಿವಿಧ ಅಂಶಗಳನ್ನು ಅನ್ವೇಷಿಸುವ ಪ್ರಯತ್ನದಲ್ಲಿ ಭಾರತದಲ್ಲಿ ಉನ್ನತ ಶಿಕ್ಷಣಕ್ಕೆ ಹಣಕಾಸು ಒದಗಿಸುವ ಪ್ರಮುಖ ಮೂಲವಾಗಿರುವ ವಿದ್ಯಾರ್ಥಿ ಸಾಲವನ್ನು ಗುರಿಯಾಗಿಟ್ಟುಕೊಂಡು ಉನ್ನತ ಶಿಕ್ಷಣಕ್ಕೆ ಹಣಕಾಸು ಒದಗಿಸುವ ಪ್ರವೃತ್ತಿಗಳು ಮತ್ತು ತೊಂದರೆಗಳನ್ನು ಗೀತಾರಾಣಿ ಪಿ (೨೦೧೬) ಪರಿಶೀಲಿಸಿದ್ದಾರೆ. ಪರಿಗಣಿಸಲಾದ ಕೆಲವು ಅಂಶಗಳೆಂದರೆ, ಹೆಚ್ಚುತ್ತಿರುವ ದಾಖಲಾತಿ, ಬೆಳೆಯುತ್ತಿರುವ ಖಾಸಗಿ ವಲಯ, ಮಧ್ಯಮ ವರ್ಗದಲ್ಲಿ ಹೆಚ್ಚುತ್ತಿರುವ ಯುವಜನರ ಜನಸಂಖ್ಯೆಯೊಂದಿಗೆ ಸಾಲ ಸಂಸ್ಕೃತಿಯ ವ್ಯಾಪಕ ಸ್ವೀಕಾರಾರ್ಹತೆ, ಉನ್ನತ ಶಿಕ್ಷಣವನ್ನು ಪಡೆಯುವ ಮತ್ತು ಸಾಲವನ್ನು ಮರುಪಾವತಿಸುವ ಸಾಮರ್ಥ್ಯವನ್ನು ಬೆಳೆಸಿದೆ. ವಿದ್ಯಾರ್ಥಿ ಸಾಲಗಳ ಮೇಲಿನ ಬಡ್ಡಿ ಸಬ್ಸಿಡಿ ಯೋಜನೆಗೆ ಸಂಬಂಧಿಸಿದಂತೆ ಲಭ್ಯವಿರುವ ವಿಶೇಷ ಡೇಟಾಸೆಟ್‌ಗಳು ಸೇರಿದಂತೆ ವಿವಿಧ ದ್ವಿತೀಯ ದತ್ತಾಂಶ ಮೂಲಗಳನ್ನು ಬಳಸಿಕೊಂಡು ಲೇಖಕರು, ಏರುತ್ತಿರುವ ಶುಲ್ಕಗಳು, ಅನುದಾನಗಳು / ವಿದ್ಯಾರ್ಥಿವೇತನಗಳು ಮತ್ತು ಹೆಚ್ಚುತ್ತಿರುವ ವೆಚ್ಚದ ನಡುವೆಯೂ ಕೌಟುಂಬಿಕ ಗುಣಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಗಮನಿಸಿದಾಗಲೂ ಉನ್ನತ ಶಿಕ್ಷಣದಮಾರುಕಟ್ಟೆಯಲ್ಲಿ ಉನ್ನತ ಶಿಕ್ಷಣಧ ಲಭ್ಯತೆ ಹೆಚ್ಚುತ್ತಿರುವ ಪ್ರವೃತ್ತಿಯನ್ನು ಗಮನಿಸಿದ್ದಾರೆ.

ಸಂಗೀತ ಅರೋರಾ ಮತ್ತು ಜಗದೀಶ್ ಕೌರ್ (೨೦೧೬) ಪಂಜಾಬ್ ರಾಜ್ಯದ ವಿಶೇಷ ಉಲ್ಲೇಖದೊಂದಿಗೆ ಭಾರತದಲ್ಲಿ ಉನ್ನತ ಶಿಕ್ಷಣ ಮತ್ತು ಶೈಕ್ಷಣಿಕ ಸಾಲದ ಸ್ಥಿತಿಯನ್ನು ಚರ್ಚಿಸಿರುತ್ತಾರೆ. ಅಲ್ಲಿನ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆ, ವಿದ್ಯಾರ್ಥಿಗಳ ದಾಖಲಾತಿ ಮತ್ತು ಶಿಕ್ಷಣ ಸಾಲಗಳಲ್ಲಿ ನಿಗದಿತವಾದ ಹೆಚ್ಚಳವಿದೆ ಎಂದು ಲೇಖಕರು ಗಮನಿಸಿದ್ದಾರೆ. ಪಂಜಾಬ್‌ನಲ್ಲಿ, ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಮತ್ತು ವಿದ್ಯಾರ್ಥಿ ಸಾಲದಲ್ಲಿ ಸ್ಥಿರ ವಿಸ್ತರಣೆ ಕಂಡುಬಂದಿದೆ ಮತ್ತು ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸಲು ಸರ್ಕಾರವು ಶಿಕ್ಷಣ ಸಾಲ ಯೋಜನೆಯಲ್ಲಿ ಸುಧಾರಣೆಗಳನ್ನು ಮಾಡಿದೆ.

ಬಂಡ್ಯೋಪಾಧ್ಯಾಯ ಎ (೨೦೧೬) ಭಾರತದಲ್ಲಿ ಶಿಕ್ಷಣ ಸಾಲದ ಸಾಲಗಾರರಿಗೆ ಇರುವ ಅಪಾಯಗಳ ಬಗ್ಗೆ ಪ್ರಾಯೋಗಿಕ ತನಿಖೆ ನಡೆಸಿದ್ದಾರೆ. ಭಾರತದ ೪ ಪ್ರಮುಖ ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದ ೫೦೦೦ ಸಾಲಗಾರರ ದತ್ತಾಂಶದ ವಿವಿಧ ವಿಭಾಗವನ್ನು ಬಳಸಿಕೊಂಡು, ಶಿಕ್ಷಣ ಸಾಲದ ಸುಸ್ಥಿದಾರರು ಮುಖ್ಯವಾಗಿ ಭದ್ರತೆ, ಸಾಲದ ಮೊತ್ತ ಮತ್ತು ಮರುಪಾವತಿ ಅವಧಿಗಳಿಂದ ಪ್ರಭಾವಿತರಾಗಿದ್ದಾರೆ ಎಂದು ಅವರು ಕಂಡುಕೊಂಡರು. ಖಾತರಿ ಅಥವಾ ಸುಸ್ಥಿ ನಷ್ಟ ದರಗಳ ಉಪಸ್ಥಿತಿ. ಇದಲ್ಲದೆ, ಸಾಲಗಾರರ ಸಾಮಾಜಿಕ–ಆರ್ಥಿಕ ಗುಣಲಕ್ಷಣಗಳು ಮತ್ತು ಅವರ ಪ್ರಾದೇಶಿಕ ಸ್ಥಳಗಳು ಶಿಕ್ಷಣ ಸಾಲ ಸುಸ್ಥಿದಾರರಿಗೆ ಸಂಬಂಧಿಸಿದ ಪ್ರಮುಖ ಅಂಶಗಳಾಗಿ ಕಾರ್ಯನಿರ್ವಹಿಸುತ್ತವೆ.

ಸೆಂಜುಟಿ ಪಾತ್ರ ಮತ್ತು ಇತರರು (೨೦೧೭) ೨೦೦೧ ರಲ್ಲಿ ಇಂಡಿಯನ್ ಸೆಂಟ್ರಲ್ ಬ್ಯಾಂಕ್ ಪರಿಚಯಿಸಿದ ಶಿಕ್ಷಣ ಸಾಲದ ಮಾದರಿಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಿತು, ಇದು ಭಾರತದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲಗಳ ಲಭ್ಯತೆಯನ್ನು ಗಣನೀಯವಾಗಿ ಹೆಚ್ಚಿಸಿದೆ. ಈ ಅಧ್ಯಯನವು ವಿದ್ಯಾರ್ಥಿಗಳ ಮೇಲೆ ಶಿಕ್ಷಣ ಸಾಲದ ಪ್ರಭಾವವನ್ನು ನಿರ್ಣಯಿಸುವುದರ ಮೇಲೆ ಕೇಂದ್ರೀಕರಿಸಿದೆ. ಲೇಖಕರು ಸಾಲದ ಲಭ್ಯತೆಯು ಕಳೆದ ವರ್ಷಗಳಲ್ಲಿ ಶಾಲಾ ಶಿಕ್ಷಣವನ್ನು

ಸುಧಾರಿಸುವುದರೊಂದಿಗೆ ಉನ್ನತ ಶಿಕ್ಷಣಕ್ಕೆ ಸೇರ್ಪಡೆಗೊಳ್ಳುವ ನಿರ್ಧಾರವನ್ನು ಸಹ ಹೆಚ್ಚಿಸಿದೆ ಎನ್ನುತ್ತಾರೆ. ಪ್ರತ್ಯೇಕ ನೆಲೆಗಳಲ್ಲಿ ನೋಡಿದಾಗ ಅಧ್ಯಯನವು ಶಿಕ್ಷಣ ಸಾಲ ದಾಖಲಾತಿ, ಶಾಲೆಗಳಲ್ಲಿ ಅಧ್ಯಯನದ ಅವಧಿ, ಇವುಗಳಿಗೆ ಸಂಬಂಧಿಸಿದಂತೆ ಜಾತಿ, ಲಿಂಗ ಮತ್ತು ಸ್ಥಳ (ಗ್ರಾಮೀಣ / ನಗರ) ಮುಂತಾದವುಗಳ ಮೇಲೆ ಮಿಶ್ರ ಪರಿಣಾಮಗಳನ್ನು ಬಹಿರಂಗಪಡಿಸುತ್ತದೆ.

ಮನೀಷಾ (೨೦೧೮) ಪಂಜಾಬ್‌ನಲ್ಲಿ ನಡೆಸಿದ ಪ್ರಾಯೋಗಿಕ ಅಧ್ಯಯನವು ವಿದ್ಯಾರ್ಥಿನಿಯರು ಮತ್ತು ಗ್ರಾಮೀಣ ವಿದ್ಯಾರ್ಥಿಗಳು ತಮ್ಮ ವೃತ್ತಿಪರ ಕೋರ್ಸ್‌ಗಳ ಉನ್ನತ ಅಧ್ಯಯನಕ್ಕಾಗಿ ಶಿಕ್ಷಣ ಸಾಲವನ್ನು ಪಡೆಯುವುದಿಲ್ಲ ಎಂಬ ಇತಿಹಾಸವನ್ನು ಅಳಿಸಿದೆ. ವಿವಿಧ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಬ್ಯಾಂಕುಗಳಿಂದ ಶಿಕ್ಷಣ ಸಾಲ ನೀಡಲಾಗುತ್ತದೆ. ಸಾಲ ಪಡೆಯಲು ಶೈಕ್ಷಣಿಕವಾಗಿ ಅರ್ಹವಾದ ಆದರೆ ಯಾವುದೇ ಆಸ್ತಿಯನ್ನು ಹೊಂದಿರದ ಕಾರಣ ಬಡ ವಿದ್ಯಾರ್ಥಿಗಳಿಗೆ ಬ್ಯಾಂಕುಗಳಲ್ಲಿ ಶಿಕ್ಷಣ ಸಾಲದ ನಿರಾಕರಣೆ; ಕಡಿಮೆ ಉದ್ಯಮಶೀಲತೆ ಮತ್ತು ಕಡಿಮೆ ಸಂಬಳದಿಂದಾಗಿ ಸಾಲ ಬಾಕಿ ಮೊತ್ತದಲ್ಲಿ ಹೆಚ್ಚಳವಾಗಿದೆ ಎಂಬ ಅಂಶಗಳನ್ನು ಅಧ್ಯಯನವು ತಿಳಿಸುತ್ತದೆ. ಪುರುಷ ವಿದ್ಯಾರ್ಥಿಗಳು ಶಿಕ್ಷಣ ಸಾಲ ಪಡೆದ ಮೊದಲ ಐದು ಕೋರ್ಸ್‌ಗಳು ಶ್ರೇಯಾಂಕದಲ್ಲಿ ಕ್ರಮವಾಗಿ ಬಿ.ಟೆಕ್, ಎಂಸಿಎ, ಎಂಬಿಎ, ಬಿಡಿಎಸ್ ಮತ್ತು ಕಾನೂನು ವಿಷಯವಾಗಿವೆ. ಮಹಿಳಾ ವಿದ್ಯಾರ್ಥಿಗಳ ವಿಷಯದಲ್ಲಿ ಮೊದಲ ಐದು ಕೋರ್ಸ್‌ಗಳು ಬಿ.ಟೆಕ್, ಬಿಡಿಎಸ್, ನರ್ಸಿಂಗ್, ಎಂಬಿಎ ಮತ್ತು ಎಂಡಿಎಸ್‌ಗಳಾಗಿವೆ. ಬಾಲಕಿಯರು ಬಿಡಿಎಸ್, ಎಂಡಿಎಸ್ ಮತ್ತು ನರ್ಸಿಂಗ್‌ಗಾಗಿ ಹೆಚ್ಚಿನ ಸಾಲವನ್ನು ತೆಗೆದುಕೊಳ್ಳುತ್ತಿದ್ದಾರೆ ಏಕೆಂದರೆ ಅವರು ವಿದೇಶಗಳಿಗೆ ಹೋಗಲು ಬಯಸುತ್ತಾರೆ ಮತ್ತು ಈ ಕೋರ್ಸ್‌ಗಳಿಗೆ ವಿದೇಶಗಳಲ್ಲಿ ಮೌಲ್ಯವಿದೆ. ಗರಿಷ್ಠ ವಿದ್ಯಾರ್ಥಿಗಳ ಸಾಲಗಳು ಕಡಿಮೆ ಬಡ್ಡಿದರವನ್ನು ಹೊಂದಿರುವ ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದವುಗಳಾಗಿವೆ. ಪೋಷಕರು ಸರ್ಕಾರಿ ನೌಕರರಾಗಿರುವ ವಿದ್ಯಾರ್ಥಿಗಳ ಪೋಷಕರು ಗರಿಷ್ಠ ಶಿಕ್ಷಣ ಸಾಲವನ್ನು ತೆಗೆದುಕೊಂಡಿದ್ದಾರೆ, ಇವರ ನಂತರದ ಸಾಲಿನಲ್ಲಿ ರೈತರು ಮತ್ತು ಉದ್ಯಮಿಗಳು ಬರುತ್ತಾರೆ. ಬಡ ವಿದ್ಯಾರ್ಥಿಗಳು ಶಿಕ್ಷಣ ಸಾಲ ಪಡೆಯುವಲ್ಲಿ ತೊಂದರೆಗಳನ್ನು ಎದುರಿಸುತ್ತಿರುವುದರಿಂದ ಸಾಲಗಳ ವಿತರಣೆಯನ್ನು ಕುಟುಂಬದ ಆದಾಯದೊಂದಿಗೆ ಜೋಡಿಸಬಾರದು ಎಂದು ಅಧ್ಯಯನವು ಸೂಚಿಸುತ್ತದೆ. ಶಿಕ್ಷಣ ಸಾಲವನ್ನು ಮರುಪಾವತಿಸುವುದು ಫಲಾನುಭವಿಗಳಿಗೆ ಕಾಳಜಿಯ ಪ್ರಮುಖ ಕ್ಷೇತ್ರವಾಗಿದೆ. ಹೆಚ್ಚಿನ ವಿದ್ಯಾರ್ಥಿಗಳು ಕಡಿಮೆ ಸಂಬಳದಿಂದಾಗಿ ಸಾಲವನ್ನು ಮರುಪಾವತಿಸಲು ಸಾಧ್ಯವಾಗುತ್ತಿಲ್ಲ, ಕೆಲವು ಸಂದರ್ಭಗಳಲ್ಲಿ ಸಾಲದ ಕಂತು ಅವರ ವೇತನದ ಪ್ರತಿಶತ, ೪೦–೪೫ ಆಗಿದೆ, ಪ್ರತಿಶತ ೩೦ ರಷ್ಟು ಮಂದಿಗೆ ಉದ್ಯೋಗಗಳು ಸಿಗುತ್ತಿಲ್ಲ ಮತ್ತು ಶೇ.೧೪.೪೪ ರಷ್ಟು ಮಂದಿಗೆ ಅವರ ಅರ್ಹತೆಗೆ ಅನುಗುಣವಾಗಿ ಕೆಲಸ ಸಿಗುತ್ತಿಲ್ಲ ಎಂದಿದ್ದಾರೆ. ಬ್ಯಾಂಕ್ ಉದ್ಯೋಗಿಗಳು ಸಹ ಕಡಿಮೆ ಆದಾಯ ಮತ್ತು ಕಡಿಮೆ ಉದ್ಯಮಶೀಲತೆಯು ಸಾಲ ಮರುಪಾವತಿಸದಿರಲು ಮುಖ್ಯ ಕಾರಣಗಳಾಗಿವೆ ಎಂದು ಅಭಿಪ್ರಾಯ ಪಡುತ್ತಾರೆ.

3.2 ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿ ಸಾಲ: ಅಂತರರಾಷ್ಟ್ರೀಯ ಸಂದರ್ಭಗಳು

೭೦ ಕ್ಕೂ ಹೆಚ್ಚು ದೇಶಗಳಲ್ಲಿನ ಸರ್ಕಾರಿ ಪ್ರಾಯೋಜಿತ ವಿದ್ಯಾರ್ಥಿ ಸಾಲಗಳ ಅಂತರರಾಷ್ಟ್ರೀಯ ಹೋಲಿಕೆಯಲ್ಲಿ ಶೆನ್ ಮತ್ತು ಇತರರು(೨೦೦೯), ಯೋಜನೆಗಳ ವಿನ್ಯಾಸ, ಅಭ್ಯಾಸ ಮತ್ತು ಒಟ್ಟಾರೆ ಪರಿಣಾಮಕಾರಿತ್ವದಲ್ಲಿ ಸಾಕಷ್ಟು ವೈವಿಧ್ಯತೆಯನ್ನು ಗಮನಿಸಿದ್ದಾರೆ. ದೇಶಗಳಾದ್ಯಂತ ವಿಭಿನ್ನ ಯಶಸ್ಸಿನ ದರಗಳನ್ನು ಬಹಿರಂಗಪಡಿಸುವ ಯೋಜನೆಗಳ ಹೊರತಾಗಿ, ಈ ಯೋಜನೆಯಲ್ಲಿ ಇತರ ಐದು ಕೇಂದ್ರೀಯ ಸಮಸ್ಯೆಗಳು ಹೊರಹೊಮ್ಮುತ್ತವೆ, ಅವುಗಳನ್ನು ಪ್ರಸ್ತುತ ಯೋಜನೆಯನ್ನು ಮೌಲ್ಯಮಾಪನ ಮಾಡುವಲ್ಲಿ ಅಥವಾ ಹೊಸದನ್ನು ಸ್ಥಾಪಿಸುವಲ್ಲಿ ಗಮನಹರಿಸಬೇಕಾದ ಅಗತ್ಯವಿದೆ. ಸಾಲ ಯೋಜನೆ,

ಅದರ ಆರಂಭಿಕ ಹಣದ ಮೂಲ, ಹಣಕಾಸಿನ ಕಾರ್ಯಸಾಧ್ಯತೆ, ಸಾಲ ಯೋಜನೆಗಳ ಸರ್ಕಾರದ ಸಬ್ಸಿಡಿಗೆ ಸಮರ್ಥನೆ ಮತ್ತು ಮರುಪಾವತಿ ಸಂಗ್ರಹದ ವಿಧಾನ ಇವು ಸಾಲ ಯೋಜನೆಯ ಪ್ರಮುಖ ಉದ್ದೇಶಗಳು.

ಮುಂದುವರಿದ ದೇಶಗಳಲ್ಲಿನ ವಿದ್ಯಾರ್ಥಿ ಸಾಲಗಳು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಪ್ರವೇಶವನ್ನು ವಿಸ್ತರಿಸಲು ಪರಿಣಾಮಕಾರಿ ನೀತಿಯನ್ನು ಒಳಗೊಂಡಿರುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ, ವಿದ್ಯಾರ್ಥಿ ಶಿಕ್ಷಣ ಸಾಲದ ಕುರಿತು ಕೋಲ್‌ಕ್ಲೋಫ್‌ನ ಅಧ್ಯಯನ (೧೯೯೦) ವೇತನದಾರರ ತೆರಿಗೆಗಳು ವಿದ್ಯಾರ್ಥಿಗಳ ಸಾಲಗಳಿಗಿಂತ ಈಕ್ವಿಟಿ ಮತ್ತು ದಕ್ಷತೆಯ ಮಾನದಂಡಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಪೂರೈಸುತ್ತದೆ ಎಂದು ವಾದಿಸುತ್ತಾರೆ.

ಅಮೇರಿಕಾದಲ್ಲಿನ ವಿದ್ಯಾರ್ಥಿ ಸಾಲಗಳ ಬಗ್ಗೆ ವಿವರಿಸಿರುವ ಡೇನಿಯಲ್ ರಿವೆರೊ (೨೦೧೭) ವಿಶ್ಲೇಷಣೆಯು ವಿದ್ಯಾರ್ಥಿ ಸಾಲ ಉದ್ಯಮವು ಯುವ ಅಮೇರಿಕಾದವರಿಗೆ ಹೇಗೆ ದ್ರೋಹ ಮಾಡುತ್ತದೆ ಎಂಬುದನ್ನು ತಿಳಿಸುತ್ತದೆ. ರಾಷ್ಟ್ರದಲ್ಲಿ ವಿದ್ಯಾರ್ಥಿಗಳ ಸಾಲದ ಹೆಸರಿನಲ್ಲಿ ೧.೪ ಟ್ರಿಲಿಯನ್ ಡಾಲರ್‌ನಷ್ಟು ದೊಡ್ಡ ಮೊತ್ತದ ಹಣವನ್ನು ಸಂಗ್ರಹಿಸಿರುವ ೪೪ ಮಿಲಿಯನ್ ಅಮೆರಿಕದವರನ್ನು ಅವರು ಗಮನಿಸುತ್ತಾರೆ, ಒಬಾಮಾ ಆಡಳಿತದಲ್ಲಿ ವಿದ್ಯಾರ್ಥಿ ಸಾಲ ಉದ್ಯಮವು ಪ್ರವರ್ಧಮಾನಕ್ಕೆ ಬಂದಿತು ಮತ್ತು ಡೊನಾಲ್ಡ್ ಟ್ರಂಪ್ ಆಯ್ಕೆಯ ನಂತರ ಅದರ ಷೇರು ತೀವ್ರವಾಗಿ ಏರಿತು. ಇದನ್ನು ಫ್ಯೂಷನ್ ಟಿವಿ ತನಿಖೆ (೨೦೧೬) ಮತ್ತಷ್ಟು ಧೃಢೀಕರಿಸಿದೆ, ಇದು ಕಾಲೇಜಿನ ಹಣಕಾಸಿಗೆ ಸಂಬಂಧಿಸಿದ ಸಮಸ್ಯೆಗಳು ಎಂದರೆ ಸಾರ್ವಜನಿಕ ಮತ್ತು ಖಾಸಗಿ ಬ್ಯಾಂಕುಗಳು ಜವಾಬ್ದಾರರಾಗಿರುವ ಸಾಲಗಳ ಅವಧಿಗಳಿಂದ ಉಂಟಾಗಿದೆಯೇ ಹೊರತು ಸಾಲಕ್ಕೆ ಸಂಬಂಧಿಸಿದಂತೆ ಗ್ರಾಹಕ ಸೇವೆಗಳ ಸಮಸ್ಯೆಗಳಿಂಧ ಅಲ್ಲ. ಪ್ರಸ್ತುತ ಪ್ರಚಲಿತದಲ್ಲಿರುವ ಶೈಕ್ಷಣಿಕ ಸಾಲ ಯೋಜನೆ ವ್ಯವಸ್ಥೆಯು ವಾಸ್ತವವಾಗಿ ಅಸಮಾನತೆಗಳನ್ನು ಒಡೆಯುವ ಬದಲು ಪುನರ್ ಸ್ಥಾಪಿಸುತ್ತಿದೆ ಎಂದು ಈ ವರದಿಯು ತಿಳಿಸುತ್ತದೆ.

ಸಂಯುಕ್ತ ರಾಷ್ಟ್ರದಲ್ಲಿ, ಕಳೆದ ಒಂದು ದಶಕದಲ್ಲಿ, ಉನ್ನತ ಶಿಕ್ಷಣಕ್ಕೆ ಧನಸಹಾಯಕ್ಕಾಗಿ ಸಾಲಗಳ ಮೇಲಿನ ಅವಲಂಬನೆ ಹೆಚ್ಚಾಗಿದೆ ಮತ್ತು ಇದು ಅನೇಕ ಸಮಸ್ಯೆಗಳು ಮತ್ತು ಸಂಕೀರ್ಣತೆಗಳಿಗೆ ಕಾರಣವಾಗಿದೆ. ಉದಾಹರಣೆಗೆ, ಸಂಯುಕ್ತ ರಾಷ್ಟ್ರದಲ್ಲಿ ನಲ್ಲಿ ೨೦೦೪ ಮತ್ತು ೨೦೧೪ ರ ಅವಧಿಯಲ್ಲಿ, ೨೦೦೪ ರಲ್ಲಿ ೩೬೪ ಬಿಲಿಯನ್ ಡಾಲರ್ ಇದ್ದ ಒಟ್ಟು ವಿದ್ಯಾರ್ಥಿ ಸಾಲವು ೨೦೧೪ ರಲ್ಲಿ ೧.೧೬ ಟ್ರಿಲಿಯನ್ ಡಾಲರ್‌ಗೆ ಏರಿತು. ವಿದ್ಯಾರ್ಥಿ ಸಾಲವು ವರ್ಷಕ್ಕೆ ಸರಾಸರಿ ಪ್ರತಿಶತ ೧೩ ರಷ್ಟು ಹೆಚ್ಚಾಗಿದೆ. ಸಾಲಗಾರರ ಸಂಖ್ಯೆಯಲ್ಲಿನ ಏರಿಕೆಗೆ ಸಂಬಂಧಿಸಿದಂತೆ, ವಿದ್ಯಾರ್ಥಿ ಸಾಲವನ್ನು ತೆಗೆದುಕೊಳ್ಳುತ್ತಿರುವ ಯುವಜನರ ಪಾಲು ಸ್ಥಿರವಾಗಿ ಹೆಚ್ಚುತ್ತಿರುವುದು ಗಮನಕ್ಕೆ ಬಂದಿದೆ: ೨೦೦೪ ರಲ್ಲಿ, ೨೫ ವರ್ಷ ವಯಸ್ಸಿನವರಲ್ಲಿ ಕೇವಲ ೨೭ ಪ್ರತಿಶತದಷ್ಟು ಯುವಕರು ಮಾತ್ರ ವಿದ್ಯಾರ್ಥಿ ಸಾಲವನ್ನು ಹೊಂದಿದ್ದರೆ, ೯ ವರ್ಷಗಳ ನಂತರ, ೨೦೧೩ ರಲ್ಲಿ, ವಿದ್ಯಾರ್ಥಿ ಸಾಲವನ್ನು ಪಡೆಯುವ ೨೫ ವರ್ಷ ವಯಸ್ಸಿನವರ ಪ್ರಮಾಣವು ಸುಮಾರು ೪೫ ಪ್ರತಿಶತಕ್ಕೆ ಏರಿದೆ (ಮ್ಯಾಕ್‌ಆಂಡ್ರೂಸ್, ೨೦೧೫).

ಸಂಯುಕ್ತ ರಾಷ್ಟ್ರದಲ್ಲಿ ಬ್ರೂಕಿಂಗ್ಸ್ ಇನ್ಸ್ಟಿಟ್ಯೂಟ್ (೨೦೧೬) ನಡೆಸಿದ ಸಮೀಕ್ಷೆಯ ಪ್ರಕಾರ ಈಗಾಗಲೇ ೧.೫ ಟ್ರಿಲಿಯನ್ ಡಾಲರ್‌ಗಳಷ್ಟು ಸಾಲ ಹಿಂದಿರುಗಿಸಲು ಬಾಕಿ ಇರುವ ಕಾರಣ ೨೦೧೯ ರ ವರ್ಷವು ವಿದ್ಯಾರ್ಥಿ ಸಾಲಗಳಿಗೆ ಕೆಟ್ಟ ವರ್ಷವಾಗಿದೆ. ಕಾಲೇಜು ಶಿಕ್ಷಣವನ್ನು ಉಚಿತವಾಗಿ ನೀಡುವುದು ಮುಖ್ಯವಾಗಿ ಹೆಚ್ಚಿನ ಆದಾಯದ ಕುಟುಂಬಗಳಿಗೆ ಸಹಾಯವಾಗಬಹುದೇ ಹೊರತು ಕಡಿಮೆ ಆದಾಯದ ಕುಟುಂಬಗಳಿಗೆ ಪ್ರಯೋಜನವಾಗುವುದಿಲ್ಲ ಎಂದು ಅಧ್ಯಯನವು ತೀರ್ಮಾನಿಸಿದೆ.

ಚಿಂಗೋಸ್ (೨೦೧೬), ತನ್ನ ಅಧ್ಯಯನದಲ್ಲಿ ಸಂಯುಕ್ತ ರಾಷ್ಟ್ರದಲ್ಲಿ ಕಡಿಮೆ ಆದಾಯ ಮತ್ತು ಅನಾನುಕೂಲಕರ ವಿದ್ಯಾರ್ಥಿಗಳಿಗೆ ಕೆಲವು ಪೂರಕ ಸೌಲಭ್ಯಗಳನ್ನು ಒದಗಿಸಿದಾಗ ಪ್ರೌಢಶಾಲಾ ವಿದ್ಯಾಭ್ಯಾಸ ಮತ್ತು ಕಾಲೇಜು ದಾಖಲಾತಿಯ ಪ್ರಮಾಣ ವಾಸ್ತವಿಕವಾಗಿ ಸುಧಾರಿಸಿದೆ ಎಂದು ಗಮನಿಸಿದ್ದಾರೆ. ಆದಾಗ್ಯೂ, ಕಾಲೇಜಿನ ವಿದ್ಯಾಭ್ಯಾಸಕ್ಕಾಗಿ ಸಾಲ ಮತ್ತು ಹೆಚ್ಚಿನ ಬೋಧನಾ ಶುಲ್ಕದಿಂದಾಗಿ ಕಾಲೇಜು ವಿದ್ಯಾಭ್ಯಾಸದ ಪ್ರವೇಶಾತಿ ಮತ್ತು ಅದನ್ನು ಪೂರ್ಣಗೊಳಿಸುವಿಕೆಯ ಪ್ರಮಾಣದಲ್ಲಿ ಅವಕಾಶ ವಂಚಿತ ಮತ್ತು ಮೇಲುವರ್ಗದ ವಿದ್ಯಾರ್ಥಿಗಳ ಹಾಗೂ ಬಿಳಿ ಮತ್ತು ಕಪ್ಪು ವಿದ್ಯಾರ್ಥಿಗಳ ನಡುವೆ ಸಂಪೂರ್ಣ ವ್ಯತ್ಯಾಸಗಳು ಉಳಿದಿವೆ ಎಂದು ವರದಿ ಹೇಳುತ್ತದೆ.

ಜೇಸನ್ ಡೆಲಿಸ್ಲೆ ಅವರ ಅಧ್ಯಯನವು (೨೦೧೬) ಸಾಲಗಾರರು ತಮ್ಮ ಸರ್ಕಾರಿ ಸಾಲಗಳನ್ನು ತೀರಿಸದೆ ದಿವಾಳಿ ಯಾಗಿದ್ದೇವೆ ಎಂಬುದನ್ನು ತಡೆಯುವಲ್ಲಿ ಮತ್ತು ಸುಸ್ಥಿದಾರರನ್ನು ನಿಯಂತ್ರಿಸುವಲ್ಲಿ ಪ್ರತ್ಯೇಕ ವೇತನದ ಮುಟ್ಟುಗೋಲು ಕಾನೂನು ವ್ಯವಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಪರಿಶೀಲಿಸಿದೆ. ಈ ಅಧ್ಯಯನವು ರಾಷ್ಟ್ರೀಯ ವಿದ್ಯಾರ್ಥಿ ಸಾಲ ದತ್ತಾಂಶ ವ್ಯವಸ್ಥೆಯ ಲಿಂಕ್‌ಗಳನ್ನು ಅವಲಂಬಿಸಿದೆ, ಇದು ಎಲ್ಲಾ ಸಂಯುಕ್ತ ರಾಷ್ಟ್ರದ ವಿದ್ಯಾರ್ಥಿಗಳ ಸಾಲಗಳ ಮತ್ತು ತೆರಿಗೆ ಕುರಿತ ದಾಖಲೆಗಳನ್ನು ಹೊಂದಿದೆ. ಈ ದತ್ತಾಂಶವನ್ನು ಬಳಸಿಕೊಂಡು, ದಿವಾಳಿತನ ಮತ್ತು ವೇತನ ಮುಟ್ಟುಗೋಲುಗಳಿಗೆ ಸಂಬಂಧಿಸಿದ ಪ್ರಮುಖ ನೀತಿ ಬದಲಾವಣೆಗಳ ಮೊದಲು ಮತ್ತು ನಂತರ ಸಾಲಗಾರರ ಮರುಪಾವತಿ ಮಾದರಿಗಳಲ್ಲಿನ ಬದಲಾವಣೆಗಳನ್ನು ಲೇಖಕರು ಪರಿಶೀಲಿಸಿದ್ದಾರೆ. ದಿವಾಳಿತನದ ಕಾನೂನು ಮತ್ತು ವೇತನ ಮುಟ್ಟುಗೋಲು ಬದಲಾವಣೆಗಳಿಂದ ಪೀಡಿತರಾಗಿರುವ ಸಾಲಗಾರರ ವಿವಿಧ ಗುಂಪುಗಳಿಗೆ ಮರುಪಾವತಿ ಪ್ರೋತ್ಸಾಹಗಳು ಬದಲಾಗಿದೆಯೆಂದು ಅಧ್ಯಯನವು ಬಹಿರಂಗಪಡಿಸಿದೆ.

ವೆಬ್ಬರ್ (೨೦೧೬) ವಿವಿಧ ರೀತಿಯಲ್ಲಿ ಒಬ್ಬ ವ್ಯಕ್ತಿ ಪಡೆಯುವ ಕೋರ್ಸುಗಳ ಆರ್ಥಿಕ ಮೌಲ್ಯವನ್ನು ಪರಿಶೀಲಿಸಿದ್ದಾರೆ. ಈ ಅಧ್ಯಯನದಲ್ಲಿ ಪರಿಗಣಿಸಲಾದ ಒಂದು ಅಂಶವೆಂದರೆ ತನ್ನ ೨೨ ನೇ ವಯಸ್ಸಿನಲ್ಲಿ ಕಾಲೇಜು ಪದವಿ ಹೊಂದಿ ಒಟ್ಟು ೩೦,೦೦೦ ಡಾಲರ್ ಸರಾಸರಿ ಶೈಕ್ಷಣಿಕ ಸಾಲ ಹೊಂದಿರುವ ವಿದ್ಯಾರ್ಥಿಗಳು, ತಮ್ಮ ೧೮ ನೇ ವಯಸ್ಸಿನಲ್ಲಿ ಕಾಲೇಜು ಬಿಟ್ಟು ನೇರವಾಗಿ ಕಾರ್ಮಿಕ ಮಾರುಕಟ್ಟೆಗೆ ಹೋಗಲು ನಿರ್ಧರಿಸಿದ ಗೆಳೆಯರಿಗಿಂತ ಉತ್ತಮ ಪರಿಸ್ಥಿತಿಯಲ್ಲಿದ್ದಾರೆ. ಈ ವಿಶ್ಲೇಷಣೆಯು ಕಾಲೇಜು ಪದವಿ ಪಡೆಯುವಲ್ಲಿ ಎದುರಿಸಬೇಕಾದ ಲಾಭ ನಷ್ಟದ ಅಪಾಯವನ್ನು ಒತ್ತಿ ಹೇಳುತ್ತದೆ.

ನಿಕೋಲಸ್ ಬಾರ್ (೨೦೧೫), ಸಾಲಗಾರನ ಆದಾಯದ ಮೇಲೆ ನಿರ್ಧರಿತವಾಗುವ ವಾಪಾಸಾತಿ ಸಾಲ(ಇನ್‌ಕಮ್–ಕಂಟಿನ್‌ಜೆಂಟ್')ವು ಬೋಧನಾ ಶುಲ್ಕವನ್ನು ಸಂಪೂರ್ಣವಾಗಿ ಒಳಗೊಳ್ಳಬೇಕು ಎಂದು ವಾದಿಸುತ್ತಾರೆ. ಒಂದು ಉತ್ತಮ ವ್ಯವಸ್ಥೆಯು ಹೇಗಿರಬೇಕೆಂದರೆ ವಿದ್ಯಾರ್ಥಿಗಳು ಅಧ್ಯಯನ ಮಾಡುವಾಗ ವಿಶ್ವವಿದ್ಯಾನಿಲಯವು ಉಚಿತವಾಗಿರಬೇಕು, ಪದವಿ ಪಡೆದ ನಂತರ ವಿದ್ಯಾರ್ಥಿಗಳು ಅವರ ಉನ್ನತ ಶಿಕ್ಷಣದ ವೆಚ್ಚದ ಒಂದು ಭಾಗವನ್ನು ಪಾವತಿಬೇಕು. ಆದ್ದರಿಂದ, ಉತ್ತಮ ವ್ಯವಸ್ಥೆಯು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಸಾಲ ಆಡಳಿತದಿಂದ ಬೋಧನಾ ಶುಲ್ಕವನ್ನು ಆರಂಭದಲ್ಲಿಯೇ ನೀಡುತ್ತದೆ. ಆದರೆ ನಂತರದಲ್ಲಿ ವಿದ್ಯಾರ್ಥಿಗಳು ಹಣ ಗಳಿಸಲು ಪ್ರಾರಂಭಿಸಿದ ನಂತರ ತಮ್ಮ ವಿದ್ಯಾಭ್ಯಾಸದ ವೆಚ್ಚವನ್ನು ಪಾವತಿಸುತ್ತಾರೆ. ಆದ್ದರಿಂದ, ವಿದ್ಯಾರ್ಥಿ ಸಾಲಗಳ ಉತ್ತಮ ವ್ಯವಸ್ಥೆಯಲ್ಲಿ "ಒಳ್ಳೆಯದು" ಎಂದರೆ ಬಡ ಹಿನ್ನೆಲೆಯಿಂದ ಬಂದವರನ್ನು ವಿಶ್ವವಿದ್ಯಾಲಯಕ್ಕೆ ಹೋಗಲು ತಡೆಯದಂತೆ ವಿನ್ಯಾಸಗೊಳಿಸಲಾದ ಸಾಲವಾಗಿದೆ.

ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್ ಮುಂತಾದ ದೇಶಗಳು ಬೋಧನಾ ಶುಲ್ಕವನ್ನು ಹೊಂದಿವೆ, ಆದರೆ ಅಲ್ಲಿನ ಬೋಧನಾ ಶುಲ್ಕಗಳು ವಿದ್ಯಾರ್ಥಿಗೆ ನೀಡುವ ಸಾಲದಲ್ಲಿಯೇ ಒಳಗೊಳ್ಳುವಂತೆ ವ್ಯವಸ್ಥೆಗೊಳಿಸಲಾಗಿದೆ. ಇಂಗ್ಲೆಂಡ್ ದೇಶದ ವ್ಯವಸ್ಥೆಯ ಮತ್ತೊಂದು ಅಪೇಕ್ಷಣೀಯ ಲಕ್ಷಣವೆಂದರೆ ೩೦ ವರ್ಷಗಳ ನಂತರ ಮರುಪಾವತಿಸದ ಯಾವುದೇ ಸಾಲವನ್ನು ಮನ್ನಾ ಮಾಡಲಾಗುತ್ತದೆ. ಆದ್ದರಿಂದ ಆದಾಯ ಆಧಾರಿತ ಮರುಪಾವತಿಗಳು ಕಡಿಮೆ ಮಾಸಿಕ ಗಳಿಕೆ ಹೊಂದಿರುವ ಪದವೀಧರರನ್ನು ಮತ್ತು ೩೦ ವರ್ಷಗಳ ನಂತರವೂ ಜೀವಿತಾವಧಿಯಲ್ಲಿ ಕಡಿಮೆ ಗಳಿಕೆಯನ್ನು ಹೊಂದಿರುವವರನ್ನು ರಕ್ಷಿಸುತ್ತದೆ (ನಿಕೋಲಸ್ ಬಾರ್, ೨೦೧೫).

ಜಾನ್‌ಸ್ಟೋನ್ (೨೦೧೨) ಮಧ್ಯ ಅಮೆರಿಕ, ಯುರೋಪ್, ಆಫ್ರಿಕಾ, ಅಮೇರಿಕಾ ಸಂಯುಕ್ತಾ ಸಂಸ್ಥಾನ, ಸ್ವೀಡನ್, ಜರ್ಮನಿ, ನೆದರ್‌ಲ್ಯಾಂಡ್ಸ್, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಕೀನ್ಯಾದಲ್ಲಿ ವಿದ್ಯಾರ್ಥಿ ಸಾಲ ಕಾರ್ಯಕ್ರಮಗಳ ಅತ್ಯುತ್ತಮ ವಿಮರ್ಶೆಯನ್ನು ಪ್ರಸ್ತುತಪಡಿಸುತ್ತಾರೆ. ಕೆಲವು ಏಷ್ಯಾದ ದೇಶಗಳಲ್ಲಿನ ವಿದ್ಯಾರ್ಥಿ ಸಾಲ ಯೋಜನೆಯ ಇತ್ತೀಚಿನ ಅನುಭವಗಳನ್ನು ಈ ವಿಮರ್ಶೆಯು ಒಳಗೊಂಡಿದೆ. ಅವುಗಳಲ್ಲಿ ಚೀನಾದ ಕುರಿತ ವಿಮರ್ಶೆಯನ್ನು ಶೆನ್ ಮತ್ತು ಲಿ (೨೦೦೩), ಕೊರಿಯಾ ಕುರಿತಂತೆ ಕಿಮ್ ಮತ್ತು ಲಿ (೨೦೦೩), ಥೈಲ್ಯಾಂಡ್‌ನ ಕುರಿತಂತೆ ಜಿಡರ್‌ಮ್ಯಾನ್ (೨೦೦೩), ಹಾಂಗ್ ಕಾಂಗ್ ಮೇಲೆ ಚುಂಗ್ (೨೦೦೩) ಮತ್ತು ಫಿಲಿಪೈನ್ಸ್ ಕುರಿತಂತೆ ಕಿತಾವೆಟಲ್ (೨೦೦೩) ವಿವರಿಸುತ್ತಾರೆ. ದೇಶಾದ್ಯಂತ, ವಿದ್ಯಾರ್ಥಿ ಸಾಲ ಕಾರ್ಯಕ್ರಮದ ಪ್ರಮುಖ ಮತ್ತು ಸಾಮಾನ್ಯ ಉದ್ದೇಶಗಳು ಬಡವರಿಗೆ ಸಮಾನತೆ ಮತ್ತು ಪ್ರವೇಶ. ಈ ಎಲ್ಲಾ ದೇಶಶಗಳಲ್ಲಿ ಉನ್ನತ ಶಿಕ್ಷಣಕ್ಕೆ ಸಾರ್ವಜನಿಕ ವಲಯದ ಹೂಡಿಕೆಯನ್ನು ಬದಲಾಯಿಸುವುದು ಉನ್ನತ ಶಿಕ್ಷಣದ ವೆಚ್ಚಕ್ಕೆ ಸಹಾಯ ನೀಡುವ ಅಯವ್ಯಯದ ಹಿಂದಿರುವ ಸೂಚ್ಯ ಅಂಶ ಎಂಬುದನ್ನು ಈ ಅಧ್ಯಯನಗಳು ತಿಳಿಸುತ್ತವೆ.

ಚುಂಗ್ (೨೦೦೩) ಗಮನಿಸಿದಂತೆ, ಹಾಂಗ್ ಕಾಂಗ್‌ನಲ್ಲಿ, ವಿದ್ಯಾರ್ಥಿ ಸಾಲದ ಹಂಚಿಕೆಯು ಸಮಾನತೆ, ದಕ್ಷತೆ ಮತ್ತು ಸಮರ್ಪಕತೆಯ ಪರಿಗಣನೆಗಳನ್ನು ಆಧರಿಸಿದೆ. ಕಡಿಮೆ–ಸುಸ್ಥಿತಿಯಲ್ಲಿರುವ ಕುಟುಂಬಗಳ ವಿದ್ಯಾರ್ಥಿಗಳು ಹೆಚ್ಚಿನ ಹಣಕಾಸಿನ ನೆರವು ಪಡೆಯುತ್ತಾರೆ ಮತ್ತು ಅರ್ಜಿದಾರರ ಕುಟುಂಬ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ಸಾಲದ ಅರ್ಹತೆಯು ನಿರ್ಧರಿತವಾಗುತ್ತದೆ. ಈ ಯೋಜನೆಯು ಮುಖ್ಯವಾಗಿ ಎರಡು ಗುರಿಗಳನ್ನು ಹೊಂದಿದೆ, ಮೊದಲನೆಯದಾಗಿ, ಯಾವುದೇ ಅರ್ಹ ವಿದ್ಯಾರ್ಥಿಯು ಹಣದ ಕೊರತೆಯಿಂದಾಗಿ ಉನ್ನತ ಶಿಕ್ಷಣದಿಂದ ವಂಚಿತನಾಗಬಾರದು ಮತ್ತು ಎರಡನೆಯದಾಗಿ ಸಮೀಕ್ಷೆಗಳ ಮೂಲಕ ವಿದ್ಯಾರ್ಥಿಯ ನಿಯಮಿತ ಖರ್ಚುಗಳನ್ನು ದೃಢಪಡಿಸಿಕೊಂಡು ಮತ್ತು ವಿದ್ಯಾರ್ಥಿ ದರ ಸೂಚ್ಯಂಕವನ್ನು ನಿಗದಿಪಡಿಸಿಕೊಂಡು ಸಾಮಾನ್ಯ ಜೀವನದ ಅಗತ್ಯಗಳಿಗೆ ಅನುಗುಣವಾಗಿ ಗರಿಷ್ಠ ಸಾಲವನ್ನು ನೀಡಲಾಗುತ್ತದೆ.

ಜಿಡರ್ಮನ್ (೨೦೦೩)– ಥೈಲ್ಯಾಂಡ್ ನಲ್ಲಿ ೧೯೯೬ ರಿಂದ ಕಾರ್ಯನಿರ್ವಹಿಸುತ್ತಿರುವ ಸಾಲ ಯೋಜನೆಯು ಸಾರ್ವಜನಿಕ ಮತ್ತು ಖಾಸಗಿ ವಲಯ ಎರಡರಲ್ಲಿಯೂ ಸಾಮಾನ್ಯ ಮತ್ತು ವೃತ್ತಿಪರ ಶಾಲೆಗಳಲ್ಲಿ, ಉನ್ನತ ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣಕ್ಕೆ ದಾಖಲಾದ ವಿದ್ಯಾರ್ಥಿಗಳನ್ನು ಗುರಿಯಾಗಿರಿಸಿಕೊಂಡಿದೆ ಎಂದು ಹೇಳುತ್ತಾರೆ. ಇದು ಇತರ ದೇಶಗಳಲ್ಲಿನ ಸಾಲ ಯೋಜನೆಗಳಿಗಿಂತ ಗಣನೀಯವಾಗಿ ಹೆಚ್ಚಿನ ಮಟ್ಟದ ಸರ್ಕಾರಿ ಸಹಾಯಧನವನ್ನು ನೀಡುತ್ತದೆ. ಆದಾಗ್ಯೂ, ಈ ಯೋಜನೆಯು ಹಣಕಾಸಿನ ಅಗತ್ಯವಿರುವ ವಿದ್ಯಾರ್ಥಿಗಳನ್ನು ಗುರಿಯಾಗಿರಿಸಿಕೊಂಡಿದ್ದರೂ, ನೀರಿಕ್ಷಿತ ಗುರಿಯನ್ನು ತಲುಪುತ್ತಿಲ್ಲ. ಸಾಲದ ಅರ್ಹತೆಗಾಗಿ ಮಿತಿಗೊಳಿಸಲಾದ ಕುಟುಂಬ ಆದಾಯದ ಮಿತಿ ಅಧಿಕೃತವಾಗಿ ನಿಗದಿಪಡಿಸಿದ ಬಡತನ ಮಟ್ಟಕ್ಕಿಂತ ಮೂರು ಪಟ್ಟು ಅಧಿಕವಾಗಿದೆ. ಇದಲ್ಲದೇ ವಿದ್ಯಾರ್ಥಿ ಜನಸಂಖ್ಯೆಯ ಸಾಮಾಜಿಕ ವಿವರಗಳೊಂದಿಗೆ ಹೋಲಿಕೆ ಮಾಡಿದರೂ ಶಿಕ್ಷಣ ಸಂಸ್ಥೆಗಳಿಗೆ ಸಾಲದ ಅಯವ್ಯಯ ಹಂಚಿಕೆ ಬಹಳ ಕಡಿಮೆಯಾಗಿದೆ.

ವೆರೋನಿಕಾ ಆರ್ ನ್ಯಾಹೆಂಡೆ ತಮ್ಮ ಅಧ್ಯಯನದಲ್ಲಿ (೨೦೧೩) ತಾಂಜಾನಿಯಾದಲ್ಲಿ ಉನ್ನತ ಶಿಕ್ಷಣಕ್ಕೆ ಹಣಕಾಸು ಒದಗಿಸುವಲ್ಲಿ ವಿದ್ಯಾರ್ಥಿಗಳ ಸಾಲದ ಯಶಸ್ಸನ್ನು ಸೂಚಿಸುವ ಅಂಶಗಳನ್ನು ಪರಿಶೀಲಿಸಿದ್ದಾರೆ. ಅಧ್ಯಯನಕ್ಕೆ ವಿವಿಧ ರೀತಿಯ ಸಮೀಕ್ಷೆಗಳಿಂದ ಸಂಗ್ರಹಿಸಿದ ದತ್ತಾಂಶವನ್ನು ಬಳಸಿಕೊಂಡ್ಡಿದ್ದು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿಯನ್ನು ಹೆಚ್ಚಿಸುವಲ್ಲಿ ವಿದ್ಯಾರ್ಥಿಗಳಿಗೆ ನೀಡಿರುವ ಸಾಲ ಕಾರ್ಯಕ್ರಮಗಳು ಯಶಸ್ವಿಯಾಗಿವೆ ಮತ್ತು ಉನ್ನತ ಶಿಕ್ಷಣ ವಿದ್ಯಾರ್ಥಿಗಳ ಸಾಲ ಮಂಡಳಿಗಳು ಸಾಲಗಳನ್ನು ಮರುಪಡೆಯಲು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿವೆ ಮತ್ತು ಸಾಕಷ್ಟು ಮಾರ್ಗಸೂಚಿಗಳು ಮತ್ತು ತೃಪ್ತಿದಾಯಕ ಮಾನದಂಡಗಳನ್ನು ಹೊಂದಿವೆ ಎನ್ನುತ್ತಾರೆ.

ಎರಿಕ್ ಕ್ಯಾಂಟೊನಾ ಮತ್ತು ಆಂಡ್ರಿಯಾಸ್ ಬ್ಲಾಮ್ (೨೦೦೪) ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ದಾಖಲಾತಿಯಲ್ಲಿ ಹೆಚ್ಚಳ ಮತ್ತು ವಿದ್ಯಾರ್ಥಿಗಳ ಕಾರ್ಯಕ್ಷಮತೆ ವೃದ್ಧಿಯ ಮೂಲಕ ಮಾನವ ಬಂಡವಾಳ ಕ್ರೋಢೀಕರಣಕ್ಕೆ ಕಾರಣವಾಗಿವೆಯೇ? ಎಂದು ಪರಿಶೀಲಿಸಿದರು. ಈ ಅಧ್ಯಯನ ಯೋಜನೆಯನ್ನು ಜಾರಿಗೆ ತಂದ ಮೆಕ್ಸಿಕೊದ ಖಾಸಗಿ ವಿಶ್ವವಿದ್ಯಾಲಯಗಳಿಂದ ಪರಿಮಾಣಾತ್ಮಕ ದತ್ತಾಂಶವನ್ನು ವಿಶ್ಲೇಷಿಸಿದೆ. ಮೊದಲ ಉದ್ದೇಶ ದಾಖಲಾತಿಗೆ ಸಂಬಂಧಿಸಿದಂತೆ, ಮೆಕ್ಸಿಕನ್ನಲ್ಲಿ ನಡೆಸಲಾದ ಮನೆಗಳ ಸಮೀಕ್ಷೆಯ ದತ್ತಾಂಶ ವಿಶ್ಲೇಷಣೆಯು ವಿಶ್ವವಿದ್ಯಾಲಯದ ದಾಖಲಾತಿಯ ಮೇಲೆ ಬಲವಾದ ಸಕಾರಾತ್ಮಕ ಪರಿಣಾಮವನ್ನು ಸೂಚಿಸುತ್ತದೆ. ಎರಡನೇ ಉದ್ದೇಶಕ್ಕೆ ಸಂಬಂಧಿಸಿದಂತೆ, ಅಂದರೆ ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಕುರಿತು ಒದಗಿಸಲಾದ ಆಡಳಿತಾತ್ಮಕ ದತ್ತಾಂಶವನ್ನು ರಿಗ್ರಶನ್–ಡಿಸ್‌ಕಂಟಿನ್ಯುಟಿ ವಿನ್ಯಾಸವನ್ನು ಬಳಸಿಕೊಂಡು ವಿಶ್ಲೇಷಿಸಲಾಗಿದೆ. ಪ್ರಾಯೋಗಿಕ ಫಲಿತಾಂಶಗಳು ಸಾಲ ರಹಿತ ವಿದ್ಯಾರ್ಥಿಗಳಲ್ಲಿಯೇ ಉತ್ತಮ ಶೈಕ್ಷಣಿಕ ಸಾಧನೆಯನ್ನು ತೋರಿಸುತ್ತವೆ.

ದಕ್ಷಿಣ ಆಫ್ರಿಕಾದಲ್ಲಿ, ಅಂತರ್ನಿರ್ಮಿತ ವಿದ್ಯಾರ್ಥಿ ಸಾಲ ಘಟಕವನ್ನು ಹೊಂದಿರುವ ರಾಷ್ಟ್ರೀಯ ವಿದ್ಯಾರ್ಥಿ ಆರ್ಥಿಕ ನೆರವು ಯೋಜನೆ (ಎನ್‌ಎಫ್‌ಎಸ್‌ಎಎಸ್) ವಿದ್ಯಾರ್ಥಿಗಳಲ್ಲಿ ಜನಪ್ರಿಯವಾಗಲಿಲ್ಲ ಅಷ್ಟೇ ಅಲ್ಲದೇ ಸರ್ಕಾರವು ಅದನ್ನು ಅಶಕ್ತವೆಂದು ಕಂಡಿದೆ. ಇತ್ತೀಚಿನ ಸುಧಾರಣೆಗಳು ರಾಷ್ಟ್ರೀಯ ವಿದ್ಯಾರ್ಥಿ ಆರ್ಥಿಕ ನೆರವು ಯೋಜನೆ ವಿದ್ಯಾರ್ಥೀವೇತನವನ್ನು ಹೆಚ್ಚಿಸಿವೆ ಮತ್ತು ಅದರ ಮರುಪಾವತಿ ಅನುಪಾತವನ್ನು ದುರ್ಬಲಗೊಳಿಸಿದೆ (ಜಾರ್ಜ್ ಹಲ್, ೨೦೧೬). ಕೀನ್ಯಾ, ನೈಜೀರಿಯಾ, ಮೊಜಾಂಬಿಕ್ ಮತ್ತು ಜಾಂಬಿಯಾದಂತಹ ದೇಶಗಳಲ್ಲಿ, ಸಾಲ ಯೋಜನೆಗಳತ್ತ ಹೆಚ್ಚು ಹೆಜ್ಜೆಗಳನ್ನಿಡುವ ಪ್ರವೃತ್ತಿಯನ್ನು ಸೂಚಿಸುತ್ತಿದೆ. ಶ್ರೀಮಂತ ರಾಷ್ಟ್ರಗಳಾದ ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಗಳು ಸಹ ಉನ್ನತ ಶಿಕ್ಷಣದ ದಾಖಲಾತಿ, ಭಾಗವಹಿಸುವಿಕೆಗಳು ಶೇಕಡ ೧೫ ಕ್ಕಿಂತ ಹೆಚ್ಚಾದ ನಂತರ, ಸಾಲಗಳ ಮರುಪಡೆಯುವಿಕೆಯನ್ನು ಪ್ರಾರಂಭಿಸಿವೆ.

ಅಧ್ಯಾಯ 4 – ಪ್ರಾಯೋಗಿಕ ವಿಶ್ಲೇಷಣೆ

ಈ ಅಧ್ಯಾಯದಲ್ಲಿ, ದ್ವಿತೀಯ ಮೂಲದಿಂದ ಮತ್ತು ಪ್ರಾಥಮಿಕ ಮೂಲದಿಂದ ಸಂಗ್ರಹಿಸಲಾದ ದತ್ತಾಂಶದ ಪ್ರಾಯೋಗಿಕ ವಿಶ್ಲೇಷಣೆ ಮಾಡಲಾಗಿದೆ. ಅಗತ್ಯವಿರುವ ಕಡೆಗಳಲ್ಲಿ, ಕೋರ್ಸ್‌ಗಳಾದ್ಯಂತ, ಲಿಂಗ, ವರ್ಗ, ಜಿಲ್ಲೆ /ವಿಭಾಗದಲ್ಲಿ ಅರಿವು ಫಲಾನುಭವಿಗಳ ಪ್ರವೃತ್ತಿಗಳು ಮತ್ತು ಮಾದರಿಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸಲು ಪ್ರತ್ಯೇಕ ವಿಶ್ಲೇಷಣೆ ಮಾಡಲಾಗಿದೆ. ಅಧ್ಯಯನದಲ್ಲಿ ವಿವರಿಸಿರುವ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ದತ್ತಾಂಶವನ್ನು ವಿಶ್ಲೇಷಣೆ ಮಾಡಲಾಗಿದೆ.

4.1 ರಾಜ್ಯ ಮಟ್ಟದಲ್ಲಿ ಪ್ರಗತಿ, ವಿಸ್ತರಣೆ ಮತ್ತು ವ್ಯಾಪ್ತಿ

ಅರಿವು ಕಾರ್ಯಕ್ರಮವನ್ನು ವಿದ್ಯಾರ್ಥಿ ಫಲಾನುಭವಿಗಳು ಎಷ್ಟರ ಮಟ್ಟಿಗೆ ಬಳಸಿಕೊಂಡಿದ್ದಾರೆ ಎಂಬುದನ್ನು ಕಾರ್ಯಕ್ರಮದ ವಿಸ್ತಾರ ಮತ್ತು ವ್ಯಾಪ್ತಿಯು ಪ್ರತಿಬಿಂಬಿಸುತ್ತದೆ. ಈ ವಿಭಾಗದಲ್ಲಿ, ರಾಜ್ಯ ಮಟ್ಟದಲ್ಲಿ ಭೌತಿಕ ಮತ್ತು ಆರ್ಥಿಕ ಗುರಿ ಸಾಧನೆಗಳ ದೃಷ್ಟಿಯಿಂದ ಅರಿವು ಕಾರ್ಯಕ್ರಮದ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಪ್ರಯತ್ನಿಸಲಾಗಿದೆ. ಸ್ಥೂಲ ವಿವರವನ್ನು ಪಡೆಯಲು, ಡಿ. ದೇವರಾಜ ಅರಸು ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ / ಸಾಮಾನ್ಯ ಪ್ರವೇಶ ಪರೀಕ್ಷೆ ಮತ್ತು ಆರ್ಥಿಕ ಸಮೀಕ್ಷೆಯ ಅಧಿಕೃತ ದಾಖಲೆಗಳಿಂದ ಪಡೆದ ವಾರ್ಷಿಕ ಸರಣಿಯ ಸಂಖ್ಯಾಶಾಸ್ತ್ರೀಯ ದತ್ತಾಂಶವನ್ನು ಇಲ್ಲಿ ಬಳಸಲಾಗಿರುತ್ತದೆ. ಒಟ್ಟಾರೆಯಾಗಿ, ಕೋಷ್ಟಕ –೪.೧ (ಚಿತ್ರ –೪.೧ ಮತ್ತು ೪.೨) ರಲ್ಲಿ ಹೇಳಿರುವಂತೆ ರಾಜ್ಯವು ೨೦೧೧–೧೨ ರಿಂದ ೨೦೧೮–೧೯ರವರೆಗಿನ ಅರಿವು ಶೈಕ್ಷಣಿಕ ಸಾಲ ಕಾರ್ಯಕ್ರಮದಡಿ ಒಟ್ಟು ೧೬,೪೩೦ ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಈ ಅವಧಿಯಲ್ಲಿ ಕಾರ್ಯಕ್ರಮಕ್ಕಾಗಿ ಒಟ್ಟು ೮,೫೫೮.೭೫ ಲಕ್ಷ ರೂಗಳನ್ನು ವಿನಿಯೋಗಿಸಿದೆ ಎಂಬುದು ದತ್ತಾಂಶವನ್ನು ವಿಶ್ಲೇಷಿಸಿದಾಗ ಕಂಡುಬರುತ್ತದೆ. ಈ ಯೋಜನೆ ಇದುವರೆಗು ೧೫,೦೯೫ ವಿದ್ಯಾರ್ಥಿ ಫಲಾನುಭವಿಗಳ ಭೌತಿಕ ಗುರಿಯನ್ನು ತಲುಪಿದ್ದು, ಒಟ್ಟು ಹಣಕಾಸು ವೆಚ್ಚ ೧೦,೨೦೭.೭೧ ಲಕ್ಷ ರೂಗಳಷ್ಟಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅವಧಿಯಲ್ಲಿ ಈ ಯೋಜನೆ ಕ್ರಮವಾಗಿ ಶೇಕಡಾ ೧೦೮.೮ ಮತ್ತು ಶೇಕಡಾ ೮೩.೮ ರಷ್ಟು ಸಮರ್ಥವಾಗಿದೆ.

ಮುಂದುವರಿದು, ವಿದ್ಯಾರ್ಥಿ ಫಲಾನುಭವಿಗಳ ವಾರ್ಷಿಕ ವ್ಯಾಪ್ತಿಯು ಈ ಅವಧಿಯಲ್ಲಿ ಸಕಾರಾತ್ಮಕ ಬೆಳವಣಿಗೆಯನ್ನು ಸೂಚಿಸುವುದಿಲ್ಲ. ಬದಲಿಗೆ ಭೌತಿಕ ಗುರಿಗಳಲ್ಲಿ ಏರಿಳಿತವಿದೆ. ೨೦೧೩–೧೪ ಮತ್ತು ೨೦೧೫–೧೬ರ ವರ್ಷಗಳನ್ನು ಹೊರತುಪಡಿಸಿ, ಎಲ್ಲಾ ವರ್ಷಗಳಲ್ಲಿ ಹಣಕಾಸಿನ ಬಳಕೆಯಲ್ಲಿನ ಕೊರತೆಯು ನಿರಂತರವಾಗಿ ಕಂಡುಬರುತ್ತದೆ. ೨೦೧೩ ಮತ್ತು ೨೦೧೪ ರಲ್ಲಿ ಭೌತಿಕ ಮತ್ತು ಆರ್ಥಿಕ ಸಾಧನೆಗಳು ಶೇಕಡಾ ೧೦೦ ಮೀರಿದೆ. ಅರಿವು ಯೋಜನೆಗೆ ರಾಜ್ಯ ಸರ್ಕಾರ ವಿಶೇಷ ಅನುದಾನವನ್ನು ನೀಡಿದ್ದರಿಂದ ಈ ಎರಡು ವರ್ಷಗಳಲ್ಲಿ ಇಲಾಖೆಯು ಹೆಚ್ಚಿನ ಫಲಾನುಭವಿಗಳನ್ನು ಒಳಗೊಳ್ಳಲು ಸಾಧ್ಯವಾಯಿತು ಎಂದು ಅಧಿಕಾರಿಗಳೊಂದಿಗಿನ ಸಂವಾದ ಸ್ಪಷ್ಟಪಡಿಸಿದೆ. ನಂತರದ ವರ್ಷಗಳಲ್ಲಿ, ಇಲಾಖೆಗೆ ಲಭ್ಯವಿರುವ ಅನುದಾನದಿಂದ ಇಲಾಖೆಯು ಈ ಯೋಜನೆಗೆ ಹಣಕಾಸು ಹಂಚಿಕೆಗಳನ್ನು ಮಾಡಿತ್ತು. ಆದ್ದರಿಂದ ಫಲಾನುಭವಿ ವ್ಯಾಪ್ತಿಯಲ್ಲಿ ಏರಿಳಿತವನ್ನು ನೋಡಬಹುದಾಗಿದೆ.

ಕೋಷ್ಟಕ 3 ರಾಜ್ಯ ಮಟ್ಟದಲ್ಲಿ ಅರಿವು ಶಿಕ್ಷಣ ಸಾಲ ಯೋಜನೆಯ ಪ್ರಗತಿ

ವರ್ಷ	ಗುರಿ ಹಂಚಿಕೆಗಳು (ಲಕ್ಷ ರೂ.ಗಳಲ್ಲಿ)		ಸಾಧನೆ (ಲಕ್ಷ ರೂ.ಗಳಲ್ಲಿ)		ಪ್ರತಿಶತ	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
೨೦೧೧–೧೨	ಲಭ್ಯವಿಲ್ಲ	ಲಭ್ಯವಿಲ್ಲ	೧೭೬	೧೭.೬೦	–	–
೨೦೧೨–೧೩	ಲಭ್ಯವಿಲ್ಲ	ಲಭ್ಯವಿಲ್ಲ	೧೩೪	೨೦.೬೦	–	–
೨೦೧೩–೧೪	೨೦೦	೧೦೦.೦೦	೨೪೯	೧೦೮.೬೩	೧೨೪.೫೦	೧೦೮.೬೩
೨೦೧೪–೧೫	೧೬೧೫	೮೦೭.೭೧	೯೯೭	೫೧೩.೦೩	೬೧.೭೩	೬೩.೫೨
೨೦೧೫–೧೬	೫೦೦	೨೫೦.೦೦	೧೨೫೧	೫೮೩.೦೧	೨೫೦.೦	೨೩೩.೦೦
೨೦೧೬–೧೭	೩೭೮೦	೨೪೫೦.೦೦	೩೫೨೩	೧೯೫೧.೦೧	೯೩.೦	೮೦.೦
೨೦೧೭–೧೮	೪೦೦೦	೩೧೫೦.೦೦	೫೮೧೯	೨೮೦೦.೬೬	೧೪೫	೮೯
೨೦೧೮–೧೯*	೫೦೦೦	೩೫೪೦.೦೦	೪೨೮೧	೨೫೬೪.೨೧	೮೬	೭೨
ಒಟ್ಟು	೧೫,೦೯೫	೧೦೨೯೭.೭೧	೧೬,೪೩೦	೮,೫೫೮.೭೫	೧೦೮.೮	೮೩.೧

ಗಮನಿಸಿ: * ನವೆಂಬರ್, 2018 ರವರೆಗೆ. 2011–12 ಮತ್ತು 2012–13ರ ವರ್ಷಗಳ ದತ್ತಾಂಶವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಉಲ್ಲೇಖ ನಿಯಮ (ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ) ಯಿಂದ ತೆಗೆದುಕೊಳ್ಳಲಾಗಿದೆ. 2013–14 ರಿಂದ 2014–15ನೇ ಸಾಲಿನವರೆಗೆ, ಬೆಂಗಳೂರಿನ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಒದಗಿಸಿದ ಅಧಿಕೃತ ದಾಖಲೆಗಳ ಪ್ರಕಾರ ದತ್ತಾಂಶವನ್ನು ಪಡೆಯಲಾಗಿದೆ. 2015–16 ರಿಂದ 2018–19ರವರೆಗೆ, 2018–19ರ ಕರ್ನಾಟಕದ ಆರ್ಥಿಕ ಸಮೀಕ್ಷೆಯಿಂದ ದತ್ತಾಂಶವನ್ನು ತೆಗೆದುಕೊಳ್ಳಲಾಗಿದೆ.

ಚಿತ್ರ 3 ರಾಜ್ಯ ಮಟ್ಟದಲ್ಲಿ ಅರಿವು ಶಿಕ್ಷಣ ಸಾಲ ಯೋಜನೆಯ ಪ್ರಗತಿ (ಲಕ್ಷಗಳಲ್ಲಿ)



ಮೂಲ: ಇಓಎಸ್ ೨೦೧೮–೧೯

ಚಿತ್ರ 4 ರಾಜ್ಯ ಮಟ್ಟದಲ್ಲಿ ಅರಿವು ಶಿಕ್ಷಣ ಸಾಲ ಯೋಜನೆಯ ಪ್ರಗತಿ (ಶೇಕಡವಾರು)



ಮೂಲ : ಇಓಎಸ್ ೨೦೧೮–೧೯

4.1.1 ಗುಂಪುಗಳ ಜಾತಿವಾರು ವ್ಯಾಪ್ತಿ

ಅಲೆಮಾರಿ, ಅರೆ–ಅಲೆಮಾರಿ, ಮಡಿವಾಳ, ಸವಿತಾ, ಕುಂಬಾರ, ತಿಗಳ ಮತ್ತು ಉಪ್ಪಾರ ಮುಂತಾದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿಶೇಷ ಜನಾಂಗ ಗುಂಪುಗಳಿಗೆ ಸಂಖ್ಯಾತ್ಮಕ ಕೆಲವು ದತ್ತಾಂಶಗಳು ಲಭ್ಯವಿವೆ ಎಂದು ಗಮನಿಸಲಾಗಿದೆ. ಈ ದತ್ತಾಂಶವು ಕೆಲವು ವರ್ಷಗಳವರೆಗೆ ಮಾತ್ರ ಲಭ್ಯವಿದೆ. ಇಲ್ಲಿ ಜನಾಂಗಗಳ ಗುಂಪುಗಳಲ್ಲಿ ಯೋಜನೆಯ ವ್ಯಾಪ್ತಿಯನ್ನು ನಿರ್ಣಯಿಸಲು ಪ್ರಯತ್ನಿಸಲಾಗುತ್ತದೆ. ಅಲೆಮಾರಿ ಮತ್ತು ಅರೆ–ಅಲೆಮಾರಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿಷಯದಲ್ಲಿ, ೨೦೧೪–೧೫ನೇ ಸಾಲಿನಿಂದ ೨೦೧೮–೧೯ರವರೆಗಿನ ವ್ಯಾಪ್ತಿಯನ್ನು ವಿಶ್ಲೇಷಿಸಿದರೆ (ಕೋಷ್ಟಕ ೪.೨), ಭೌತಿಕ ಮತ್ತು ಆರ್ಥಿಕ ಹಂಚಿಕೆಗಳು ೨೦೧೮–೧೯ ವರ್ಷದ ಅವಧಿಯಲ್ಲಿ ಹೊರತುಪಡಿಸಿ ಉಳಿದ ಅವಧಿಯಲ್ಲಿ ಹೆಚ್ಚುತ್ತಿರುವ ಪ್ರವೃತ್ತಿಯನ್ನು ಸೂಚಿಸುತ್ತವೆ ಎಂದು ಗಮನಿಸಲಾಗಿದೆ. ಆದಾಗ್ಯೂ, ಆಶ್ಚರ್ಯವೆಂಬಂತೆ ಸಾಧನೆಯ ವಿಷಯದಲಿ ಈ ಎರಡೂ ನಿಯತಾಂಕಗಳು ತೀವ್ರ ಕೊರತೆಯನ್ನು ಸೂಚಿಸುತ್ತವೆ.

ಕೋಷ್ಟಕ 4 ರಾಜ್ಯ ಮಟ್ಟದಲ್ಲಿ ಅಲೆಮಾರಿ ಮತ್ತು ಅರೆ–ಅಲೆಮಾರಿ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ.

ವರ್ಷ	ಭೌತಿಕ (ಸಂಖ್ಯೆ)		ಆರ್ಥಿಕ [ಲಕ್ಷಗಳಲ್ಲಿ]	
	ಹಂಚಿಕೆಗಳು	ಸಾಧನೆಗಳು	ಹಂಚಿಕೆಗಳು	ಸಾಧನೆಗಳು
೨೦೧೧–೧೨	–	–	–	–
೨೦೧೨–೧೩	–	–	–	–
೨೦೧೩–೧೪	೦	೦	೦	೦
೨೦೧೪–೧೫	೧೯೬	೫೬	೯೮	೨೬.೧೮
೨೦೧೫–೧೬	೨೦೦	೯೨	೧೦೦.೦೦	೩೮.೨೯
೨೦೧೬–೧೭	೨೧೫	೧೧೦	೧೦೭.೫೦	೫೬.೯೮
೨೦೧೭–೧೮	೨೬೮	೧೩೧	೧೩೫	೭೦.೩೬
೨೦೧೮–೧೯	೮	೨೦	೫.೦೬	೧೦.೭೨
ಒಟ್ಟು	**೮೮೭**	**೪೦೯**	**೪೪೫.೫೬**	**೨೦೨.೫೩**

ಮೂಲ : ಇಓಎಸ್ ೨೦೧೮–೧೯

ಇತರ ಹಿಂದುಳಿದ ವರ್ಗಗಳ ವಿಭಾಗಗಳಾದ ಮಡಿವಾಳ, ಸವಿತಾ, ಕುಂಬಾರ ಮತ್ತು ತಿಗಳ ಗಳಲ್ಲಿಯೂ ಇದೇ ರೀತಿಯ ಪ್ರವೃತ್ತಿ ಕಂಡುಬರುತ್ತದೆ (ಕೋಷ್ಟಕ ೪.೩; ೪.೪; ೪.೫, ೪.೬ ಮತ್ತು ೪.೭ ಕ್ರಮವಾಗಿ). ಉಪ್ಪಾರ ಸಮುದಾಯದಲ್ಲಿ ಯೋಜನೆಯ ವ್ಯಾಪ್ತಿಯನ್ನು ಕೇವಲ ಒಂದು ವರ್ಷ ಮಾತ್ರ ಕಾಣಬಹುದು. ಈ ವರ್ಗವು ಕೊರತೆಯನ್ನು ಸೂಚಿಸುತ್ತದೆಯಾದರೂ, ಇತರ ಜಾತಿ ಗುಂಪುಗಳಲ್ಲಿ ಕಂಡುಬರುವಷ್ಟು ದೊಡ್ಡದಲ್ಲ. ಭೌತಿಕ ಮತ್ತು ಆರ್ಥಿಕ ಗುರಿ ವ್ಯಾಪ್ತಿಯಲ್ಲಿನ ನಿರಂತರ ಕೊರತೆಯು ಹೆಚ್ಚು ದುರ್ಬಲವೆಂದು ಪರಿಗಣಿಸಲಾಗುವ ಹಿಂದುಳಿದ ವರ್ಗಗಳ ಸಮುದಾಯಗಳನ್ನು ತಲುಪಲು ಕೆಲವು ಗಂಭೀರ ನಿರ್ಬಂಧಗಳನ್ನು ಸೂಚಿಸುತ್ತದೆ. ಇದು ಹೆಚ್ಚಿನ ತನಿಖೆಗೆ ಒತ್ತಾಯಿಸುತ್ತದೆ.

ಕೋಷ್ಟಕ 5 ರಾಜ್ಯ ಮಟ್ಟದಲ್ಲಿ ಮಡಿವಾಳ ಹಿಂದುಳಿದ ವರ್ಗ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ

ವರ್ಷ	ಭೌತಿಕ (ಸಂಖ್ಯೆ)		ಆರ್ಥಿಕ ಲಕ್ಷಗಳಲ್ಲಿ]	
	ಹಂಚಿಕೆಗಳು	ಸಾಧನೆಗಳು	ಹಂಚಿಕೆ	ಸಾಧನೆಗಳು
೨೦೧೧–೧೨	–	–	–	–
೨೦೧೨–೧೩	–	–	–	–
೨೦೧೩–೧೪	೦	೦	೦	೦
೨೦೧೪–೧೫	೦	೦	೦	೦
೨೦೧೫–೧೬	೦	೦	೦	೦
೨೦೧೬–೧೭	೭೫	೩೩	೪೫.೦	೨೧.೧೩
೨೦೧೭–೧೮	೧೦೦	೧೬	೬೭.೪೦	೮.೯೩
೨೦೧೮–೧೯	೬೨	೧	೪೪.೯೫	೦.೭೦
ಒಟ್ಟು	**೨೩೭**	**೫೦**	**೧೫೭.೩೫**	**೩೦.೭೬**

ಮೂಲ: ಇಓಎಸ್ 2018–19

ಕೋಷ್ಟಕ 6 ರಾಜ್ಯ ಮಟ್ಟದಲ್ಲಿ ಸವಿತಾ ಸಮಾಜದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ

ವರ್ಷ	ಭೌತಿಕ (ಸಂಖ್ಯೆ)		ಆರ್ಥಿಕ [ಲಕ್ಷಗಳಲ್ಲಿ]	
	ಹಂಚಿಕೆಗಳು	ಸಾಧನೆಗಳು	ಹಂಚಿಕೆಗಳು	ಸಾಧನೆಗಳು
೨೦೧೧–೧೨	–	–	–	–
೨೦೧೨–೧೩	–	–	–	–
೨೦೧೩–೧೪	೦	೦	೦	೦
೨೦೧೪–೧೫	೦	೦	೦	೦
೨೦೧೫–೧೬	೦	೦	೦	೦
೨೦೧೬–೧೭	೭೫	೧೦	೪೫.೦	೫.೬೬
೨೦೧೭–೧೮	೧೦೦	೧೫	೬೭.೪೦	೯.೯೦
೨೦೧೮–೧೯	೬೨	೩	೪೪.೯೫	೨.೦೧
ಒಟ್ಟು	**೨೩೭**	**೨೮**	**೧೫೭.೩೫**	**೧೭.೫೭**

ಮೂಲ : ಇಓಎಸ್ ೨೦೧೮–೧೯

ಕೋಷ್ಟಕ 7 ರಾಜ್ಯ ಮಟ್ಟದಲ್ಲಿ ಕುಂಬಾರ ಸಮಾಜದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ

ವರ್ಷ	ಭೌತಿಕ (ಸಂಖ್ಯೆ)		ಆರ್ಥಿಕ [ಲಕ್ಷಗಳಲ್ಲಿ]	
	ಹಂಚಿಕೆಗಳು	ಸಾಧನೆಗಳು	ಹಂಚಿಕೆಗಳು	ಸಾಧನೆಗಳು
೨೦೧೧–೧೨				
೨೦೧೨–೧೩				
೨೦೧೩–೧೪	೦	೦	೦	೦
೨೦೧೪–೧೫	೦	೦	೦	೦
೨೦೧೫–೧೬	೦	೦	೦	೦
೨೦೧೬–೧೭	೭೫	೩೦	೪೫.೦	೧೮.೯೮
೨೦೧೭–೧೮	೧೦೦	೧೭	೬೭.೪೦	೧೦.೨೬
೨೦೧೮–೧೯	೬೨	೨	೪೪.೯೫	೦.೭೭
ಒಟ್ಟಣಚಟ	**೨೩೭**	**೪೯**	**೧೫೭.೫೫**	**೩೦.೦೧**

ಮೂಲ: ಇಓಎಸ್ ೨೦೧೮–೧೯.

ಕೋಷ್ಟಕ 8 ರಾಜ್ಯ ಮಟ್ಟದಲ್ಲಿ ತಿಗಳ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ

ವರ್ಷ	ಭೌತಿಕ (ಸಂಖ್ಯೆ)		ಆರ್ಥಿಕ [ಲಕ್ಷಗಳಲ್ಲಿ]	
	ಹಂಚಿಕೆಗಳು	ಸಾಧನೆಗಳು	ಹಂಚಿಕೆಗಳು	ಸಾಧನೆಗಳು
೨೦೧೧–೧೨	–	–	–	–
೨೦೧೨–೧೩	–	–	–	–
೨೦೧೩–೧೪	೦	೦	೦	೦
೨೦೧೪–೧೫	೦	೦	೦	೦
೨೦೧೫–೧೬	೦	೦	೦	೦
೨೦೧೬–೧೭	೭೫	೧೧	೪೫.೦	೭.೯೦
೨೦೧೭–೧೮	೧೩೮	೧೦	೮೯.೭೦	೮.೦೬
೨೦೧೮–೧೯	೬೯	೧	೪೪.೮೫	೦.೪೨
ಒಟ್ಟು	**೨೮೨**	**೨೨**	**೧೭೯.೫೫**	**೧೬.೩೮**

ಮೂಲ : ಇಓಎಸ್ ೨೦೧೮–೧೯.

ಕೋಷ್ಟಕ 9 ರಾಜ್ಯ ಮಟ್ಟದಲ್ಲಿ ಉಪ್ಪಾರ ಸಮಾಜದ ಹಿಂದುಳಿದ ವರ್ಗ ವಿದ್ಯಾರ್ಥಿಗಳಿಗೆ ಅರಿವು ಸಾಲದ ಭೌತಿಕ ಮತ್ತು ಆರ್ಥಿಕ ಹಂಚಿಕೆ ಮತ್ತು ಸಾಧನೆ

ವರ್ಷ	ಭೌತಿಕ (ಸಂಖ್ಯೆ)		ಆರ್ಥಿಕ[ಲಕ್ಷರೂಗಳಲ್ಲಿ]	
	ಹಂಚಿಕೆ	ಸಾಧನೆ	ಹಂಚಿಕೆ	ಸಾಧನೆ
೨೦೧೧–೧೨	–	–	–	–
೨೦೧೨–೧೩	–	–	–	–
೨೦೧೩–೧೪	೦	೦	೦	೦
೨೦೧೪–೧೫	೦	೦	೦	೦
೨೦೧೫–೧೬	೦	೦	೦	೦
೨೦೧೬–೧೭	೭೫	೩೭	೪೫	೨೧.೫೯
೨೦೧೭–೧೮	೦	೦	೦	೦
೨೦೧೮–೧೯	೦	೦	೦	೦
ಒಟ್ಟು	**೭೫**	**೩೭**	**೪೫**	**೨೧.೫೯**

ಮೂಲ : ಇಓಎಸ್ ೨೦೧೮–೧೯.

4.1.2 ಸಾಮಾನ್ಯ ಪ್ರವೇಶ ಪರೀಕ್ಷೆ ವರ್ಗದ ಅಡಿಯಲ್ಲಿ ಅರಿವು ಫಲಾನುಭವಿಗಳು

ರಾಜ್ಯದಲ್ಲಿ ಸಾಮಾನ್ಯ ವರ್ಗದ ಅಡಿಯಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ದತ್ತಾಂಶವು ೩ ವರ್ಷಗಳವರೆಗೆ ಎಂದರೆ, ೨೦೧೬–೧೭ ರಿಂದ ೨೦೧೮–೧೯ರವರೆಗೆ ಲಭ್ಯವಿದೆ (ಕೋಷ್ಟಕ ೪.೮). ಆದಾಗ್ಯೂ ಅಂಕಿಅಂಶಗಳು ಈ ವರ್ಷಗಳಲ್ಲಿ ಭೌತಿಕ ಮತ್ತು ಆರ್ಥಿಕ ಗುರಿ ಸಾಧನೆಗಳ ದೃಷ್ಟಿಯಿಂದ ಹೆಚ್ಚುತ್ತಿದ್ದು ಯೋಜನೆಯು ಉತ್ತಮ ಗತಿಯಲ್ಲಿ ಸಾಗುತ್ತಿರುವುದನ್ನು ಸೂಚಿಸುತ್ತವೆ.

ಕೋಷ್ಟಕ 10 ಸಿಇಟಿ (ಒಟ್ಟಾರೆ ರಾಜ್ಯ) ಅಡಿಯಲ್ಲಿ ಭೌತಿಕ ಮತ್ತು ಆರ್ಥಿಕ ಹಂಚಿಕೆಗಳು

ವರ್ಷ	ಭೌತಿಕ	ಆರ್ಥಿಕ (ಲಕ್ಷಗಳಲ್ಲಿ)
೨೦೧೬–೧೭	೫೨೫	೨೬೮.೪೩
೨೦೧೭–೧೮	೧೦೫೯	೫೪೩.೨
೨೦೧೮–೧೯	೧೫೫೧	೫೧೮.೩೯
ಒಟ್ಟು	**೩೧೩೫**	**೧೩೩೦.೦೨**

ಮೂಲ : ಇಓಎಸ್ ೨೦೧೮–೧೯

4.1.3 ಉನ್ನತ ಶಿಕ್ಷಣ ಕೋರ್ಸ್‌ಗಳಾದ್ಯಂತ ಫಲಾನುಭವಿಗಳ ವ್ಯಾಪ್ತಿ: ಸಮಯ ಸರಣಿ ವಿಶ್ಲೇಷಣೆ

ಅರಿವು ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾರ್ಥಿ ಫಲಾನುಭವಿಗಳ ವಿಸ್ತರಣೆ ಮತ್ತು ವ್ಯಾಪ್ತಿ ಮೇಲ್ನೋಟಕ್ಕೆ ಕಾರ್ಯಕ್ರಮದ ಪರಿಣಾಮಕಾರಿತ್ವದ ಒಂದು ಪ್ರತಿಬಿಂಬವಾಗಿದೆ. ಅರಿವು ಕಾರ್ಯಕ್ರಮವು ವಿವಿಧ ಕೋರ್ಸ್‌ಗಳಲ್ಲಿ, ಪ್ರದೇಶಗಳಲ್ಲಿ, ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳಲ್ಲಿ ಮತ್ತು ವಿವಿಧ ವಿಭಾಗಗಳಲ್ಲಿ ವಿದ್ಯಾರ್ಥಿ ಫಲಾನುಭವಿಗಳನ್ನು ಹೇಗೆ ಗುರಿಪಡಿಸಿದೆ ಎಂಬುದನ್ನು ಸೂಚಿಸುತ್ತದೆ. ಉನ್ನತ ಶಿಕ್ಷಣದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಪ್ತಿಯನ್ನು ಪರಿಗಣನೆಗೆ ತೆಗೆದುಕೊಂಡರೆ ಅರಿವು ಕಾರ್ಯಕ್ರಮ ಸಾರ್ವತ್ರಿಕವಲ್ಲ. ಇದು ಕೆಲವು ವೃತ್ತಿಪರ ಮತ್ತು ಇತರ ಪದವಿಪೂರ್ವ ಮತ್ತು

ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಸೀಮಿತವಾಗಿದೆ. ಇದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ ಮೂಲಕ ಆಯ್ಕೆಯಾದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ಮತ್ತು ಎಚ್‌ಇಐಗಳಲ್ಲಿ ನೀಡಲಾಗುವ ಕೆಲವು ಸಿಇಟಿ ಅಲ್ಲದ ಕೋರ್ಸ್‌ಗಳ ವಿದ್ಯಾರ್ಥಿಗಳನ್ನು ಗುರಿಯಾಗಿಸುತ್ತದೆ. ಕಳೆದ ವರ್ಷಗಳಲ್ಲಿ ವರ್ಷಗಳಲ್ಲಿ, ಸಿಇಟಿ ಅಲ್ಲದ ವಿದ್ಯಾರ್ಥಿಗಳನ್ನು ಸೇರ್ಪಡೆಗೊಳಿಸುವಲ್ಲಿ ಮತ್ತು ಹೊರಗಿಡುವಲ್ಲಿ ಕೆಲವು ಪರಿಷ್ಕರಣೆಗಳನ್ನು ಮಾಡಲಾಗಿದೆ. ಈ ಸನ್ನಿವೇಶದಲ್ಲಿ, ಈ ಅವಧಿಯಲ್ಲಿ ವಿವಿಧ ಉನ್ನತ ಶಿಕ್ಷಣ ಕೋರ್ಸ್‌ಗಳಲ್ಲಿ ಫಲಾನುಭವಿಗಳ ವ್ಯಾಪ್ತಿಯನ್ನು ನಿರ್ಣಯಿಸುವ ಮೂಲಕ ಪ್ರಸ್ತುತ ಚಾಲ್ತಿಯಲ್ಲಿರುವ ಪ್ರವೃತ್ತಿಗಳನ್ನು ಸೆರೆಹಿಡಿಯುವ ಪ್ರಯತ್ನ ಮಾಡಲಾಗುತ್ತದೆ. ಈ ವಿಶ್ಲೇಷಣೆಗಾಗಿ, ೨೦೧೧–೧೨ ರಿಂದ ೨೦೧೭–೧೮ರವರೆಗೆ ರಾಜ್ಯದ ನಾಲ್ಕು ವಿಭಾಗಗಳಲ್ಲಿ ೧೨ ಮಾದರಿ ಜಿಲ್ಲೆಗಳಿಗೆ ಲಭ್ಯವಿರುವ ಸಾರ್ವತ್ರಿಕ ದತ್ತಾಂಶವನ್ನು ಬಳಸಲಾಗುತ್ತದೆ. ಕೋಷ್ಟಕ ೪.೯ ರಿಂದ ನೋಡಿದಾಗ, ಹಲವು ವರ್ಷಗಳಲ್ಲಿ ಸಿಇಟಿ ಮತ್ತು ಸಿಇಟಿ ಅಲ್ಲದ ವಿಭಾಗಗಳಿಗೆ ವಿವಿಧ ಉನ್ನತ ಶಿಕ್ಷಣ ಕೋರ್ಸ್‌ಗಳಿಗೆ ಒಟ್ಟಾರೆ ಫಲಾನುಭವಿಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ. ಆದಾಗ್ಯೂ, ಸಿಇಟಿ ಕೋರ್ಸ್‌ಗಳ ಸಂಖ್ಯೆಯ ಹೆಚ್ಚಳವು ದೊಡ್ಡದಾಗಿದೆ. ೨೦೧೧ ರಲ್ಲಿ ಕೇವಲ ೩೧ ರಿಂದ ಅದು ೨೦೧೭ ರಲ್ಲಿ ೧೧೧೧ ಕ್ಕೆ ಏರಿರುವುದನ್ನು ಗಮನಿಸಬಹುದಾಗಿದೆ.

ಕೋಷ್ಟಕ 11 ಸಿಇಟಿ ಮತ್ತು ಸಿಇಟಿಯೇತರ ಕೋರ್ಸ್‌ಗಳಲ್ಲಿ ಅರಿವು ಶಿಕ್ಷಣ ಫಲಾನುಭವಿಗಳು

ಕೋರ್ಸ್ ವರ್ಷ	ಸಿಇಟಿ					ಒಟ್ಟು ಸಿಇಟಿ	ಸಿಇಟಿಯಲ್ಲದ			ಒಟ್ಟು ಸಿಇಟಿ–ಅಲ್ಲದ	ಒಟ್ಟು ಮೊತ್ತ
	ಬಿಇ/ಬಿಟೆಕ್	ಸ್ನಾತಕೋತ್ತರ	ಇತರ ವೃತ್ತಿ ಕೋರ್ಸ್‌ಗಳು	ಎಂಬಿಬಿಎಸ್	ಇತರೆಗಳು		ಸಾಮಾನ್ಯ ಪದವಿ	ಇತರೆಗಳು	ಸ್ನಾತಕೋತ್ತರ		
೨೦೧೧	೩೧	-	–	–	–	೩೧	–	–	–	–	೩೧
೨೦೧೨	೨೭	–	–	–	–	೨೭	–	–	–	–	೨೭
೨೦೧೩	೧೧೫	೧೬	–	೬	–	೧೩೭	–	–	–	–	೧೩೭
೨೦೧೪	೪೧೮	೬೭	೧೨	೧೭	೧	೫೧೫	೨	–	೫	೭	೫೨೨
೨೦೧೫	೪೩೭	೩೪	೯	೨೧	೧	೫೦೨	೩	–	೧	೪	೫೦೬
೨೦೧೬	೫೯೧	೪೫	೨೦	೪೦	೨	೬೯೮	೯	೨	೩	೧೪	೭೧೨
೨೦೧೭	೯೫೧	೫೮	೫೫	೪೪	೩	೧೧೧೧	೨೭	೨	೮	೩೭	೧೧೪೮
ಒಟ್ಟು	**೨೫೭೦**	**೨೨೦**	**೯೬**	**೧೨೮**	**೭**	**೩೦೨೧**	**೪೧**	**೪**	**೧೭**	**೬೨**	**೩೦೮೩**

ಮೂಲ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು

ಆದಾಗ್ಯೂ, ಹೆಚ್ಚುತ್ತಿರುವ ಬೆಳವಣಿಗೆ ೨೦೧೧ ರಿಂದ ೨೦೧೫ ರವರೆಗೆ ಸ್ಥಿರವಾಗಿಲ್ಲ. ವಿಭಿನ್ನ ಕೋರ್ಸ್‌ಗಳಲ್ಲಿ ಅದೂ ನಿರ್ದಿಷ್ಟವಾಗಿ ಬಿಇ / ಬಿಟೆಕ್ ಕೋರ್ಸ್‌ಗಳಲ್ಲಿ ಫಲಾನುಭವಿಗಳ ವ್ಯಾಪ್ತಿ ಹೆಚ್ಚಿದೆ ಮಾತ್ರವಲ್ಲದೆ ವರ್ಷಗಳಲ್ಲಿ ಅವರ ಸಂಖ್ಯೆಯಲ್ಲಿ ಸ್ಥಿರವಾದ ಹೆಚ್ಚಳವನ್ನೂ ಬಹಿರಂಗಪಡಿಸುತ್ತಿದೆ ಎಂಬ ಅಂಶಗಳು ತೃಪ್ತಿದಾಯಕವಾಗಿವೆ. ೨೦೧೬ ರ ವರ್ಷದಿಂದ, ಬಿಇ ಕೋರ್ಸ್‌ನ ವ್ಯಾಪ್ತಿಯು ದೊಡ್ಡ ಮಟ್ಟದಲ್ಲಿ ಹೆಚ್ಚಳವನ್ನು ಕಂಡಿದೆ. ಈ ಪ್ರವೃತ್ತಿಯು ಅರಿವು ಉನ್ನತ ಶೈಕ್ಷಣಿಕ ಸಾಲ ಕಾರ್ಯಕ್ರಮವು ಆರ್ಥಿಕ ವಲಯದಲ್ಲಿ ಹೆಚ್ಚು ಉದಯೋನ್ಮುಖವಾಗಿರುವ ವೃತ್ತಿಪರ ಕಾರ್ಯಕ್ರಮ (ಎಂಜಿನಿಯರಿಂಗ್) ದಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಭಾಗವಹಿಸುವಿಕೆ ಹೆಚ್ಚುತ್ತಿರುವುದು ಸೂಚಿಸುತ್ತಿದೆ.

ಅಂತೆಯೇ, ೨೦೧೫ ರಿಂದ ಸ್ನಾತಕೋತ್ತರ, ವೈದ್ಯಕೀಯ ಮತ್ತು ಸಿಇಟಿ ವಿಭಾಗದ ವೃತ್ತಿಪರ ಕೋರ್ಸ್‌ಗಳಲ್ಲೂ ಸ್ಥಿರವಾದ ಹೆಚ್ಚಳ ಕಂಡುಬರುತ್ತದೆ. ಆದರೂ ಈ ಸಂಖ್ಯೆ ಎರಡು ಅಂಕೆಗಳಿಗೆ ಸೀಮಿತವಾಗಿದೆ ಮತ್ತು ೬೦ ಕ್ಕಿಂತ ಕಡಿಮೆ ಇದೆ. ಸಿಇಟಿ ಅಲ್ಲದ ಕೋರ್ಸ್‌ಗಳ ವಿಷಯದಲ್ಲಿ, ೨೦೧೪ ರ ವರ್ಷದಲ್ಲಿ ಮಾತ್ರ, ಅರಿವು ಶಿಕ್ಷಣ ಸಾಲ ಫಲಾನುಭವಿಗಳು ಸಣ್ಣ ಸಂಖ್ಯೆಯಲ್ಲಿದ್ದರೂ ವಿವಿಧ ಕೋರ್ಸ್‌ಗಳಲ್ಲಿ ಕಾಣಿಸಿಕೊಳ್ಳಲು ಪ್ರಾರಂಭಿಸಿದ್ದಾರೆ. ನಂತರದ ವರ್ಷಗಳಲ್ಲಿ ಕಾರ್ಯಕ್ರಮ ಅವರಿಗೆ ವಿಸ್ತರಿಸಲ್ಪಟ್ಟಿದೆ ಮತ್ತು ಆದರೆ ವ್ಯಾಪ್ತಿಯನ್ನು ಸಣ್ಣ ಪ್ರಮಾಣದಲ್ಲಿ ಸೀಮಿತಗೊಳಿಸಲಾಗಿದೆ. ಹೆಚ್ಚಿನ ಉನ್ನತ ಶಿಕ್ಷಣ ದಾಖಲಾತಿ ಸಾಮಾನ್ಯ ಪದವಿ ಕೋರ್ಸ್‌ಗಳಲ್ಲಿದೆ, ಅದು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿಯೂ ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹೆಚ್ಚಿನ ಭಾಗವನ್ನು ಒಳಗೊಂಡಿರುತ್ತದೆ ಎಂಬ ಅಂಶವನ್ನು ಗಮನಿಸಿದರೆ, ಈ ವಿಭಾಗದ ವಿದ್ಯಾರ್ಥಿಗಳಿಗೆ ಸಹ ಭವಿಷ್ಯದ ದೃಷ್ಟಿಯಿಂದ ಶಿಕ್ಷಣ ಸಾಲದ ಪ್ರಯೋಜನವನ್ನು ವಿಸ್ತರಿಸುವ ಪ್ರಸ್ತುತತೆಯನ್ನು ಪರಿಶೀಲಿಸುವುದು ಅಗತ್ಯವಾಗಿರುತ್ತದೆ.

ವರ್ಷಗಳಲ್ಲಿ ಹೆಚ್ಚುತ್ತಿರುವ ಫಲಾನುಭವಿ ವ್ಯಾಪ್ತಿಯು ಕಾರ್ಯಕ್ರಮದ ಹೆಚ್ಚಿನ ಮೌಲ್ಯದ ಉಪಯುಕ್ತತೆಯ ವಿಶಾಲ ಪ್ರತಿಬಿಂಬವಾಗಿದೆ. ಆದಾಗ್ಯೂ, ಕೇವಲ ಸಂಖ್ಯಾತ್ಮಕ ಅಂಕಿ ಅಂಶಗಳು ಕಾರ್ಯಕ್ರಮದ ಉಪಯುಕ್ತತೆಯ ಅಂಶವನ್ನು ಸಮರ್ಪಕವಾಗಿ ಪ್ರತಿಬಿಂಬಿಸುವುದಿಲ್ಲ. ಆದ್ದರಿಂದ ಸಾಲ ಪಡೆದ ನಂತರ ವಿದ್ಯಾರ್ಥಿಗಳು ಪಡೆದ ವಿವಿಧ ಪ್ರಯೋಜನಗಳಂತಹ ಇತರ ಅಂಶಗಳನ್ನು ಪರಿಗಣಿಸಿ ಉಪಯುಕ್ತತೆಯ ಮೌಲ್ಯವನ್ನು ನಿರ್ಣಯಿಸಬೇಕು. ಕ್ಷೇತ್ರ ಸಮೀಕ್ಷೆಯ ಪ್ರಾಥಮಿಕ ಡೇಟಾವನ್ನು ಬಳಸಿಕೊಂಡು ಈ ಅಂಶವನ್ನು ಮತ್ತಷ್ಟು ವಿಶ್ಲೇಷಿಸಲಾಗಿದೆ ಮತ್ತು ಚರ್ಚಿಸಲಾಗಿದೆ [ವಿಭಾಗ ೪.೩; ೪; ೪; ೪.೫; ೪.೬].

4.1.4 ವರ್ಗಗಳಾದ್ಯಂತ ಫಲಾನುಭವಿ ವ್ಯಾಪ್ತಿ: ಸಮಯ ಸರಣಿಯ ವಿಶ್ಲೇಷಣೆ

ಸಮಯ ಸರಣಿಯ ಫಲಾನುಭವಿ ದತ್ತಾಂಶದ ವಿಶ್ಲೇಷಣೆಯು ಸಿಇಟಿ ಮತ್ತು ಸಿಇಟಿ ಅಲ್ಲದ ವಿವಿಧ ಕೋರ್ಸ್‌ಗಳಿಗೆ ನಾಲ್ಕು ವಿಭಿನ್ನ ವರ್ಗದ ವಿದ್ಯಾರ್ಥಿಗಳ ವ್ಯಾಪ್ತಿಯ ಪ್ರವೃತ್ತಿಗಳನ್ನು ಪರೀಕ್ಷಿಸಲು ಪ್ರಯತ್ನಿಸುತ್ತದೆ. ಕೋಷ್ಟಕ ೪.೧೦, ೪.೧೧, ೪.೧೨ ಮತ್ತು ೪.೧೩ ಅನುಕ್ರಮವಾಗಿ ವರ್ಗ I, ವರ್ಗ IIಎ, ವರ್ಗ IIIಎ ಮತ್ತು ವರ್ಗ IIIಬಿ ಯ ವ್ಯಾಪ್ತಿ ಪ್ರವೃತ್ತಿಯನ್ನು ಪ್ರಸ್ತುತಪಡಿಸುತ್ತವೆ. ಈ ಹೆಚ್ಚಳದ ಪ್ರವೃತ್ತಿ ಈ ನಾಲ್ಕು ವಿಭಾಗಗಳಲ್ಲಿನ ವಿದ್ಯಾರ್ಥಿಗಳು ಬಿಇ / ಬಿಟೆಕ್ ಕೋರ್ಸುಗಳಿಗೆ ಗರಿಷ್ಠ ಮಟ್ಟದಲ್ಲಿ ಅರಿವು ಸಾಲದ ಲಾಭವನ್ನು ಪಡೆಯುತ್ತಿದ್ದಾರೆ ಎಂದು ತಿಳಿಸುತ್ತದೆ. ೨೦೧೬–೧೭ನೇ ಸಾಲಿನಿಂದ, ಸಿಇಟಿ ಮೂಲಕ ಆಯ್ಕೆಯಾದ ಬಿ.ಸಿ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿಗಳ ಸಮಾಲೋಚನೆಯ ಸಮಯದಲ್ಲಿ ಸಿಇಟಿ ಸೆಲ್‌ಗೆ ಮುಂಗಡ ಅನುದಾನ ಲಭ್ಯವಾಗುತ್ತಿದ್ದು, ವಿದ್ಯಾರ್ಥಿಗಳಿಗೆ ಆಯಾ ಕಾಲೇಜಿನ ಅಗತ್ಯಕ್ಕೆ ಅನುಗುಣವಾಗಿ ಶುಲ್ಕ ಪಾವತಿ ಮಾಡಲು ಸಾಧ್ಯವಾಗುತ್ತದೆ. ಇದಲ್ಲದೆ, ಈ ಯೋಜನೆಯಲ್ಲಿ IIಎ ವರ್ಗದ ವಿದ್ಯಾರ್ಥಿಗಳು ಅತಿದೊಡ್ಡ ಫಲಾನುಭವಿಗಳಾಗಿದ್ದು, ನಂತರದ ಸ್ಥಾನಗಳಲ್ಲಿ IIIಬಿ, I ಮತ್ತು IIIಎ ವಿದ್ಯಾರ್ಥಿಗಳು ಕಂಡು ಬರುತ್ತಾರೆ. ಎಂಬಿಬಿಎಸ್ ಪದವಿಯನ್ನು ಪರಿಗಣನೆಗೆ ತೆಗೆದುಕೊಂಡರೆ, ೨೦೧೭ ರಲ್ಲಿ ಆರಂಭಿಕ ೩ ರಿಂದ ೨೨ ರವರೆಗೆ ಹೆಚ್ಚಳಗೊಂಡಿದ್ದು ವರ್ಗ IIಎ ಗೆ ವ್ಯಾಪ್ತಿಯಲ್ಲಿ ಈ ಹೆಚ್ಚಳವು ಹೆಚ್ಚು ಕಂಡುಬರುತ್ತದೆ, ಇತರ ಮೂರು ವಿಭಾಗಗಳು ಹೆಚ್ಚಿದ ವ್ಯಾಪ್ತಿಯನ್ನು ಬಹಿರಂಗಪಡಿಸುವುದಿಲ್ಲ. ವಾಸ್ತವವಾಗಿ, ವಿಚಿತ್ರವೆಂದರೆ, ವರ್ಗ IIIಬಿ ೨೦೧೫ ರಲ್ಲಿ ಆರಂಭಿಕ ೩ ಫಲಾನುಭವಿಗಳನ್ನು ಹೊಂದಿದ್ದು ೨೦೧೬ ರಲ್ಲಿ ೧೬ ಕ್ಕೆ ಏರಿತು ಮತ್ತು ೨೦೧೭ ರಲ್ಲಿ ೦೯ ಕ್ಕೆ ಇಳಿದಿದೆ. ಇದು ಅಸ್ಥಿರವಾದ ಬೆಳವಣಿಗೆಯನ್ನು ಬಹಿರಂಗಪಡಿಸುತ್ತದೆ,

ಕೋಷ್ಟಕ 12 ವರ್ಗ । ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳ ಅಡಿಯಲ್ಲಿ ಅರಿವು ಫಲಾನುಭವಿ ವ್ಯಾಪ್ತಿ

ವರ್ಷ	ಸಿಇಟಿ					ಸಿಇಟಿ–ಅಲ್ಲದ			ಒಟ್ಟು
	ಬಿಇ/ಬಿಟೆಕ್	ಸ್ನಾತಕೋತ್ತರ	ಪದವಿ	ಎಂಬಿಬಿಎಸ್	ಇತರೆ	ಸಾಮಾನ್ಯ ಪದವಿ	ಸ್ನಾತಕೋತ್ತರ	ಇತರೆ	
೨೦೧೧	೧೧ ೧೦೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	೧೧(೧೦೦.೦೦)
೨೦೧೨	೪ (೧೦೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	೪ (೧೦೦.೦೦)
೨೦೧೩	೨೨ (೯೧.೬೭)	೧(೪.೧೭)	(೦.೦೦)	೧(೪.೧೭)	(೦.೦೦)	(೦.೦೦)	(೦.೦೦)	(೦.೦೦)	೨೪ (೧೦೦.೦೦)
೨೦೧೪	೫೭ (೮೬.೩೬)	೪(೬.೦೬)	೩(೪.೫೫)	೨(೩.೦೩)	(೦.೦೦)	೨ (೬೬.೬೭)	೧(೩೩.೩೩)	(೦.೦೦)	೬೯ (೧೦೦.೦೦)
೨೦೧೫	೭೩ (೮೭.೯೫)	೫(೬.೦೨)	೧(೧.೨೦)	೪(೪.೮೨)	(೦.೦೦)	೨(೧೦೦.೦೦)	(೦.೦೦)	(೦.೦೦)	೮೫ (೧೦೦.೦೦)
೨೦೧೬	೭೮ (೮೩.೮೭)	೬(೬.೪೫)	೩(೩.೨೩)	೪(೪.೩೦)	೨(೨.೧೫)	೨(೧೦೦.೦೦)	(೦.೦೦)	(೦.೦೦)	೯೫ (೧೦೦.೦೦)
೨೦೧೭	೧೪೫(೮೧.೪೬)	೯(೫.೦೬)	೧೨(೬.೭೪)	೯(೫.೦೬)	೩(೧.೬೯)	೩ (೬೦.೦೦)	೧(೨೦.೦೦)	೧(೨೦.೦೦)	೧೮೩(೧೦೦.೦೦)
ಒಟ್ಟು	**೩೯೦(೮೪.೯೭)**	**೨೫(೫.೪೫)**	**೧೯(೪.೧೪)**	**೨೦(೪.೩೬)**	**೫(೧.೦೯)**	**೯ (೭೫.೦೦)**	**೨(೧೬.೬೭)**	**೧ (೮.೩೩)**	**೪೭೧(೧೦೦.೦೦)**

ಮೂಲ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು (ಆವರಣದಲ್ಲಿ ಶೇಕಡಾ ನಮೂದಿಸಿದೆ)

ಕೋಷ್ಟಕ 13 ವರ್ಗ IIಎ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳ ಅಡಿಯಲ್ಲಿ ಅರಿವು ಫಲಾನುಭವಿ ವ್ಯಾಪ್ತಿ

ಕೋರ್ಸ್ ವರ್ಷ	ಸಿಇಟಿ					ಸಿಇಟಿ–ಅಲ್ಲದ			ಒಟ್ಟು
	ಬಿಇ/ಬಿಟೆಕ್	ಸ್ನಾತಕೋತ್ತರ	ಪದವಿ	ಎಂಬಿಬಿಎಸ್	ಇತರೆ	ಸಾಮಾನ್ಯ ಪದವಿ	ಸ್ನಾತಕೋತ್ತರ	ಇತರೆ	
೨೦೧೧–೧೨	೨೦ (೧೦೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	೨೦ (೧೦೦.೦೦)
೨೦೧೨–೧೩	೨೩ (೧೦೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	(೦.೦೦)	೨೩ (೧೦೦.೦೦)
೨೦೧೩–೧೪	೬೬ (೮೩.೫೪)	೧೦ (೧೨.೬೬)	(೦.೦೦)	೩ (೩.೮೦)	(೦.೦೦)	(೦.೦೦)	(೦.೦೦)	(೦.೦೦)	೭೯ (೧೦೦.೦೦)
೨೦೧೪–೧೫	೨೧೯ (೮೦.೮೧)	೩೪ (೧೨.೫೫)	೬ (೨.೨೧)	೧೧ (೪.೦೬)	೧ (೦.೩೭)	(೦.೦೦)	೪ (೧೦೦.೦೦)	(೦.೦೦)	೨೭೫ (೧೦೦.೦೦)
೨೦೧೫–೧೬	೨೪೩ (೮೭.೭೩)	೧೮ (೬.೫೦)	೫ (೧.೮೧)	೧೦ (೩.೬೧)	೧ (೦.೩೬)	(೦.೦೦)	೧ (೧೦೦.೦೦)	(೦.೦೦)	೨೭೮ (೧೦೦.೦೦)
೨೦೧೬–೧೭	೩೪೧ (೮೬.೧೧)	೨೫ (೬.೩೧)	೧೩ (೩.೨೮)	೧೭ (೪.೨೯)	(೦.೦೦)	೫ (೫೫.೫೬)	೩ (೩೩.೩೩)	೧ (೧೧.೧೧)	೪೦೫ (೧೦೦.೦೦)
೨೦೧೭–೧೮	೪೪೮ (೮೬.೩೧)	೩೦ (೫.೨೦)	೨೭ (೪.೬೮)	೨೨ (೩.೮೧)	(೦.೦೦)	೧೧ (೬೮.೭೫)	೪ (೨೫.೦೦)	೧ (೬.೨೫)	೫೯೩ (೧೦೦.೦೦)
ಒಟ್ಟು	೧೪೧೦ (೮೫.೮೨)	೧೧೭ (೭.೧೨)	೫೧ (೩.೧೦)	೬೩ (೩.೮೩)	೨ (೦.೧೨)	೧೬ (೫೩.೩೩)	೧೨ (೪೦.೦೦)	೨ (೬.೬೭)	೧೬೭೩ (೧೦೦.೦೦)

ಮೂಲ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು (ಆವರಣದಲ್ಲಿ ಶೇಕಡಾ ನಮೂದಿಸಿದೆ)

ಕೋಷ್ಟಕ 14 ವರ್ಗ IIIಎ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳ ಅಡಿಯಲ್ಲಿ ಅರಿವು ಫಲಾನುಭವಿ ವ್ಯಾಪ್ತಿ

ಕೋರ್ಸ್ ವರ್ಷ	ಸಿಇಟಿ				ಸಿಇಟಿ –ಅಲ್ಲದ			ಒಟ್ಟು
	ಬಿಇ/ಬಿಟೆಕ್	ಸ್ನಾತಕೋತ್ತರ	ಪದವಿ	ಎಂಬಿಬಿಎಸ್	ಸಾಮಾನ್ಯ ಪದವಿ	ಸ್ನಾತಕೋತ್ತರ	ಇತರೆ	
೨೦೧೩	೧೧ (೭೩.೩೩)	೨ (೧೩.೩೩)	(೦.೦೦)	೨ (೧೩.೩೩)				೧೫ (೧೦೦.೦೦)
೨೦೧೪	೫೯ (೭೬.೬೨)	೧೨ (೧೫.೫೪)	೨ (೨.೬೦)	೪ (೫.೧೯)				೭೭ (೧೦೦.೦೦)
೨೦೧೫	೬೭ (೪೮.೧೬)	೪ (೫.೨೬)	೧ (೧.೩೨)	೪ (೫.೨೬)	೧ (೧೦೦.೦೦)	(೦.೦೦)	(೦.೦೦)	೭೭ (೧೦೦.೦೦)
೨೦೧೬	೯೪ (೮೯.೯೧)	೭ (೬.೪೨)	೧ (೦.೯೨)	೩ (೨.೭೫)	(೦.೦೦)	(೦.೦೦)	೧ (೧೦೦.೦೦)	೧೧೦ (೧೦೦.೦೦)
೨೦೧೭	೧೩೧ (೮೯.೭೩)	೫ (೩.೪೨)	೬ (೪.೧೧)	೪ (೨.೭೪)	೫ (೪೩.೩೩)	೧ (೧೬.೬೭)	(೦.೦೦)	೧೫೨ (೧೦೦.೦೦)
ಒಟ್ಟು	**೩೬೬ (೮೬.೫೨)**	**೩೦ (೭.೦೯)**	**೧೦ (೨.೩೬)**	**೧೭ (೪.೦೨)**	**೬ (೭೫.೦೦)**	**೧ (೧೨.೫೦)**	**೧ (೧೨.೫೦)**	**೪೩೧ (೧೦೦.೦೦)**

ಮೂಲ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು (ಆವರಣದಲ್ಲಿ ಶೇಕಡಾ ನಮೂದಿಸಿದೆ)

ಕೋಷ್ಟಕ 15 ವರ್ಗ IIIಎ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳ ಅಡಿಯಲ್ಲಿ ಅರಿವು ಫಲಾನುಭವಿ ವ್ಯಾಪ್ತಿ

ಕೋರ್ಸ್ ವರ್ಷ	ಸಿಇಟಿ				ಸಿಇಟಿ –ಅಲ್ಲದ		ಒಟ್ಟು
	ಬಿಇ/ಬಿಟೆಕ್	ಸ್ನಾತಕೋತ್ತರ	ಪದವಿ	ಎಂಬಿಬಿಎಸ್	ಸಾಮಾನ್ಯ ಪದವಿ	ಸ್ನಾತಕೋತ್ತರ	
೨೦೧೩	೧೬(೮೪.೨೧)	೩ (೧೫.೭೯)	(೦.೦೦)	(೦.೦೦)	(೦.೦೦)	(೦.೦೦)	**೧೯(೧೦೦.೦೦)**
೨೦೧೪	೮೩(೮೨.೧೮)	೧೭(೧೬.೮೩)	೧ (೦.೯೯)	(೦.೦೦)	(೦.೦೦)	(೦.೦೦)	**೧೦೧(೧೦೦.೦೦)**
೨೦೧೫	೫೪(೮೧.೮೨)	೭ (೧೦.೬೧)	೨ (೩.೦೩)	೩ (೪.೫೫)	(೦.೦೦)	(೦.೦೦)	**೬೬ (೧೦೦.೦೦)**
೨೦೧೬	೭೪(೭೪.೦೦)	೭ (೭.೦೦)	೩ (೩.೦೦)	೧೬(೧೬.೦೦)	೨ (೧೦೦.೦೦)	(೦.೦೦)	**೧೦೨(೧೦೦.೦೦)**
೨೦೧೭	೧೭೭(೮೪.೨೯)	೧೪ (೬.೬೭)	೧೦ (೪.೭೬)	೯ (೪.೨೯)	೮ (೮೦.೦೦)	೨(೨೦.೦೦)	**೨೨೦(೧೦೦.೦೦)**
ಒಟ್ಟು	**೪೦೪(೮೧.೪೫)**	**೪೮ (೯.೬೮)**	**೧೬ (೩.೨೩)**	**೨೮ (೫.೬೫)**	**೧೦ (೮೩.೩೩)**	**೨(೧೬.೬೭)**	**೫೦೮(೧೦೦.೦೦)**

ಮೂಲ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು (ಆವರಣದಲ್ಲಿ ಶೇಕಡಾ ನಮೂದಿಸಿದೆ)

ಆದ್ದರಿಂದ, ಕಾಲಾನಂತರದಲ್ಲಿ ಈ ನಾಲ್ಕು ವರ್ಗಗಳಲ್ಲಿ ಶಿಕ್ಷಣ ಸಾಲದ ವ್ಯಾಪ್ತಿಯಲ್ಲಿ ವಿತರಣೆಯ ಪ್ರಮಾಣವು ರಾಜ್ಯದ ಮಾನದಂಡಗಳಿಗೆ ಹೊಂದಿಕೆಯಾಗುವುದು ಕಂಡುಬರುತ್ತದೆ. ಸಿಇಟಿಯೇತರ ವಿದ್ಯಾರ್ಥಿಗಳ ಸಂಖ್ಯೆ ಚಿಕ್ಕದಾಗಿದೆ ಮತ್ತು ವಿವಿಧ ವರ್ಷಗಳಲ್ಲಿ ವಿವಿಧ ವರ್ಗಗಳಲ್ಲಿ ಇದರ ಹೆಚ್ಚಳವೂ ಅತ್ಯಲ್ಪವಾಗಿದೆ. ಸಿಇಟಿಯೇತರ ವಿದ್ಯಾರ್ಥಿಗಳಿಗೆ ಸಾಲದ ವ್ಯಾಪ್ತಿಯನ್ನು ಹೆಚ್ಚಿಸದಿರಲು ಸರಿಯಾದ ವಿವರಣೆ ನೀಡುವ ಅಗತ್ಯವಿದೆ.

4.1.5 ಫಲಾನುಭವಿ ವ್ಯಾಪ್ತಿ: ಲಿಂಗವಾರು ಮತ್ತು ಪ್ರಾದೇಶಿಕ ವಿಶ್ಲೇಷಣೆ

ಈ ವಿಭಾಗದಲ್ಲಿ, ರಾಜ್ಯದ ನಾಲ್ಕು ವಿಭಾಗಗಳಲ್ಲಿ ೧೨ ಮಾದರಿ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಪುರುಷ ಮತ್ತು ಮಹಿಳಾ ಫಲಾನುಭವಿಗಳ ವ್ಯಾಪ್ತಿಯನ್ನು ಪರೀಕ್ಷಿಸಲಾಗಿದ್ದು, ಅವುಗಳಲ್ಲಿ ಯಾವುದಾದರೂ ವ್ಯತ್ಯಾಸಗಳು ಕಂಡುಬರುತ್ತವೆಯೇ ಎಂಬುದನ್ನು ಪರೀಕ್ಷಿಸಲಾಗಿದೆ. ಈ ವಿಶ್ಲೇಷಣೆಗೆ ಡಿಡಿಯುಬಿಸಿಡಿಸಿಯ ಅಧಿಕೃತ ದಾಖಲೆಗಳ ದತ್ತಾಂಶವನ್ನು ಬಳಸಲಾಗಿದೆ. ೨೦೧೧–೧೨ ರಿಂದ ೨೦೧೮–೧೯ರವರೆಗಿನ ವಿದ್ಯಾರ್ಥಿ ಫಲಾನುಭವಿಗಳ ಇಡೀ ಸಾರ್ವತ್ರಿಕ ಸಂಚಿತ ಅಂಕಿಅಂಶಗಳನ್ನು ಈ ವಿಶ್ಲೇಷಣೆಗೆ ಬಳಸಲಾಗಿದೆ. ಆರಂಭದಲ್ಲಿ, ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳ ವ್ಯಾಪ್ತಿಯನ್ನು ಪ್ರದೇಶಗಳಲ್ಲಿ ಪರೀಕ್ಷಿಸಲಾಗಿದೆ. ಒಟ್ಟಾರೆ, ಕಾರ್ಯಕ್ರಮ ಈ ಅವಧಿಯಲ್ಲಿ ಶೇಕಡಾ ೩೮.೩ ರಷ್ಟು ಮಹಿಳಾ ವಿದ್ಯಾರ್ಥಿಗಳನ್ನು ಮತ್ತು ೬೧.೭ ಶೇಕಡಾ ಪುರುಷ ವಿದ್ಯಾರ್ಥಿಗಳನ್ನು ಒಳಗೊಂಡಿದೆ ಎಂದು ಕೋಷ್ಟಕ ೪.೧೪ ಮತ್ತು ಚಿತ್ರ –೪.೩ ರ ಅವಲೋಕನವು ತಿಳಿಸುತ್ತದೆ. ದತ್ತಾಂಶದ ಪ್ರಕಾರ ಪ್ರತಿ ೬ ಹುಡುಗರಿಗೆ, ೪ ಹುಡುಗಿಯರನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಿಸಲಾಗುತ್ತಿದೆ. ಈ ಕಾರ್ಯಕ್ರಮವು ಯಾವುದೇ ಲಿಂಗಾಧಾರಿತ ಪ್ರಾಮುಖ್ಯತೆಯನ್ನು ಹೊಂದಿಲ್ಲ ಎಂಬುದನ್ನು ಗಮನಿಸಬೇಕು. ಇದಲ್ಲದೆ, ಕರ್ನಾಟಕವು ಉನ್ನತ ಶಿಕ್ಷಣದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಿದೆ, ಒಟ್ಟಾರೆ ಉನ್ನತ ಶಿಕ್ಷಣ

ದಾಖಲಾತಿಯಲ್ಲಿ ೫೦.೦೪ ರಷ್ಟು ಬಾಲಕಿಯರಿದ್ದಾರೆ (ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ, ೨೦೧೮–೧೯). ವಿವಿಧ ಪ್ರದೇಶಗಳಲ್ಲಿ, ಹುಡುಗರಿಗೆ ಹೋಲಿಸಿದರೆ ಯೋಜನೆಯ ವ್ಯಾಪ್ತಿ ಹುಡುಗಿಯರಿಗೆ ಕಡಿಮೆ ಇರುವ ಪ್ರವೃತ್ತಿ ಗಮನಕ್ಕೆ ಬಂದಿದೆ. ಆದಾಗ್ಯೂ, ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿ ಲಿಂಗ ಅಂತರವು ಕಳವಳಕಾರಿಯಾಗಿದೆ.ಕಲಬುರಗಿ, ಬೀದರ್ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕಾರ್ಯಕ್ರಮದ ಅಡಿಯಲ್ಲಿ ಹುಡುಗಿಯರನ್ನು ಒಳಗೊಳ್ಳುವ ಕುರಿತು ಗಂಭೀರ ಪರಿಶೀಲನೆ ನಡೆಸಬೇಕಿದೆ.

ಕೋಷ್ಟಕ 16 ಮಾದರಿ ಜಿಲ್ಲೆಗಳಲ್ಲಿ ಲಿಂಗವಾರು ವ್ಯಾಪ್ತಿ (ಸಾರ್ವತ್ರಿಕವಾಗಿ–ಎಲ್ಲಾ ಫಲಾನುಭವಿಗಳು)

ಜಿಲ್ಲೆಗಳು	ಮಹಿಳೆ	ಪುರುಷ	ಒಟ್ಟು
ಬೆಂಗಳೂರು ನಗರ	೩೭೦ (೪೭)	೪೧೫ (೫೩)	೭೮೫ (೧೦೦)
ಕೋಲಾರ	೮೦ (೩೭)	೧೩೬ (೬೩)	೨೧೬ (೧೦೦)
ಶಿವಮೊಗ್ಗ	೫೬ (೪೪)	೭೧ (೫೬)	೧೨೭ (೧೦೦)
ಬೆಂಗಳೂರು ವಿಭಾಗ	**೫೦೬ (೪೫)**	**೬೨೨ (೫೫)**	**೧೧೨೮ (೧೦೦)**
ಬಾಗಲಕೋಟೆ	೯೦ (೩೨.೧)	೧೯೦ (೬೭.೯)	೨೮೦ (೧೦೦)
ಬೆಳಗಾವಿ	೧೪೮ (೩೧.೬)	೩೨೦ (೬೮.೪)	೪೬೮ (೧೦೦)
ಉತ್ತರ ಕನ್ನಡ	೩೧ (೪೧.೯)	೪೩ (೫೮.೧)	೭೪ (೧೦೦)
ಬೆಳಗಾವಿ ವಿಭಾಗ	**೨೬೯ (೩೨.೭)**	**೫೫೩ (೬೭.೩)**	**೮೨೨ (೧೦೦)**
ಬಳ್ಳಾರಿ	೭೧ (೩೬)	೧೨೪ (೬೪)	೧೯೫ (೧೦೦)
ಬೀದರ್	೩೮ (೩೨)	೮೦ (೬೮)	೧೧೮ (೧೦೦)
ಕಲಬುರಗಿ	೫೫ (೨೬)	೧೫೩ (೭೪)	೨೦೮ (೧೦೦)
ಕಲಬುರಗಿ ವಿಭಾಗ	**೧೬೪ (೩೧)**	**೩೫೭ (೬೯)**	**೫೨೧ (೧೦೦)**
ಹಾಸನ	೫೪ (೪೧)	೭೮ (೫೯)	೧೩೨ (೧೦೦)
ಕೊಡಗು	೧೨೫ (೩೮)	೨೦೩ (೬೨)	೩೨೮ (೧೦೦)
ಮೈಸೂರು	೧೬ (೪೮)	೧೭ (೫೨)	೩೩ (೧೦೦)
ಮೈಸೂರು ವಿಭಾಗ	**೧೯೫ (೪೦)**	**೨೯೮ (೬೦)**	**೪೯೩ (೧೦೦)**
ಒಟ್ಟು	**೧೧೩೪ (೩೮.೩)**	**೧೮೩೦ (೬೧.೭)**	**೨೯೬೪ (೧೦೦)**

ಮೂಲ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು (ಆವರಣದಲ್ಲಿ ಶೇಕಡಾ ನಮೂದಿಸಿದೆ)

ಚಿತ್ರ 5 ಮಾದರಿ ಜಿಲ್ಲೆಗಳಲ್ಲಿ ಲಿಂಗವಾರು ವ್ಯಾಪ್ತಿ



ಮೂಲ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು

4.1.6 ಫಲಾನುಭವಿ ವ್ಯಾಪ್ತಿ: ವರ್ಗ ಮತ್ತು ಪ್ರಾದೇಶಿಕ ವಿಶ್ಲೇಷಣೆ

ಹಿಂದುಳಿದ ವರ್ಗಗಳ ನಾಲ್ಕು ವಿಭಿನ್ನ ವರ್ಗಗಳಲ್ಲಿ ಫಲಾನುಭವಿಗಳ ವ್ಯಾಪ್ತಿಯನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಸಂಖ್ಯಾತ್ಮಕ ದತ್ತಾಂಶವನ್ನು ಆಧಾರವಾಗಿಟ್ಟುಕೊಂಡಾಗ (ಕೋಷ್ಟಕ –೪.೧೫ ಮತ್ತು ಗ್ರಾಫ್ –೪.೪) ಯೋಜನೆಯ ನಿಯಮದಲ್ಲಿ ಹೇಳಿರುವಂತೆ I, IIಎ IIIಎ ಮತ್ತು IIIಬಿ ವಿಭಾಗಗಳಿಗೆ ನೀಡಿರುವ ವಿಭಾಗವಾರು ಪ್ರಾಧ್ಯಾನತೆ ಮೂಲ ನಿಯಮಗಳ ಅನುಪಾತಕ್ಕೆ ಅನುಗುಣವಾಗಿ ೧೪%, ೫೪%, ೧೪% ಮತ್ತು ೧೮% ಇರುವುದನ್ನು ಕಾಣಬಹುದಾಗಿದೆ. ಆದಾಗ್ಯೂ, ೨೦೧೬–೧೭ ರಿಂದ, ವರ್ಗ I ಮತ್ತು IIಎ ಗೆ ೭೦% ವ್ಯಾಪ್ತಿ ಮತ್ತು IIIಎ ಮತ್ತು IIIಬಿ ವರ್ಗಕ್ಕೆ ೩೦% ವ್ಯಾಪ್ತಿಯೊಂದಿಗೆ ನಿಯಮವನ್ನು ಪರಿಷ್ಕರಿಸಲಾಗಿದೆ. ಆದ್ದರಿಂದ ಈ ನಿಯಮವನ್ನು ಪರಿಗಣಿಸಿ, ಒಟ್ಟಾರೆಯಾಗಿ ರಾಜ್ಯ ಮಟ್ಟದಲ್ಲಿ, ಮತ್ತು ವಿಭಾಗೀಯ ಮಟ್ಟದಲ್ಲಿ, ವ್ಯಾಪ್ತಿ ವಿತರಣೆಯು ಸಾಕಷ್ಟು ಹೊಂದಾಣಿಕೆಯಲ್ಲಿದೆ. ಆದಾಗ್ಯೂ, ಕೋಲಾರ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆಗಳು, I ಮತ್ತು IIಎ ವರ್ಗಗಳಿಗೆ ಹೆಚ್ಚಿನ ವ್ಯಾಪ್ತಿಯನ್ನು ಬಹಿರಂಗಪಡಿಸುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ, ಬೆಂಗಳೂರು, ಕೋಲಾರ ಮತ್ತು ಉತ್ತರ ಕನ್ನಡದಲ್ಲಿ IIಎ, IIIಎ ಮತ್ತು IIIಬಿ ವರ್ಗಕ್ಕೆ ನೀಡಲಾಗಿರುವ ವ್ಯಾಪ್ತಿ ಕಡಿಮೆ ಇದೆ. ಆದ್ದರಿಂದ, ಪೂರ್ವನಿಯೋಜಿತವಾಗಿ, ವರ್ಗ IIಎ ಕಾರ್ಯಕ್ರಮದ ಅತಿದೊಡ್ಡ ಫಲಾನುಭವಿ ವರ್ಗ ಎಂಬುದು ಕಂಡುಬರುತ್ತದೆ. ಈ ವರ್ಗವು ಪ್ರಧಾನವಾಗಿ ಕುರುಬ, ಗಾಣಿಗಾ ಮತ್ತು ಬಣಜಿಗ ಜಾತಿಗಳನ್ನು ಒಳಗೊಳ್ಳುತ್ತದೆ ಎಂದು ಗಮನಿಸಬಹುದು. ಇದು ಉನ್ನತ ಶಿಕ್ಷಣ ಕಾರ್ಯಕ್ರಮಗಳ ಮೊದಲ ತಲೆಮಾರಿನ ಫಲಾನುಭವಿಗಳನ್ನು ಪ್ರತಿನಿಧಿಸುವುದಿಲ್ಲ. ಈ ದಿಕ್ಕಿನಲ್ಲಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದಾಗ, ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ IIIಎ ಮತ್ತು IIIಬಿ ವರ್ಗಗಳಿಂದ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ IIIಬಿ ವಿದ್ಯಾರ್ಥಿಗಳಿಗೆ ಸಾಲದ ಬೇಡಿಕೆ ಹೆಚ್ಚಾಗಿದೆ ಎಂದಿದ್ದಾರೆ. ಈ ಪ್ರದೇಶಗಳಲ್ಲಿನ ಜನಸಂಖ್ಯಾ ಸಂಯೋಜನೆ ಮತ್ತು ವಿಸ್ತಾರ ಈ ವಾದದೊಂದಿಗೆ ಹೊಂದಾಣಿಕೆಯಾಗಿದೆ ಎಂಬುದನ್ನು ಗಮನಿಸಬಹುದು. ಆದಾಗ್ಯೂ, ಫಲಾನುಭವಿಗಳ ಅಂತಿಮ ಆಯ್ಕೆಯನ್ನು ಕೇವಲ ವರ್ಗಾವಾರು ಆಧಾರದ ಮೇಲೆ ನಿರ್ಣಯಿಸುವುದಕ್ಕಿಂತ ದುರ್ಬಲತೆ ಮತ್ತು ಅಪಾಯದ ಅಂಶಗಳ ಆಧಾರದ ಮೇಲೆ ನಿರ್ಣಯಿಸುವುದನ್ನು ಶಿಫಾರಸ್ಸು ಮಾಡಲಾಗಿದೆ.

ಕೋಷ್ಟಕ 17 ಹಿಂದುಳಿದ ವರ್ಗ–ಮಾದರಿ ಜಿಲ್ಲೆಗಳಲ್ಲಿ ಹೊಂದಿರುವ ವ್ಯಾಪ್ತಿ (ಎಲ್ಲಾ ಫಲಾನುಭವಿಗಳು)

ಜಿಲ್ಲೆಗಳು	ವರ್ಗ –I	ವರ್ಗ IIಎ	ವರ್ಗ –IIIಎ	ವರ್ಗ –IIIಬಿ	ಒಟ್ಟು
ಬೆಂಗಳೂರು ನಗರ	೯೨ (೧೨)	೪೧೮ (೫೩)	೨೧೭ (೨೮)	೫೮ (೭)	೭೮೫ (೧೦೦)
ಕೋಲಾರ	೫೪ (೨೫)	೧೧೨ (೫೨)	೧೭ (೮)	೩೩ (೧೫)	೨೧೬ (೧೦೦)
ಶಿವಮೊಗ್ಗ	೧೬ (೧೩)	೭೦ (೫೫)	೩೭ (೨೯)	೪ (೩)	೧೨೭ (೧೦೦)
ಬೆಂಗಳೂರು ವಿಭಾಗ	**೧೬೨ (೧೪)**	**೬೦೦ (೫೩)**	**೨೭೧ (೨೪)**	**೯೫ (೮)**	**೧೧೨೮ ೧೦೦)**
ಬಾಗಲಕೋಟೆ	೩೨ (೧೧.೪)	೧೭೯ (೬೩.೯)	೧೧ (೩.೯)	೫೮ (೨೦.೭)	೨೮೦ (೧೦೦)
ಬೆಳಗಾವಿ	೬೩ (೧೩.೫)	೨೫೯ (೫೫.೩)	೧೧ (೨.೪)	೧೩೫(೨೮.೮)	೪೬೮ (೧೦೦)
ಉತ್ತರ ಕನ್ನಡ	೨೭ (೩೬.೯)	೪೬ (೬೨.೨)	೦ (೦)	೧ (೧.೪)	೭೪ (೧೦೦)
ಬೆಳಗಾವಿ ವಿಭಾಗ	**೧೨೨ (೧೫)**	**೪೮೪ (೫೯)**	**೨೨ (೩)**	**೧೯೪ (೨೪)**	**೮೨೨ (೧೦೦)**
ಬಳ್ಳಾರಿ	೨೬ (೧೩)	೧೧೪ (೫೮)	೧೫ (೮)	೪೦ (೨೧)	೧೯೫ (೧೦೦)
ಬೀದರ್	೨೮ (೨೪)	೫೫ (೪೭)	೭ (೬)	೨೮ (೨೪)	೧೧೮ (೧೦೦)
ಕಲಬುರಗಿ	೩೫ (೧೭)	೧೦೧ (೪೯)	೧೫ (೭)	೫೭ (೨೭)	೨೦೮ (೧೦೦)
ಕಲಬುರಗಿ ವಿಭಾಗ	**೪೯ (೧೭)**	**೨೭೦ (೫೨)**	**೩೭ (೭)**	**೧೨೫ (೨೪)**	**೫೨೧ (೧೦೦)**
ಹಾಸನ	೨೧ (೧೬)	೬೬ (೫೦)	೩೫ (೨೬)	೧೦ (೮)	೧೩೨ (೧೦೦)
ಕೊಡಗು	೫೪ (೧೬)	೧೮೧ (೫೫)	೫೨ (೧೬)	೪೧ (೧೩)	೩೨೮ (೧೦೦)
ಮೈಸೂರು	೩ (೯)	೧೮ (೫೫)	೮ (೨೪)	೪ (೧೨)	೩೩ (೧೦೦)
ಮೈಸೂರು ವಿಭಾಗ	**೭೮ (೧೬)**	**೨೬೫ (೫೪)**	**೯೫ (೧೯)**	**೫೫ (೧೧)**	**೪೯೩ (೧೦೦)**
ಒಟ್ಟು	**೪೫೧(೧೫.೨)**	**೧೬೧೯ (೫೪.೬)**	**೪೨೫(೧೪.೩)**	**೪೬೯(೧೫.೮)**	**೨೯೬೪(೧೦೦)**

ಮೂಲ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು (ಆವರಣದಲ್ಲಿ ಶೇಕಡಾ ನಮೂದಿಸಿದೆ)

ಚಿತ್ರ 6 ಹಿಂದುಳಿದ ವರ್ಗ–ಮಾದರಿ ಜಿಲ್ಲೆಗಳಲ್ಲಿ ಹೊಂದಿರುವ ವ್ಯಾಪ್ತಿ (ಎಲ್ಲಾ ಫಲಾನುಭವಿಗಳು)



ಮೂಲ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು

4.1.7 ಫಲಾನುಭವಿ ವ್ಯಾಪ್ತಿ: ಉನ್ನತ ಶಿಕ್ಷಣ ಕೋರ್ಸ್‌ಗಳು ಮತ್ತು ಪ್ರಾದೇಶಿಕ ವಿಶ್ಲೇಷಣೆ

ಭವ್ಯಾ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ತಾರ್ಲಕ್ಕಿ ಗ್ರಾಮದ ಅರಿವು ಶಿಕ್ಷಣ ಸಾಲದ ಫಲಾನುಭವಿ. ಅವರು ಎಂಬಿಎ ಯಲ್ಲಿ ಒಟ್ಟು ೬೪ ಪ್ರತಿಶತದಷ್ಟು ಅಂಕಗಳನ್ನು ಗಳಿಸಿದ್ದಾರೆ. ಅವರು ಬೆಂಗಳೂರು ನಗರದ ಖಾಸಗಿ ವ್ಯವಹಾರ ನಿರ್ವಹಣಾ ಶಾಲೆಯಲ್ಲಿ ೨೦೧೭ ರಲ್ಲಿ (೨೦೧೭–೧೮ ಬ್ಯಾಚ್) ಎಂಬಿಎ ಸೇರಿದರು. ಅವರು ಸರ್ಕಾರದ ಅರ್ಹತಾ ಕೋಟಾ ಅಡಿಯಲ್ಲಿ ಸ್ಥಾನ ಪಡೆದರು. ಭವ್ಯಾ ಹಿಂದುಳಿದ ಜನಾಂಗದ ಕುಟುಂಬದಲ್ಲಿ ವೃತ್ತಿಪರ ಕೋರ್ಸ್ಗೆ ಸೇರಿದ ಮೊದಲ ತಲೆಮಾರಿನ ವಿದ್ಯಾರ್ಥಿನಿ. ಆಕೆಗೆ ಈಗ ೨೩ ವರ್ಷ. ಅವರ ತಂದೆ, ಶ್ರೀ ಸಂಪತ್ (೫೮ ವರ್ಷ), ಮೂರು ದಶಕಗಳಿಂದ ೨ ಎಕರೆ ಸ್ವಂತ ಭೂಮಿಯಲ್ಲಿ ಕೃಷಿ ಮಾಡುತ್ತಿರುವ ಅತ್ಯಂತ ಬಡ ಕೃಷಿಕ. ಅವರು ಎಸ್ಎಸ್ಎಲ್ಸಿ ವರೆಗೆ ಅಧ್ಯಯನ ಮಾಡಿದ್ದಾರೆ. ಭವ್ಯಾ ಅವರ ತಾಯಿ, ೫೪ ವರ್ಷದ ಶ್ರೀಮತಿ ಉಮಾ ಕೂಡ ೧೦ನೇ ತರಗತಿವರಗೆ ಓದಿದ್ದು ಇವರು ಗೃಹಿಣಿಯಾಗಿದ್ದಾರೆ. ವಾರ್ಷಿಕ ಸುಮಾರು ರೂ ೫೦,೦೦೦ ರೂಪಾಯಿಗಳ ಅಲ್ಪ ಕೃಷಿ ಆದಾಯ ಇವರ ಏಕೈಕ ಆದಾಯದ ಮೂಲವಾಗಿದೆ ಇದರಲ್ಲಿಯೇ ಕುಟುಂಬದ ಅವಶ್ಯಕತೆಗಳನ್ನು ನಿಭಾಯಿಸಬೇಕಾಗಿದೆ. ಭವ್ಯಾಗೆ ಒಬ್ಬ ಕಿರಿಯ ಸಹೋದರ ಮತ್ತು ತಂಗಿ ಇದ್ದಾರೆ. ಬಡ ಸಂಪತ್ಗೆ ಕೃಷಿಯಿಂದ ದೊರಕುವ ಅಲ್ಪ ಆದಾಯದಲ್ಲಿ ಮೂರು ಮಕ್ಕಳಿಗೆ ಆಹಾರ ಮತ್ತು ಆರೈಕೆ ಒದಗಿಸುವುದು ತುಂಬಾ ಕಷ್ಟಕರವಾಗಿತ್ತು. ದೃಢ ನಿಶ್ಚಯದಿಂದ ಅವರು ಭವ್ಯ ಅವರನ್ನು ಹೆಚ್ಚು ವಿದ್ಯಾವಂತ ವ್ಯಕ್ತಿಯನ್ನಾಗಿ ಮಾಡಲು ಬಯಸಿದ್ದರು. ಪ್ರಸ್ತುತ ಅವರ ಕುಟುಂಬವು ೩೦ X ೩೦ ಅಡಿಗಳ ಮನೆಯಲ್ಲಿ ಉಳಿದುಕೊಂಡಿದ್ದು, ತಂದೆಗೆ ಸೇರಿದ ಮನೆಯು ಸಂಪತ್ ರವರ ಹೆಸರಿನಲ್ಲಿದೆ.

ಭವ್ಯಾ ತನ್ನ ಮನೆಯ ಸಮೀಪದಲ್ಲಿರುವ ಖಾಸಗಿ ಶಾಲೆಯಲ್ಲಿ ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಿಕ್ಷಣವನ್ನು ಅಧ್ಯಯನ ಮಾಡಿದ್ದಾಳೆ. ಅವಳು ಬಂಗಾರ ಪೇಟೆ ಪಟ್ಟಣದಲ್ಲಿ ಪ್ರೌಢ ಶಾಲಾ ಶಿಕ್ಷಣವನ್ನು ಮತ್ತು ಮಾಲೂರಿನಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಪಡೆದಿದ್ದಾಳೆ. ಹಾಸ್ಟೆಲ್ನ ಸೌಲಭ್ಯವನ್ನು ಪಡೆದುಕೊಂಡು ಕೋಲಾರದ ಖಾಸಗಿ ಕಾಲೇಜಿನಲ್ಲಿ ಪದವಿ ಶಿಕ್ಷಣವನ್ನು ಪಡೆದಿದ್ದಾಳೆ. ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವೆಂದರೆ, ಭವ್ಯಾ ಅವರ ತಾಯಿ, ತನ್ನ ಮಕ್ಕಳ ಶಿಕ್ಷಣದ ಬಗ್ಗೆ ಸಂಪೂರ್ಣ ಶ್ರದ್ಧೆ ಮತ್ತು ಬದ್ಧತೆ ಹೊಂದಿದ್ದಳು, ತನ್ನ ಹೆಣ್ಣುಮಕ್ಕಳನ್ನು ಬೆಂಬಲಿಸಿದಳು. ಭವ್ಯಾ ತಮ್ಮ ಪದವಿ ಯಶಸ್ವಿಯಾಗಿ ಪೂರ್ಣಗೊಳಿಸಿದರು ಮತ್ತು ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಾಲೇಜಿನಲ್ಲಿ ಎಂಬಿಎ ಅಭ್ಯಸಿಸಲು ವ್ಯವಹಾರ ನಿರ್ವಹಣಾ ಕಾಲೇಜಿನಲ್ಲಿ ಮೆರಿಟ್ ಸೀಟ್ ಪಡೆದರು.ಆದರೆ ಭವ್ಯಾ ಅವರ ತಂದೆಗೆ ಅವರ ಕೃಷಿ ಆದಾಯದ ಆಧಾರದ ಮೇಲೆ ಇಡೀ ಮನೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಖರ್ಚುಗಳನ್ನು ಪೂರೈಸುವುದು ತುಂಬಾ ಕಷ್ಟಕರವಾಗಿತ್ತು.

ಬೆಂಗಳೂರಿನ ಕಾಲೇಜಿಗೆ ಸೇರಿದಾಗ ಸ್ನಾತಕೋತ್ತರ ಕಾಲೇಜು ಶುಲ್ಕಗಳು, ಪುಸ್ತಕಗಳು, ಆಹಾರ, ಸಾರಿಗೆ ಇತ್ಯಾದಿಗಳಾದ ಶೈಕ್ಷಣಿಕ ಖರ್ಚುಗಳನ್ನು ನೋಡಿಕೊಳ್ಳಲು ತೊಂದರೆಗಳು ಹೆಚ್ಚಾದವು. ಅವಳು ಕೆಲವು ಆರ್ಥಿಕ ಸಹಾಯವನ್ನು ತೀವ್ರವಾಗಿ ಹುಡುಕುತ್ತಿದ್ದಳು. ಒಂದು ದಿನ ಆಕೆಯ ಸಂಬಂಧಿ ಸ್ಥಳೀಯ ಪತ್ರಿಕೆಯೊಂದರಲ್ಲಿ ಅರಿವು ಶಿಕ್ಷಣ ಸಾಲದ ಬಗ್ಗೆ ಜಾಹೀರಾತನ್ನು ನೋಡಿದರು. ಕೂಡಲೇ ಅವರು ಭವ್ಯಾ ಅವರಿಗೆ ಈ ಬಗ್ಗೆ ಮಾಹಿತಿ ನೀಡಿದರು ಮತ್ತು ಭವ್ಯಾ ಸಮಯ ಕಳೆಯದೆ ಕೋಲಾರ ಜಿಲ್ಲಾ ಡಿಡಿಯುಬಿಡಿಸಿ ಕಚೇರಿಗೆ ಭೇಟಿ ನೀಡಿ, ಅರಿವು ಸಾಲ ಮತ್ತು ಕಾರ್ಯವಿಧಾನಗಳ ಬಗ್ಗೆ ವಿಚಾರಿಸಿ, ಅರ್ಜಿಯನ್ನು ಸಂಗ್ರಹಿಸಿ ಸೆಪ್ಟೆಂಬರ್, ೨೦೧೭ ರಲ್ಲಿ ಅರ್ಜಿ ಸಲ್ಲಿಸಿದ್ದರು. ಅವರು ತನ್ನ ತಂದೆಯ ದೂರವಾಣಿ ಸಂಖ್ಯೆಯನ್ನು ನೀಡಿ ಆಕೆಯ ಇಮೇಲ್ ಐಡಿಯನ್ನು ಕೊಟ್ಟಿದ್ದರು.

ಅರಿವು ಸಾಲಕ್ಕೆ ಅರ್ಜಿ ಸಲ್ಲಿಸಿದ ನಂತರ ಆಕೆ ತನ್ನ ಅರ್ಹತೆ ಮತ್ತು ತನ್ನ ಕುಟುಂಬ ಆರ್ಥಿಕವಾಗಿ ಹಿಂದುಳಿದಿರುವ ಕಾರಣ ಸಾಲ ಪಡೆಯುವ ವಿಶ್ವಾಸ ಹೊಂದಿದ್ದರು. ೧೫ ದಿನಗಳ ನಂತರ, ಸೆಪ್ಟೆಂಬರ್, ೨೦೧೭ ರಲ್ಲಿ ಆಕೆಯ ತಂದೆಯ ಫೋನ್‌ಗೆ ಡಿ.ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಚೇರಿಯಿಂದ ಕರೆ ಮಾಡಿ ಅಗತ್ಯವಿರುವ ಎಲ್ಲ ದಾಖಲೆಗಳೊಂದಿಗೆ ದಾಖಲೆ ಪರಿಶೀಲನೆಗೆ ಹಾಜರಾಗಬೇಕು ಎಂದು ಹೇಳಿದರು. ಭವ್ಯ ಸಾಲಕ್ಕೆ ಯಶಸ್ವಿಯಾಗಿ ಆಯ್ಕೆಯಾದರು. ಅಂತಿಮವಾಗಿ, ನವೆಂಬರ್, ೨೦೧೭ ರಲ್ಲಿ ಆಕೆಯು ತನ್ನ ಮೊದಲ ವರ್ಷದ ಸಾಲದ ಮೊತ್ತ ರೂ. ೮೯,೦೦೦ನ್ನು ಚೆಕ್ ಮೂಲಕ ಪಡೆದರು. ಭವ್ಯಾ ಹೇಳುತ್ತಾರೆ "ಇದು ನನ್ನ ಮತ್ತು ನನ್ನ ತಂದೆಗೆ ಸಾಕಷ್ಟು ಸಹಾಯ ಮಾಡಿತು ಮತ್ತು ಆ ದಿನ ನಾವಿಬ್ಬರು ತುಂಬಾ ಸಂತೋಷಪಟ್ಟೆವು". ಇದು ಆಕೆಯ ತಂದೆಗೆ ಪ್ರೋತ್ಸಾಹ ನೀಡಿತು ಮತ್ತು ಅವರು ಎಂಬಿಎ ಕೋರ್ಸನ್ನು ಪೂರ್ಣಗೊಳಿಸುತ್ತಾಳೆ ಎಂಬ ವಿಶ್ವಾಸವನ್ನು ಅವರು ಹೊಂದಿದರು. ಶಿಕ್ಷಣ ಸಾಲಕ್ಕೆ ಬ್ಯಾಂಕಿನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿದ್ದಾಗ ಆಕೆಗೆ ಈ ಸಾಲದ ಮೊತ್ತ ಸಿಕ್ಕಿತು. ಅಗತ್ಯವಿರುವ ಸಮಯದಲ್ಲಿ ಆಕೆಯ ಕುಟುಂಬಕ್ಕೆ ಎಂಭತ್ತೊಂಬತ್ತು ಸಾವಿರ ರೂಪಾಯಿಗಳ ಲಾಭ ಬಹಳ ದೊಡ್ಡದಾಗಿದೆ! ಅವರು ಇದನ್ನು ಪಡೆಯದಿದ್ದರೆ, ಅವರು ಅನೇಕ ತೊಂದರೆಗಳು ಮತ್ತು ಹೆಚ್ಚಿನ ಬಡ್ಡಿದರವನ್ನು ಹೊಂದಿರುವ ಬ್ಯಾಂಕಿನಿಂದ ಶಿಕ್ಷಣ ಸಾಲವನ್ನು ತೆಗೆದುಕೊಳ್ಳುತ್ತಿದ್ದರು. ಎರಡನೇ ವರ್ಷದಲ್ಲಿ ಆಕೆಗೆ ೬೫,೦೦೦ ರೂಪಾಯಿ ಸಿಕ್ಕಿರುತ್ತದೆ.

ಈಗ ಅವರು ಕೋರ್ಸ್ ಅನ್ನು ಪೂರ್ಣಗೊಳಿಸಿದ್ದಾರೆ ಮತ್ತು ಬಿಪಿಓನಲ್ಲಿ ಒಂದು ತಿಂಗಳ ಕೋರ್ಸ್ ಮುಗಿದ ನಂತರ ವರ್ಷಕ್ಕೆ ೩.೬ ಲಕ್ಷ ಪ್ಯಾಕೇಜ್‌ನೊಂದಿಗೆ ಕೆಲಸ ಪಡೆದಿದ್ದಾರೆ, ಬಹುತೇಕ ಅವರು ತಿಂಗಳಿಗೆ ರೂ ೨೭,೦೦೦ ರೂಪಾಯಿಗಳನ್ನು ಪಡೆಯುತ್ತಿದ್ದಾರೆ. ಇದು ಕೇವಲ ಅರಿವು ಶಿಕ್ಷಣ ಸಾಲದ ಆರ್ಥಿಕ ನೆರವು ಮಾತ್ರವಲ್ಲ, ಭವ್ಯಾಳಲ್ಲಿ ಆತ್ಮ ವಿಶ್ವಾಸ ಮತ್ತು ಸಕಾರಾತ್ಮಕ ಮನೋಭಾವವನ್ನೂ ಸೃಷ್ಟಿಸಿದೆ.

ಭವ್ಯಾ ಹೇಳುತ್ತಾರೆ: 'ಎಂಬಿಎ ಕೋರ್ಸ್‌ಗೆ ಸಂಬಂಧಿಸಿದ ಒಟ್ಟು ವಾರ್ಷಿಕ ವೆಚ್ಚ ರೂ. ೨,೫೦,೦೦೦ವನ್ನು ಅರಿವು ಸಾಲದ ಮೂಲಕ ದೊರಕಿದ ರೂ .೧,೫೪,೦೦೦, ಮತ್ತು ಬಾಕಿ ಹಣ ರೂ. ೯೬,೦೦೦ ವನ್ನು ಆಕೆಯ ತಂದೆಯ ಗಳಿಕೆಯ ಮೂಲಕ ಮತ್ತು ಆಕೆಯ ಅರೆಕಾಲಿಕ ಕೆಲಸದ ಮೂಲಕ ನಿರ್ವಹಿಸಲಾಯಿತು'.

ಆಕೆಯು ತನ್ನ ತಂದೆಯ ಆದಾಯದಿಂದ ಮತ್ತು ಸಂಬಂಧಿಕರಿಂದ ಸಾಲ ತೆಗೆದುಕೊಳ್ಳುವ ಮೂಲಕ ಮೊದಲ ವರ್ಷದ ಕಾಲೇಜು ಶುಲ್ಕವನ್ನು ಪಾವತಿಸಿದರು. ಅರಿವು ಸಾಲದ ಮೊತ್ತವನ್ನು ಪಡೆದ ನಂತರ ಸಂಬಂಧಿಕರಿಂದ ಪಡೆದ ಸಾಲವನ್ನು ಅವಳು ಮರುಪಾವತಿಸಿದರು. ಶೈಕ್ಷಣಿಕ ವರ್ಷವು ಪ್ರತಿ ವರ್ಷ ಜೂನ್ / ಜುಲೈನಿಂದ ಪ್ರಾರಂಭವಾಗುವುದರಿಂದ ಈ ಹೊಂದಾಣಿಕೆ ಅಗತ್ಯವಾಗಿತ್ತು, ಮತ್ತು ಅರಿವು ಚೆಕ್ಕನ್ನು ವರ್ಷದ ನವೆಂಬರ್ / ಡಿಸೆಂಬರ್‌ನಲ್ಲಿ ಸ್ವೀಕರಿಸಲಾಯಿತು. ಅಂದರೆ ಸಾಮಾನ್ಯವಾಗಿ ಕಾಲೇಜ್ ಪ್ರಾರಂಭವಾದ ಕೆಲವು ತಿಂಗಳುಗಳ ನಂತರ ಪಡೆಯಲಾಗಿದೆ.

ಪ್ರಸ್ತುತ ಭವ್ಯ :

ಅವರು ಬೆಂಗಳೂರಿನಲ್ಲಿ ಉತ್ತಮ ಖಾಸಗಿ ಕಂಪನಿಯಲ್ಲಿ ಬಿಪಿಓ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ಮಾಸಿಕ ಸಂಬಳವಾಗಿ ರೂ ೨೭,೦೦೦ ರೂಪಾಯಿಗಳನ್ನು ಗಳಿಸುತ್ತಿದ್ದಾರೆ. ಅವಳ ಆಹಾರ, ವಸತಿ, ಪ್ರಯಾಣ ಮತ್ತು ವೈಯಕ್ತಿಕ ವೆಚ್ಚಗಳಿಗೆ. ತಿಂಗಳಿಗೆ ೧೨,೦೦೦ ರೂಪಾಯಿಯಾಗುತ್ತಿದ್ದು, ಅವರು ತನ್ನ ಹೆತ್ತವರಿಗೆ ರೂ.೧೦,೦೦೦ ಕಳುಹಿಸುತ್ತಿದ್ದಾರೆ. ಮತ್ತು ಆಕೆಯ ಕಿರಿಯ ಸಹೋದರ ಮತ್ತು ಸಹೋದರಿಯರ ಶಿಕ್ಷಣಕ್ಕಾಗಿ ಸಹಕರಿಸುತ್ತಿದ್ದಾರೆ. ಅವಳು ತನ್ನ ವೃತ್ತಿಯಲ್ಲಿ ಉತ್ತಮ ಸ್ಥಾನವನ್ನು

ಪಡೆಯುವ ಬಯಕೆಯನ್ನು ಹೊಂದಿದ್ದು, ಅದರೊಂದಿಗೆ ತನ್ನ ಕುಟುಂಬದ ಪೋಷಕ ಸದಸ್ಯಳಾಗಲು ಬಯಸುತ್ತಾರೆ. ತನ್ನ ಸಹೋದರಿಯ ಉನ್ನತ ವಿದ್ಯಾಭ್ಯಾಸಕ್ಕೆ ಸಹಕರಿಸಲು ಅವರು ತುಂಬಾ ಆಸಕ್ತಳಾಗಿದ್ದಾರೆ.

ಪ್ರಕರಣದಿಂದ ಪಾಠ:

ಹೊರ ಹರಿವು:

೧. ಒಬ್ಬ ವಿದ್ಯಾವಂತ ಮತ್ತು ಒಳ್ಳೆಯ ಯುವತಿಗೆ ಪ್ರೋತ್ಸಾಹ ನೀಡಲಾಗಿದೆ.

೨. ವೃತ್ತಿಪರ ಕೆಲಸಕ್ಕಾಗಿ ಯುವತಿಯನ್ನು ಉತ್ತೇಜಿಸಲಾಗಿದೆ.

೩. ಸಾಮಾಜಿಕ ಮತ್ತು ಆರ್ಥಿಕ ಉತ್ಪಾದಕ ಬಂಡವಾಳವಾಗಿ ಸಮಾಜಕ್ಕೆ ಕೊಡುಗೆ ನೀಡುತ್ತದೆ

ಫಲಿತಾಂಶ:

೧. ಕುಟುಂಬದಲ್ಲಿ ಗಳಿಸದ ಸದಸ್ಯರಿಂದ ಗಳಿಸುವ ಸದಸ್ಯರಾಗುವವರೆಗೆ (ಅನುತ್ಪಾದಕ ಸದಸ್ಯರಿಂದ ಉತ್ಪಾದಕ ಸದಸ್ಯರವರೆಗೆ)

೨. ವೃತ್ತಿಪರ ಆಕಾಂಕ್ಷೆಯ ಅಭಿವೃದ್ಧಿ

ಪರಿಣಾಮ:

೧. ಆರ್ಥಿಕ ಬಿಕ್ಕಟ್ಟಿನಿಂದ ಸುರಕ್ಷಿತವಾಗಿದೆ

೨. ಕುಟುಂಬದಲ್ಲಿ ಸಕಾರಾತ್ಮಕ ಬದಲಾವಣೆ

೩. ಕುಟುಂಬ ಮತ್ತು ಸಮಾಜಕ್ಕೆ ಕೊಡುಗೆ

೪. ಬಡ ಹುಡುಗಿಯ ವರ್ತನೆ ಮತ್ತು ನಡವಳಿಕೆಯಲ್ಲಿ ಬದಲಾವಣೆ..

4.13 ಇತರ ರಾಜ್ಯಗಳ ಇದೇ ರೀತಿಯ ಯೋಜನೆಗಳೊಂದಿಗೆ ಅರಿವು ಯೋಜನೆಯ ತುಲನಾತ್ಮಕ ವಿಶ್ಲೇಷಣೆ

ಭಾರತ ಸರ್ಕಾರದ ಕೇಂದ್ರ ಸಾಮಾಜಿಕ ನ್ಯಾಯ ಸಚಿವಾಲಯದ ಅಡಿಯಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ದೇಶದೊಳಗೆ ಮತ್ತು ವಿದೇಶಗಳಲ್ಲಿ ವ್ಯಾಸಂಗಕ್ಕಾಗಿ ಶಿಕ್ಷಣ ಸಾಲವನ್ನು ನೀಡಲಾಗುತ್ತದೆ. ರಾಷ್ಟ್ರೀಯ ಹಿಂದುಳಿದ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದಲ್ಲಿ ಇತ್ತೀಚೆಗೆ ನಡೆದ ಸಭೆಯೊಂದರಲ್ಲಿ, ಕೇಂದ್ರ ಸಾಮಾಜಿಕ ನ್ಯಾಯ ಸಚಿವರ ಸಚಿವಾಲಯವು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲದ ಮಿತಿಯನ್ನು ಹೆಚ್ಚಿಸಿದೆ ಮತ್ತು ಬಾಲಕಿಯರ ಸಾಲದ ಮೇಲಿನ ಬಡ್ಡಿಯನ್ನು ೦.೫% ರಷ್ಟು ಮನ್ನಾ ಮಾಡಲಾಗಿದೆ ಎಂದು ಘೋಷಿಸಿತು. ಈ ಯೋಜನೆಯಡಿ ವಿದ್ಯಾರ್ಥಿಗಳಿಗೆ ಸ್ವದೇಶದಲ್ಲಿ ಉನ್ನತ ಶಿಕ್ಷಣಕ್ಕಾಗಿ ರೂ ೫ ಲಕ್ಷ ಹಣವನ್ನು ರೂ ೧೦ ಲಕ್ಷಕ್ಕೆ ಹೆಚ್ಚಿಸಲಾಗಿದೆ. ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೋಗುವವರಿಗೆ ಪ್ರಸ್ತುತ ರೂ ೧೦ ಲಕ್ಷದ ಬದಲು ರೂ ೨೦ ಲಕ್ಷ ಸಿಗಲಿದೆ. ಅಂತೆಯೇ, ಬಾಲಕಿಯರಿಗೆ ಶಿಕ್ಷಣ ಸಾಲದ ಮೇಲಿನ ಬಡ್ಡಿದರದಲ್ಲಿ ೦.೫% ರಿಯಾಯಿತಿ ಸಿಗುತ್ತದೆ. ಬಾಲಕರ ಸಾಲದ ಬಡ್ಡಿದರವು ಶೇಕಡಾ ೪.೦ ಮತ್ತು ಹುಡುಗಿಯರ

ಸಾಲದ ಮೇಲಿನ ಬಡ್ಡಿದರ ೩.೫% ಆಗಿದೆ. ನಿಗಮದ ಹಲವಾರು ಯೋಜನೆಗಳ ಲಾಭವನ್ನು ೧೩ ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ ಎಂದು ಅವರು ಉಲ್ಲೇಖಿಸಿದ್ದಾರೆ [ಟೈಮ್ಸ್ ಆಫ್ ಇಂಡಿಯಾ, ಮಾರ್ಚ್ ೧೬, ೨೦೨೦, ಮುಂಬೈ]. ದೇಶದ ಇತರ ರಾಜ್ಯಗಳಲ್ಲಿ ರಾಜ್ಯ ಪ್ರಾಯೋಜಿತ ಉನ್ನತ ಶಿಕ್ಷಣ ಸಾಲ ಯೋಜನೆಗಳ ಬಗ್ಗೆ ಬಹಳ ಕಡಿಮೆ ಪುರಾವೆಗಳಿವೆ. ಆದಾಗ್ಯೂ, ಲಭ್ಯವಿರುವ ಪುರಾವೆಗಳಿಂದ, ಕೆಲವು ಒಳನೋಟಗಳು ಮತ್ತು ತರ್ಕಗಳು ದೊರಕುತ್ತವೆ.

ಇತ್ತೀಚಿನ ವರದಿಯ ಪ್ರಕಾರ, ಕೇರಳ ರಾಜ್ಯದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಶಿಕ್ಷಣ ಸಾಲವು ದೊಡ್ಡ ಸಮಸ್ಯೆಯಲ್ಲಿದೆ. ಬಾಕಿ ಇರುವ ಶಿಕ್ಷಣ ಸಾಲವು ೨೦೧೫ ರಿಂದ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ ಮತ್ತು ಶಿಕ್ಷಣ ಸಾಲದ ಕಾರ್ಯ ನಿರ್ವಹಿಸದ ಸೊತ್ತುಗಳು ರೂ .೨೦೦೦ ಕೋಟಿಗಳಷ್ಟು ಮೊತ್ತದೊಂದಿಗೆ ಗಗನಕ್ಕೇರುತ್ತಿದೆ, ಕೃಷಿ ಸಾಲವೂ ಇದೇ ಹಾದಿಯಲ್ಲಿದೆ.

ಶೈಕ್ಷಣಿಕ ಸಾಲಗಳ ಸುಮಾರು ೭೦% ಕಾರ್ಯ ನಿರ್ವಹಿಸದ ಸೊತ್ತುಗಳು ಸಾರ್ವಜನಿಕ ವಲಯದ ಬ್ಯಾಂಕುಗಳ ಬಳಿ ಇದ್ದು, ನಂತರದ ಸ್ಥಾನದಲ್ಲಿ ಖಾಸಗಿ ವಾಣಿಜ್ಯ ಬ್ಯಾಂಕುಗಳು (ಡಿಹೆಚ್, ೨೦೧೯) ಇರುವುದು ಕಂಡುಬರುತ್ತದೆ. ಪರಿಸ್ಥಿತಿಯನ್ನು ಪರಿಗಣಿಸಿ, ಬ್ಯಾಂಕುಗಳಿಂದ ಪಡೆದ ಸಾಲವನ್ನು ಮರುಪಾವತಿಸುವ ಸ್ಥಿತಿಯಲ್ಲಿರದ ವಿದ್ಯಾರ್ಥಿಗಳಿಗೆ ಜಾಮೀನು ನೀಡಲು ಕೇರಳ ರಾಜ್ಯವು ಶಿಕ್ಷಣ ಸಾಲ ಬೆಂಬಲ ಯೋಜನೆಯನ್ನು ಪ್ರಾರಂಭಿಸಿದೆ. ಉದಾರ ನೀತಿ ಮತ್ತು ಕಾರ್ಯವಿಧಾನದ ಮಾರ್ಗಸೂಚಿಗಳ ಕಾರಣದಿಂದಾಗಿ, ಅನೇಕ ವಿದ್ಯಾರ್ಥಿಗಳು ಉನ್ನತ ಅಧ್ಯಯನದ ಉದ್ದೇಶಕ್ಕಾಗಿ ಬ್ಯಾಂಕ್ ಸಾಲಗಳನ್ನು ಪಡೆದರು. ಆದಾಗ್ಯೂ, ನಿರುದ್ಯೋಗ ಮತ್ತು ಆದಾಯ ಕಡಿಮೆಯಿರುವ ಉದ್ಯೋಗದ ಕಾರಣದಿಂದಾಗಿ, ಅನೇಕ ವಿದ್ಯಾರ್ಥಿಗಳು ನಿಗದಿತ ಸಮಯದ ಒಳಗೆ ಸಾಲವನ್ನು ಮರುಪಾವತಿಸಲು ಕಷ್ಟಪಟ್ಟರು. ಇದರಿಂದಾಗಿ ವಿದ್ಯಾರ್ಥಿಗಳ ಸಾಲದ ಪ್ರಮಾಣ ಏರುತ್ತಾ ಹೋಯಿತು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಎನ್‌ಪಿಎ ಹೆಚ್ಚಿಸಲು ಕಾರಣವಾಯಿತು.

ಸಾಲದಿಂದ ಬಳಲುತ್ತಿರುವ ವಿದ್ಯಾರ್ಥಿಗಳಿಗೆ ಜಾಮೀನು ನೀಡುವ ಸಲುವಾಗಿ, ಸಾಲ ಪಡೆದ ವಿದ್ಯಾರ್ಥಿಗಳಿಗೆ ಮರುಪಾವತಿ ಬೆಂಬಲವನ್ನು ಒದಗಿಸಲು ರಾಜ್ಯ ಸರ್ಕಾರ ಶಿಕ್ಷಣ ಸಾಲ ಮರುಪಾವತಿ ಬೆಂಬಲ ಯೋಜನೆಯನ್ನು ಪ್ರಾರಂಭಿಸಿದೆ. ಇದನ್ನು ೨೦೧೬–೧೭ ಮತ್ತು ೨೦೧೭–೧೮ರ ಅಯವ್ಯಯನಲ್ಲಿ ಪ್ರಕಟಿಸಲಾಗಿದೆ. ಶಿಕ್ಷಣ ಸಾಲವನ್ನು ಪಡೆದು ಮರುಪಾವತಿಯ ಅವಧಿ ಮುಗಿದ ನಂತರವೂ ಸಾಲವನ್ನು ತೀರಿಸಲಾಗದವರಿಗೆ ಸರ್ಕಾರ ಬೆಂಬಲವಾಗಿ ಮರುಪಾವತಿಗೆ ನಾಲ್ಕು ವರ್ಷಗಳ ಸಮಯಾವಕಾಶವನ್ನು ವಿಸ್ತರಿಸುವ ನಿಟ್ಟಿನಲ್ಲಿ ಈ ಯೋಜನೆ ರೂಪಿಸಿದೆ.

ಈ ಯೋಜನೆಯಡಿಯಲ್ಲಿ, ವಿದ್ಯಾರ್ಥಿಗಳಿಗೆ ಮಂಜೂರಾದ ಶಿಕ್ಷಣ ಸಾಲಗಳನ್ನು ಎರಡು ವರ್ಗಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ: – (i) ಶಿಕ್ಷಣ ಸಾಲ– ಕಾರ್ಯ ನಿರ್ವಹಿಸದ ಸೊತ್ತು ಅಲ್ಲದ / ಪ್ರಮಾಣಿತ ಖಾತೆ, ಮತ್ತು (ii) ಮಾರ್ಚ್ ೨೦೧೬ ರಂದು ಅಥವಾ ಮೊದಲು ಕಾರ್ಯ ನಿರ್ವಹಿಸದ ಸೊತ್ತು ಖಾತೆಯಾಗಿ ಬದಲಾದ ಶಿಕ್ಷಣ ಸಾಲ. ಮೊದಲ ವರ್ಗಕ್ಕೆ ಸಾಲ ಮರುಪಾವತಿಗೆ ನಾಲ್ಕು ವರ್ಷಗಳ ಪರಿಹಾರ ಅವಧಿ ನೀಡಲಾಗಿದ್ದು, ಅಸಲು ಮತ್ತು ಬಡ್ಡಿ ಎರಡೂ ಸೇರಿದ ವಾರ್ಷಿಕ ಮರುಪಾವತಿ ಮೊತ್ತ ಸರ್ಕಾರ ಮತ್ತು ಸಾಲಗಾರರ ನಡುವೆ ನಿರ್ದಿಷ್ಟ ಅನುಪಾತದಲ್ಲಿ ಹಂಚಿಕೆಯಾಗುತ್ತದೆ. ಎರಡನೆಯ ವರ್ಗಕ್ಕೆ ಸರ್ಕಾರವು ಸಾಲಗಾರನ ಅರ್ಹತೆಗೆ ಅನುಗುಣವಾಗಿ ನಿಗದಿತ ಮೊತ್ತವನ್ನು ಪಾವತಿಸಿ ಸಾಲದ ಖಾತೆಯನ್ನು ಮುಚ್ಚಲು ಸಹಾಯ ಮಾಡುತ್ತದೆ.

ಮಧ್ಯಪ್ರದೇಶದಲ್ಲಿ, ಐಐಟಿಗಳು, ಐಐಎಂಗಳು ಮತ್ತು ಇತರ ಪ್ರಮುಖ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಸಾಲ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಇದರೊಂದಿಗೆ, ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಗೆ ಹಣಕಾಸು ಒದಗಿಸುವ ಭಾರತದ ಮೊದಲ ರಾಜ್ಯವಾಗಲು ಮಧ್ಯಪ್ರದೇಶ ಸಿದ್ಧವಾಗುತ್ತಿದೆ. ಆಶ್ಚರ್ಯವೆಂಬಂತೆ ಈ ಯೋಜನೆಯಡಿಯಲ್ಲಿ, ಸಾಲವನ್ನು ಪಡೆಯಲು ಅಥವಾ ಬ್ಯಾಂಕ್ ಗ್ಯಾರಂಟಿ ಪಡೆಯಲು ಯಾವುದೇ ದಾಖಲೆಗಳನ್ನು ನೀಡಲು ವಿದ್ಯಾರ್ಥಿಗಳನ್ನು ಕೇಳಲಾಗುವುದಿಲ್ಲ. ಇದಕ್ಕಾಗಿ ಅವರು ಪೋಷಕರು ಮಾತ್ರ ಯಾವುದೇ ತೆರಿಗೆ ಪಾವತಿಸುತ್ತಿಲ್ಲ ಮತ್ತು ರಾಜ್ಯದಲ್ಲಿ ಶಾಶ್ವತವಾಗಿ ವಾಸಿಸುತ್ತಿದ್ದೇವೆ ಎಂದು ಹೇಳುವ ಸ್ವಯಂ ದೃಢೀಕೃತ ಪ್ರಮಾಣಪತ್ರವನ್ನು ಒದಗಿಸಬೇಕಾಗುತ್ತದೆ. ಅವನು / ಅವಳು ಶಿಕ್ಷಣವನ್ನು ಪೂರ್ಣಗೊಳಿಸಿದ ೫ ವರ್ಷಗಳಲ್ಲಿ ಸಾಲದ ಮೊತ್ತವನ್ನು ಮರುಪಾವತಿಸಬೇಕಾಗುತ್ತದೆ.

ಆಂಧ್ರಪ್ರದೇಶದ ಬುಡಕಟ್ಟು ಕಲ್ಯಾಣ ಇಲಾಖೆಯು ಅಂಬೇಡ್ಕರ್ ಸಾಗರೋತ್ತರ ವಿದ್ಯಾನಿಧಿ ಅಡಿಯಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಯುಕೆ, ಯುಎಸ್ಎ, ಕೆನಡಾ, ಆಸ್ಟ್ರೇಲಿಯಾ ಮತ್ತು ಸಿಂಗಾಪುರ್ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಪಡೆಯಲು ಚಾಲ್ತಿಯಲ್ಲಿರುವ ಬಡ್ಡಿದರದ ಅನ್ವಯ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ರೂ .೫.೦ ಲಕ್ಷಕ್ಕೆ ಶಿಕ್ಷಣ ಸಾಲವನ್ನು ನೀಡುತ್ತದೆ. ಆಂದ್ರಪ್ರದೇಶದ ಶೆಡ್ಯೂಲ್ಡ್ ಟ್ರೈಬ್ಸ್ ಕೋ ಆಪರೇಟಿವ್ಸ್ ಫೈನಾನ್ಸ್ ಕಾರ್ಪೊರೇಷನ್, ಲಿಮಿಟೆಡ್, (ಟ್ರೈಕೋರ್) ರಾಷ್ಟ್ರೀಕೃತ ಬ್ಯಾಂಕುಗಳೊಂದಿಗೆ ಸಂಘಟಿತವಾಗಿದ್ದು, ಆಯ್ದ ಅಭ್ಯರ್ಥಿಗಳಿಗೆ ಶಿಕ್ಷಣ ಸಾಲವನ್ನು ನೀಡುತ್ತಿದೆ. ಆಂಧ್ರಪ್ರದೇಶ ರಾಜ್ಯವು ಎಲ್ಲಾ ಶಿಕ್ಷಣ ಸಾಲ ಸಾಲಗಾರರಿಗೆ ಬಡ್ಡಿ ಸಹಾಯಧನವನ್ನು ಸಹ ನೀಡುತ್ತದೆ. ಈ ಹಿನ್ನೆಲೆಯಲ್ಲಿ, ಆಂದ್ರಪ್ರದೇಶದ ಗುಂಟೂರಿನಲ್ಲಿ ಇತ್ತೀಚೆಗೆ ನಡೆದ ಎಸ್‌ಬಿಐ ಪ್ರಾದೇಶಿಕ ಸಮ್ಮೇಳನವೊಂದರಲ್ಲಿ, ಬ್ಯಾಂಕ್ ವ್ಯವಸ್ಥಾಪಕರು ಎಲ್ಲಾ ಶಿಕ್ಷಣ ಸಾಲ ಸಾಲಗಾರರಿಗೆ ಬಡ್ಡಿ ಸಹಾಯಧನವನ್ನು ನೀಡುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಲಾಭವಾಗುತ್ತದೆ ಎಂಬುದನ್ನು ಗಮನಿಸಿದ್ದಾರೆ. ಶಿಕ್ಷಣ ಸಾಲಗಳ ಮೇಲಿನ ಅಪಾಯದ ಮಟ್ಟವನ್ನು 'ಶೂನ್ಯ' ಮಾಡಬೇಕು ಎಂಬ ಅಭಿಪ್ರಾಯವೂ ಅವರಲ್ಲಿತ್ತು.

ಈ ನಿಟ್ಟಿನಲ್ಲಿ, ನೀತಿ ನಿರ್ಧಾರಗಳನ್ನು ಅಂತಿಮಗೊಳಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕ್ಷೇತ್ರ ಮಟ್ಟದ ವ್ಯವಸ್ಥಾಪಕರೊಂದಿಗೆ ಸಮಾಲೋಚನೆಗಳನ್ನು ಪ್ರಾರಂಭಿಸಿದೆ ಎಂದು ಉಲ್ಲೇಖಿಸಲಾಗಿದೆ. ಡಿಜಿಟಲೀಕರಣದ ಮೂಲಕ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಶೈಕ್ಷಣಿಕ ಸಾಲದ ಕುರಿತ ಮಾಹಿತಿಯನ್ನು ನೀಡುವ ಅಗತ್ಯವಿದೆ ಎಂಬುದನ್ನು ಕ್ಷೇತ್ರ ವ್ಯವಸ್ಥಾಪಕರು ಗಮನಿಸುತ್ತಾರೆ. ಗ್ರಾಮೀಣ ಜನರನ್ನು ಡಿಜಿಟಲೀಕರಣದೊಳಗೆ ತರಲು ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಬೃಹತ್ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಅವರು ಅಭಿಪ್ರಾಯಪಟ್ಟರು (ಟೈಮ್ಸ್ ಆಫ್ ಇಂಡಿಯಾ, ಆಗಷ್ಟ್ ೧೯, ೨೦೧೯)).

ಅಧ್ಯಾಯ 5 ಫಲಿತಾಂಶಗಳು, ಸಲಹೆಗಳು ಮತ್ತು ಶಿಫಾರಸ್ಸುಗಳು

5.1 ಪ್ರಮುಖ ಶೋಧನೆಗಳು

೧. ರಾಜ್ಯವು ೨೦೧೧–೧೨ ನೇ ಸಾಲಿನಿಂದ ೨೦೧೮–೧೯ ನೇ ಸಾಲಿನವರೆಗೆ 'ಅರಿವು ಶೈಕ್ಷಣಿಕ ಸಾಲ ಕಾರ್ಯಕ್ರಮದಡಿ ಒಟ್ಟು ೧೬,೪೩೦ ವಿದ್ಯಾರ್ಥಿಗಳನ್ನು ಒಳಗೊಂಡಿದೆ. ಕಾರ್ಯಕ್ರಮದ ಗುರಿ ೧೫,೦೯೫ ಫಲಾನುಭವಿಗಳನ್ನು ತಲುಪುವುದಾಗಿದ್ದು ಇದಕ್ಕಾಗಿ ರೂ.೧೦,೨೦೭,೭೧ ಲಕ್ಷಗಳ ಅನುದಾನವನ್ನು ಮೀಸಲಿರಿಸಲಾಗಿತ್ತು. ಯೋಜನೆಗೆ ಖರ್ಚು ಮಾಡಿದ ಒಟ್ಟು ಮೊತ್ತವನ್ನು, ಸಾಧನೆ ಎಂಬ ದೃಷ್ಟಿಯಿಂದ ಗಮನಿಸಿದರೆ ದಕ್ಷತೆಯು ಹಿಂದಿನವರೆಗೆ ಶೇಕಡಾ ೧೦೮.೮ ರಷ್ಟಿದ್ದು ಈಗ ಶೇಕಡಾ ೮೩.೮ ರಷ್ಟಿದೆ. ವರ್ಷಾವಾರು ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡರೆ, ೨೦೧೩–೧೪ ಮತ್ತು ೨೦೧೫–೧೬ ನೇ ಸಾಲಿನಲ್ಲಿ ವಾರ್ಷಿಕ ವ್ಯಾಪ್ತಿಗೆ(ರೀಚ್) ಸಂಬಂಧಿಸದಂತೆ ಉತ್ತಮ ಕಾರ್ಯಕ್ಷಮತೆಯನ್ನು ಕಾಣಬಹುದ, ಸಿಇಟಿ ವರ್ಗದ ಅಡಿಯಲ್ಲಿ ನೀಡಲಾದ ಗುರಿಗಳ ಸಾಧನೆಯ ದೃಷ್ಟಿಯಿಂದ ಗಮನಿಸಿದಾಗ ಯೋಜನೆಯು ಸತತವಾಗಿ/ಸ್ಥಿರವಾದ ಸಕಾರಾತ್ಮಕ ಸಾಧನೆಯನ್ನು ಮಾಡಿರುವುದನ್ನು ಕಾಣಬಹುದಾಗಿದೆ.

೨. ಅಲೆಮಾರಿ ಮತ್ತು ಅರೆ–ಅಲೆಮಾರಿ, ಕುಂಬಾರ, ತಿಗಳ, ಮಡಿವಾಳ, ಸವಿತಾ ಸಮಾಜ ಮುಂತಾದ ಅತ್ಯಂತ ದುರ್ಬಲ ಸಮುದಾಯಗಳ ವ್ಯಾಪ್ತಿಯಲ್ಲಿ ಈ ಸ್ಥಿರತೆಯನ್ನು ಸಾಧಿಸುವಲ್ಲಿ ಯೋಜನೆಯು ವಿಫಲಗೊಂಡಿದ್ದು, ಇದು ಕಾರ್ಯಕ್ರಮದ ವಿನ್ಯಾಸವನ್ನು ಮರುಪರಿಶೀಲಿಸುವ ಅಗತ್ಯವನ್ನು ಸೂಚಿಸುತ್ತದೆ. ಅಲ್ಲದೇ, ರಾಜ್ಯ ಮಟ್ಟದಲ್ಲಿ ನೀತಿ ನಿರೂಪಣೆಯನ್ನು ಪರಿಷ್ಕರಿಸಬೇಕಾದ ಅಗತ್ಯತೆಯನ್ನು ಸೂಚಿಸುತ್ತಿದೆ.

೩. ಅಧ್ಯಯನಕ್ಕಾಗಿ ಆಯ್ದ ೧೨ ಮಾದರಿ ಜಿಲ್ಲೆಗಳಲ್ಲಿ ೨೦೧೧ ರಿಂದ ೨೦೧೫ ಅವಧಿಯನ್ನು ಗಮನಿಸಿದಾಗ ವಿವಿಧ ಕೋರ್ಸ್‌ಗಳಲ್ಲಿ ಬಿಇ/ಬಿ.ಟೆಕ್ ಕೋರ್ಸ್ ಅತ್ಯಧಿಕ ವ್ಯಾಪ್ತಿಯನ್ನು ಹೊಂದಿರುವುದು ಸ್ಪಷ್ಟವಾಗುತ್ತಿದೆ. ೨೦೦೬ ರ ನಂತರ ಈ ವ್ಯಾಪ್ತಿ ಅತ್ಯಧಿಕವಾಗಿದ್ದು, ಉನ್ನತ ಶಿಕ್ಷಣ ವಲಯದಲ್ಲಿ ಇಂಜಿನಿಯರಿಂಗ್‌ನಂತಹ ವೃತ್ತಿಪರ ಕೋರ್ಸುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಈ ರೀತಿಯ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ. ಉನ್ನತ ಶಿಕ್ಷಣ ಕ್ಷೇತ್ರದ ಶ್ಲಾಘನೀಯ ಸಾಧನೆ ಇದಾಗಿದೆ. ಸ್ನಾತಕೋತ್ತರ ಹಾಗೂ ವೈದ್ಯಕೀಯ ಮತ್ತು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಇಲ್ಲದ ಕೋರ್ಸುಗಳಿಗೆ ಯೋಜನೆಯ ವ್ಯಾಪ್ತಿ/ಲಭ್ಯತೆ ಸೀಮಿತ ವಾಗಿದ್ದರೂ, ಇದರ ಹೊರತಾಗಿಯೂ ಕಳೆದ ವರ್ಷಗಳಲ್ಲಿ ಕಾರ್ಯಕ್ರಮದಲ್ಲಿ ಕಂಡುಬರುವ ನಿರಂತರ ಪ್ರಗತಿಯು ಹೆಚ್ಚಿದ ಬೇಡಿಕೆಗೆ ಸಾಕ್ಷಿಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಮಾಣ ಪದವಿ ಕೋರ್ಸುಗಳಿಗೆ ಅಧಿಕವಾಗಿದೆ ಎಂಬ ಅಂಶವನ್ನು ಗಮನಿಸಿದರೆ ಈ ವರ್ಗದ ವಿದ್ಯಾರ್ಥಿಗಳಿಗೆ ಸಹ ಅರಿವು ಸಾಲದ ಪ್ರಸ್ತುತತೆಯನ್ನು ಪರಿಶೀಲಿಸುವ ಮತ್ತು ವಿಸ್ತರಿಸುವ ಅವಶ್ಯಕತೆ ಇದೆ.

೪. ಕಳೆದ ವರ್ಷಗಳಲ್ಲಿ ಹಿಂದುಳಿದ ವರ್ಗಗಳಲ್ಲಿ ಯೋಜನೆಯ ವ್ಯಾಪ್ತಿಯ/ಲಭ್ಯತೆಯ ಪ್ರಮಾಣವು ರಾಜ್ಯದ ವಿತರಣಾ ಮಾನದಂಡಗಳೊಂದಿಗೆ ಹೊಂದಾಣಿಕೆಯಾಗುತ್ತಿರುವುದು ಕಂಡುಬರುತ್ತದೆ. ಜಿಲ್ಲೆಗಳಾದ್ಯಂತ ಗಮನಿಸಿದಾಗ ಕೋಲಾರ, ಬಾಗಲಕೋಟೆಮತ್ತು ಉತ್ತರಕನ್ನಡದಲ್ಲಿ ಕೋಲಾರ ವರ್ಗ I ಮತ್ತು ವರ್ಗ IIಎ ಅತಿದೊಡ್ಡ ಫಲಾನುಭವಿಗಳ ಗುಂಪಾಗಿ ಹೊರಹೊಮ್ಮುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಬೆಂಗಳೂರು, ಕೋಲಾರ ಮತ್ತು ಉತ್ತರ

ಕನ್ನಡದಲ್ಲಿ ಕ್ರಮವಾಗಿ IIಎ, IIIಎ ಮತ್ತು IIIಬಿ ವರ್ಗದ ಸಮುದಾಯಗಳಿಗೆ ಯೋಜನೆಯ ಫಲಾನುಭವಿಗಳ ಸಂಖ್ಯೆ ತೀರಾ ಕಡಿಮೆ ಪ್ರಮಾಣದಲ್ಲಿದೆ. ಆದ್ದರಿಂದ, ಸಹಜವಾಗಿ ವರ್ಗ IIಎ ಕಾರ್ಯಕ್ರಮದ ಅತಿದೊಡ್ಡ ಫಲಾನುಭವಿಗಳ ಸಮುದಾಯವಾಗಿ ಹೊರಹೊಮ್ಮುತ್ತದೆ. ಬೆಂಗಳೂರು, ಮೈಸೂರು ಜಿಲ್ಲೆಗಳು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಕಂಡುಬರುವ ಈ ವೈಪರೀತ್ಯಗಳನ್ನು ಜನಸಂಖ್ಯಾ ಸಂಯೋಜನೆ ಮತ್ತು ಜನಸಂಖ್ಯೆಯ ಹಂಚಿಕೆಯ ಆಧಾರದಲ್ಲಿ ಸಮರ್ಥಿಸಿದರೂ, ಈ ವರ್ಗದ ಅಡಿಯಲ್ಲಿರುವ ಕೆಲವು ಪ್ರಮುಖ ಜಾತಿಗಳು ಆ ಜಾತಿಗಳಲ್ಲಿನ ಮೊದಲನೇ ತಲೆಮಾರಿನ ಫಲಾನುಭವಿಗಳನ್ನು ಹೊಂದಿಲ್ಲದೇ ಇರಬಹುದು. ಪ್ರಸ್ತುತ ಯೋಜನೆಯ ಉಪಯೋಗವನ್ನು ಪಡೆಯಲು ಅರ್ಹತೆ ಹೊಂದಿಲ್ಲದಿರಬಹುದು. ಆದ್ದರಿಂದ ಫಲಾನುಭವಿಗಳ ಅಂತಿಮ ಆಯ್ಕೆಯಲ್ಲಿ ಫಲಾನುಭವಿಗಳನ್ನು ಕೇವಲ ಜಾತಿಯ ಆಧಾರದ ಮೇಲೆ ಆಯ್ಕೆ ಮಾಡುವುದರ ಬದಲಾಗಿ ಆ ಜಾತಿ ಗುಂಪುಗಳಲ್ಲಿ ದುರ್ಬಲರು, ಬಡವರು ಮತ್ತು ಅಶಕ್ತರನ್ನು ಆಯ್ಕೆ ಮಾಡಬೇಕು.

೫. ಈ ಕಾರ್ಯಕ್ರಮವು ಪ್ರತಿ ಆರು ಹುಡುಗರಿಗೆ ೪ ಹುಡುಗಿಯರನ್ನು ಒಳಗೊಳ್ಳುತ್ತದೆ. ಇದು ಕಲಬುರಗಿ, ಬೀದರ್ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಲಿಂಗ ಸಂವೇದನಾ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಆಯೋಜಿಸಬೇಕಾದ ಅಗತ್ಯವನ್ನು ಸೂಚಿಸುತ್ತದೆ.

೬. ಒಟ್ಟಾರೆಯಾಗಿ ಫಲಾನುಭವಿಗಳಲ್ಲಿ ಹೆಚ್ಚಿನವರ (ಶೇ.೮೧.೭) ಬಿಇ ಕೋರ್ಸ್ ನಲ್ಲಿ ಕಂಡು ಬರುತ್ತಾರೆ. ಎಲ್ಲಾ ಪ್ರದೇಶಗಳಲ್ಲೂ ಇದೇ ರೀತಿಯ ಪ್ರವೃತ್ತಿಯನ್ನು ಕಾಣಬಹುದಾಗಿದೆ. ಹಿಂದುಳಿದ ಜಿಲ್ಲೆಗಳಾದ ಬಾಗಲಕೋಟೆ ಮತ್ತು ಉತ್ತರಕನ್ನಡ ಜಿಲ್ಲೆಗಳು ಸಹ ಬಿಇ ಯಂತಹ ಕೋರ್ಸ್‌ಗಳಲ್ಲಿ ಶೇ.೯೦ ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವುದು ಇದಕ್ಕೆ ಪುರಾವೆಯನ್ನು ಒದಗಿಸುತ್ತದೆ. ಹಿಂದುಳಿದ ಜಿಲ್ಲೆಗಳಲ್ಲಿಯೂ ಇಂಜಿನಿಯರಿಂಗ್ ಕೋರ್ಸುಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹೆಚ್ಚಿನ ಭಾಗವಹಿಸುವಿಕೆ ಅರಿವು ಕಾರ್ಯಕ್ರಮದ ಸಕಾರಾತ್ಮಕ ಪರಿಣಾಮಕ್ಕೆ ಹಿಡಿದ ಕನ್ನಡಿಯಾಗಿದೆ. ಆದರೂ, ರಾಜ್ಯವು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಲ್ಲಿಯೂ ದುರ್ಬಲ ವರ್ಗದವರನ್ನು ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಮಾತ್ರ ಗುರಿಯಾಗಿಸಿದೆಯೇ ಮತ್ತು ಅಗತ್ಯವಿರುವ ಹಾಗು ಅರ್ಹ ಫಲಾನುಭವಿಗಳಿಗೆ ಈ ಯೋಜನೆಯ ಲಾಭವನ್ನು ನೀಡುವಲ್ಲಿ ಯಾವುದೇ ಲೋಪದೋಷಗಳನ್ನು ಎಸಗಿಲ್ಲವೇ ಎಂಬುದನ್ನು ಇನ್ನಷ್ಟು ತನಿಖೆ ಮಾಡಬೇಕಾದ ಅಗತ್ಯವಿದೆ.

೭. ಫಲಾನುಭವಿ ಕುಟುಂಬಗಳಲ್ಲಿ ಹೆಚ್ಚಿನವರು (ಶೇ,೫೮) ಯಾವುದೇ ರೀತಿಯ ಕೃಷಿ ಭೂಮಿಯನ್ನು ಹೊಂದಿಲ್ಲ, ಇದು ಯೋಜನೆಯಲ್ಲಿ ಆರ್ಥಿಕ ದುರ್ಬಲವರ್ಗದವರಿಗೆ ನೀಡಿದ ಆದ್ಯತೆಯನ್ನು ಸೂಚಿಸುತ್ತದೆ. ಅದರಲ್ಲೂ ಬೆಂಗಳೂರು (ಶೇ.೭೩) ಮತ್ತು ಬೆಳಗಾವಿ (ಶೇ.೬೦) ವಿಭಾಗಗಳಲ್ಲಿ ಕೃಷಿ ಭೂರಹಿತರ ಸಂಖ್ಯೆ ಹೆಚ್ಚಳವಿದ, ವರ್ಗ ೩ಬಿಯಲ್ಲಿ ಭೂರಹಿತ ಫಲಾನುಭವಿಗಳು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಕಲಬುರಗಿ ಮತ್ತು ಮೈಸೂರು ಪ್ರದೇಶಗಳಲ್ಲಿ ಫಲಾನುಭವಿಗಳು ಹೆಚ್ಚಿನ ಪ್ರಮಾಣದ (ಶೇಕಡ ೭೫ ರಿಂದ ೮೦) ಖುಷ್ಕಿ/ಒಣ ಕೃಷಿ ಭೂಮಿಯನ್ನು ಹೊಂದಿರುವುದನ್ನು ಈ ವರದಿಯು ಬಹಿರಂಗಪಡಿಸುತ್ತದೆ. ಒಣಭೂಮಿಯು ಯಾವುದೇ ರೀತಿಯ ಖಚಿತ ಆದಾಯವನ್ನು ಧೃಢೀಕರಿಸುವುದಿಲ್ಲ ಹಾಗಾಗಿ ಈ ವಲಯದ ಜನರಿಗೆ ದುರ್ಬಲ ವರ್ಗದ ಗುಂಪಿನಿಂದ ವಿನಾಯಿತಿ ನೀಡುವ ಅಗತ್ಯವಿಲ್ಲ. ಹೀಗಾಗಿ, ಒಣ ಭೂಮಿಯನ್ನು ಹೊಂದಿರುವ ಫಲಾನುಭವಿಗಳಿಗೆ ಸಹ ದುರ್ಬಲತೆಯ ಅಂಶವು ಬಲಗೊಳ್ಳಬಹುದು.

೮. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಲ್ಲಿ ದುರ್ಬಲತೆಯ ಅಂಶವನ್ನು ಮನೆಯ ವಿವಿಧ ಸೌಲಭ್ಯಗಳು, ಗ್ಯಾಜೆಟ್‌ಗಳು ಮತ್ತು ಸ್ವತ್ತುಗಳು ನಿರ್ಧರಿಸುತ್ತವೆ. ಈ ವಸ್ತುಗಳ ಲಭ್ಯತೆ ಇಲ್ಲದವರನ್ನು ದುರ್ಬಲ ವರ್ಗದವರ ಗುಂಪಿಗೆ ಸೇರಿಸಬಹುದಾಗಿದೆ. ಮೊಬೈಲ್ ಫೋನ್ ಹೊರತುಪಡಿಸಿ, ಕೇವಲ ಶೇ.೨೦.೦ ರಷ್ಟು ಫಲಾನುಭವಿಗಳು ಮಾತ್ರ ವಿವಿಧ ಸೌಲಭ್ಯಗಳು ಮತ್ತು ಗ್ಯಾಜೆಟ್‌ಗಳನ್ನು ಹೊಂದಿದ್ದಾರೆ. ರೆಫ್ರಿಜರೇಟರ್, ಇಂಟರ್ನೆಟ್ ಮತ್ತು ಕಾರು ಅನೇಕ ಮನೆಗಳಿಗೆ ಅಪರೂಪದ ಆಸ್ತಿಯಾಗಿದೆ.

೯. ಫಲಾನುಭವಿಗಳ ಅತಿದೊಡ್ಡ ಭಾಗ (ಶೇ.೬೩.೨) ಅನುದಾನ ರಹಿತ ಖಾಸಗಿ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವುದು ಕಂಡುಬಂದಿದೆ. ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ವಲಯದ ಪ್ರಾಧಾನ್ಯತೆಯೇ ಹೆಚ್ಚು ಎಂಬ ಅಂಶವನ್ನು ಪರಿಗಣಿಸಿದಾಗ ಈ ಪ್ರವೃತ್ತಿ ನಿರೀಕ್ಷಿತ. ಇದಲ್ಲದೇ ಕಾಲೇಜಿನ ಆಯ್ಕೆ ವಿದ್ಯಾರ್ಥಿಯ ಸಿಇಟಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಅದಾಗ್ಯೂ ಈ ವಿದ್ಯಮಾನವು ಗಮನಾರ್ಹವಾಗಿದೆ ಮತ್ತು ಈ ಪ್ರವೃತ್ತಿಯನ್ನು ಸುಗಮಗೊಳಿಸುವ ಅರಿವು ಕಾರ್ಯಕ್ರಮವು ಇನ್ನಷ್ಟು ಭರವಸೆಯಿಂದ ಕೂಡಿದೆ. ಫಲಾನುಭವಿಗಳಲ್ಲಿ ಖಾಸಗಿ ಅನುದಾನರಹಿತ ಕಾಲೇಜುಗಳ ಆಯ್ಕೆಯ ಕುರಿತು ಮತ್ತಷ್ಟು ಪರಿಶೀಲಿಸಿದಾಗ, ಅವರ ಆದಾಯ ಅಥವಾ ಉದ್ಯೋಗಕ್ಕಿಂತ ಹೆಚ್ಚಾಗಿ ಕಾಲೇಜಿನ ಆಯ್ಕೆಯನ್ನು ನಿರ್ಧರಿಸುವಲ್ಲಿ ತಂದೆಯ ಶೈಕ್ಷಣಿಕ ಸಾಧನೆಯ ಪಾಲು ಗಮನಾರ್ಹ ಪಾತ್ರವನ್ನು ವಹಿಸಿರುವುದು ಕಂಡುಬರುತ್ತದೆ.

೧೦. ಸಾಲ ಪಾವತಿ ವಿಧಾನವನ್ನು ಪರಿಗಣಿಸಿದಂತೆ ಫಲಾನುಭವಿಗಳು ಇಲ್ಲಿಯವರೆಗೆ ತೃಪ್ತರಾಗಿದ್ದಾರೆ. ಸುಲಭ ಲಭ್ಯತೆಯ ದೃಷ್ಟಿಯಿಂದ ಕಾರ್ಯಕ್ರಮವು ಪರಿಣಾಮಕಾರಿಯಾಗಿ ಕಂಡುಬರುತ್ತದೆ (೮೨.೦%). ಹೆಚ್ಚಿನ ಸಂಖ್ಯೆಯ (೯೪%) ಫಲಾನುಭವಿಗಳು ಆನ್‌ಲೈನ್ ಅಪ್ಲಿಕೇಶನ್ ಪಡೆಯಲು ಮತ್ತು ಸಲ್ಲಿಸಲು ಅನುಕೂಲಕರವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸಾಲದ ಸಮಯೋಚಿತ ಬಿಡುಗಡೆ ಕುರಿತಂತೆ ಬಹುಪಾಲು ಫಲಾನುಭವಿಗಳು (೮೭.೩%) ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಕೋಲಾರ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಹೊರತುಪಡಿಸಿ ಸಾಮಾನ್ಯವಾಗಿ ಎಲ್ಲಾ ಫಲಾನುಭವಿಗಳು ಸಹ ಸಾಲ ಪಾವತಿ ವಿಧಾನ, ಸುಲಭ ಲಭ್ಯತೆ (ಶೇ.೮೨.) ಆನ್ಲೈನ್ ಅರ್ಜಿಯನ್ನು ಪಡೆಯುವ ಹಾಗೂ ಸಲ್ಲಿಸುವ ವಿಧಾನ (ಶೇ.೯೪) ಸಾಲವನ್ನು ಸಕಾಲಿಕವಾಗಿ ಬಿಡುಗಡೆ ಮಾಡುವುದು (ಶೇ.೮೭.೩) ಈ ಪ್ರಕ್ರಿಯೆಗಳ ಕುರಿತು ತೃಪ್ತಿ ಹೊಂದಿದ್ದಾರೆ. ಅದಾಗ್ಯೂ ಹೆಚ್ಚಿನ ಜಿಲ್ಲೆಗಳಲ್ಲಿ ಕಾರ್ಯವಿಧಾನ (ಶೇ.೪೪), ಜಾಮೀನು ನೀಡುವುದು ಮತ್ತು ಅಫಿಡವಿಟ್ ಸಲ್ಲಿಸುವುದ (ಶೇ.೩೨.೫) ಮತ್ತು ವಿವಿಧ ದಾಖಲೆಗಳನ್ನು ಸಲ್ಲಿಸುವುದು (ಶೇ.೨೮.೪) ಮುಂತಾದವುಗಳು ಸಾಲ ಪಡೆಯುವಲ್ಲಿ ಪ್ರಮುಖ ತೊಡಕುಗಳಾಗಿವೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

೧೧. ಫಲಾನುಭವಿಗಳಲ್ಲಿ ಹೆಚ್ಚಿನವರು (ಶೇ.೯೪.೫೧) ಅರಿವು ಸಾಲವನ್ನು ಶಿಕ್ಷಣದ ಉದ್ದೇಶಕ್ಕಾಗಿ ಮಾತ್ರ ಬಳಸಲಾಗುತ್ತಿದೆ ಎನ್ನುತ್ತಾರೆ. ಸಾಲವು ಅವರ ಹಣಕಾಸಿನ ತೊಂದರೆಗಳನ್ನು ಮತ್ತು ಮನೆಯ ಹೊರೆಯನ್ನು ತಗ್ಗಿಸುವುದರ ಹೊರತಾಗಿ, ಯಾವುದೇ ಅಡೆತಡೆಗಳಿಲ್ಲದೇ ತಮ್ಮ ಆಯ್ಕೆಯ ಕಾಲೇಜುಗಳಲ್ಲಿ ಉನ್ನತ ಶಿಕ್ಷಣವನ್ನು ಪೂರ್ಣಗೊಳಿಸಲು ಮತ್ತು ಆರ್ಥಿಕ ಮತ್ತು ಸಾಮಾಜಿಕ ಚಲನಶೀಲತೆಗೆ ದಾರಿ ಮಾಡಿಕೊಟ್ಟಿದೆ. ಇದರೊಂದಿಗೆ ಶೇ.೯೬.೦ ಕ್ಕಿಂತಲೂ ಹೆಚ್ಚು ಫಲಾನುಭವಿಗಳು ತಮ್ಮ ಆತ್ಮವಿಶ್ವಾಸ ಮತ್ತು ಸಮಾಧಾನವನ್ನು ಹೆಚ್ಚಿಸುವಲ್ಲಿ ಅರಿವು ಕಾರ್ಯಕ್ರಮದ ಪಾತ್ರ ಹಿರಿದು ಎಂಬುದನ್ನು ಸಮ್ಮತಿಸುತ್ತಾರೆ.. ಸಾಲದ ಮೊತ್ತವು ದೊಡ್ಡ ಪ್ರಮಾಣದಲ್ಲಿದ್ದರೂ, ವೈದ್ಯಕೀಯ ವಿದ್ಯಾರ್ಥಿಗಳು ಭರಿಸುವ ಖರ್ಚಿಗೆ ಅದು ಸರಿ ಹೊಂದುತ್ತಿಲ್ಲ. ಹಾಗಾಗಿ ವೈದ್ಯಕೀಯ ವಿಭಾಗದ

ವಿದ್ಯಾರ್ಥಿಗಳಿಗಿರುವ ಅಧಿಕ ಖರ್ಚು ವೆಚ್ಚಗಳನ್ನು ಗಮನದಲ್ಲಿಟ್ಟುಕೊಂಡು ಸಾಲದ ಪ್ರಮಾಣವನ್ನು ವರ್ಧಿಸುವ ಅಗತ್ಯವಿದೆ.

೧೨. ಅರಿವು ಕಾರ್ಯಕ್ರಮದ ಸಕಾರಾತ್ಮಕ ಪ್ರಭಾವವನ್ನು ಸೂಚಿಸುವ ಪ್ರೋತ್ಸಾಹದಾಯಕ ಲಕ್ಷಣವೆಂದರೆ ಕೋರ್ಸ್ ಪೂರ್ಣಗೊಳಿಸುವಿಕೆಯ ಅನುಪಾತವು ಶೇಕಡ ೪೬.೫ ರಷ್ಟಿರುವುದು. ಇದರಲ್ಲಿ ಹೆಚ್ಚಿನ ಪ್ರಮಾಣವನ್ನು ಸ್ನಾತಕೋತ್ತರ ಪದವಿಗಳಲ್ಲಿ (ಶೇ.೮೨.೮) ಮತ್ತು ಬಿಇ ಕೋರ್ಸ್ (ಶೇ.೪೬.೩)ಗಳಲ್ಲಿ ಗಮನಿಸಬಹುದು. ಕೋರ್ಸ್ ಪೂರ್ಣಗೊಳಿಸುವಿಕೆಯ ವಿಷಯದಲ್ಲಿ ಈ ಕಾರ್ಯಕ್ರಮವು ವರ್ಗ ೨ಎ ಫಲಾನುಭವಿಗಳ ಮೇಲೆ ಸಂಪೂರ್ಣ ಸಕಾರಾತ್ಮಕ ಪರಿಣಾಮವನ್ನು ಬೀರಿದೆ. ಆದರೆ ವರ್ಗ IIIಎ ಯ ಮೇಲೆ ಕಾರ್ಯಕ್ರಮವು ಇದೇ ಪರಿಣಾಮವನ್ನು ಬೀರುವಲ್ಲಿ ವಿಫಲವಾಗಿದೆ. ಇದರೊಂದಿಗೆ ಈ ವರ್ಗಕ್ಕೆ ಸೇರಿದವರಲ್ಲಿ ಕೋರ್ಸ್ ಅನ್ನು ಅರ್ಧಕ್ಕೆ ಬಿಟ್ಟವರು ಹೆಚ್ಚಿದ್ದಾರೆ. ಕೋರ್ಸ್ ಅನ್ನು ಪೂರ್ಣಗೊಳಿಸದೆ ಹೊರಗುಳಿಯುವ ೨೩ ಮಂದಿಯಲ್ಲಿ ೧೪ ಮಂದಿ ಈ ವರ್ಗಕ್ಕೆ ಸೇರಿದವರಾಗಿದ್ದಾರೆ. ಮೈಸೂರು ವಿಭಾಗವು ಕೋರ್ಸ್ ಪೂರ್ಣಗೊಳಿಸುವಿಕೆಯ ಅನುಪಾತಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸಕಾರಾತ್ಮಕ ಪರಿಣಾಮಗಳನ್ನು ಬಹಿರಂಗಪಡಿಸುತ್ತದೆ.

೧೩. ಒಟ್ಟಾರೆಯಾಗಿ, ಈ ಕೋರ್ಸ್ ಪೂರ್ಣಗೊಳಿಸುವಿಕೆಯ ಅನುಪಾತವು ಹುಡುಗರು ಹಾಗೂ ಹುಡುಗಿಯರಲ್ಲಿ ಬಹುತೇಕ ಸಮನಾಗಿದೆ. ಅದಾಗ್ಯೂ ಪ್ರಾದೇಶಿಕ ಆಯಾಮವನ್ನು ಸೇರಿಸಿದಾಗ ಭಿನ್ನ ಮಾದರಿಗಳು ಹೊರಹೊಮ್ಮುತ್ತವೆ. ಕೋಲಾರ ಮತ್ತು ಕೊಡಗು ಜಿಲ್ಲೆಗಳಲ್ಲಿ ಪುರುಷ ವಿದ್ಯಾರ್ಥಿಗಳಿಗಿಂತ ಮಹಿಳಾ ವಿದ್ಯಾರ್ಥಿಗಳ ಮೇಲೆ ಕಾರ್ಯಕ್ರಮವು ಹೆಚ್ಚಿನ ಸಕಾರಾತ್ಮಕ ಪರಿಣಾಮವನ್ನು ಬೀರಿದೆ. ಕೊಡಗು ಜಿಲ್ಲೆಯಲ್ಲಿ ಹೆಚ್ಚಿರುವ ಮಹಿಳಾ ಅನುಪಾತವು ಜಿಲ್ಲೆಯಲ್ಲಿ ಹೆಚ್ಚಿನ ಕಾರ್ಯಕ್ಷಮತೆಗೆ ಕಾರಣವಾಗಿದ್ದರೂ, ಕೋಲಾರ ಜಿಲ್ಲೆಯಲ್ಲಿ ಪರಿಣಾಮ ವಿರುದ್ಧವಾಗಿದೆ, ಇದು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಜಿಲ್ಲೆಯ ಮಂದಗತಿಯ ಚಲನೆಯನ್ನು ಸೂಚಿಸುತ್ತದೆ. ಬಾಗಲಕೋಟೆ, ಉತ್ತರ ಕನ್ನಡ, ಕಲಬುರಗಿ ಜಿಲ್ಲೆಗಳಿಗೆ ಹೋಲಿಸಿದಾಗ ಬೆಂಗಳೂರು ನಗರ ಮಹಿಳೆಯರ ಶಿಕ್ಷಣದ ಉತ್ತಮ ಚಿತ್ರಣವನ್ನು ನೀಡುತ್ತದೆ. ಪ್ರಾದೇಶಿಕ ಆಯಾಮವನ್ನು ಸೇರಿಸಿದಾಗ ಈ ಕಾರ್ಯಕ್ರಮವು ಬಾಲಕಿಯರ ಮೇಲೆ ವಿಭಿನ್ನ ಪರಿಣಾಮಗಳನ್ನು ಸೂಚಿಸುತ್ತದೆ.

೧೪. ಉದ್ಯೋಗದ ಮೇಲೆ ಅರಿವು ಕಾರ್ಯಕ್ರಮ ಹೇಗೆ ಪ್ರಭಾವವನ್ನು ಬೀರಿದೆ ಎಂಬುದನ್ನು ವಿಶ್ಲೇಷಿಸಿದಾಗ ಉದ್ಯೋಗಿಗಳಿಗೆ (ಶೇ.೪೧.೫) ಹೋಲಿಸಿದರೆ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳು ನಿರುದ್ಯೋಗಿಗಳಾಗಿದ್ದಾರೆ (ಶೇ.೫೮.೧). ಅದರಲ್ಲಿಯೂ ವರ್ಗ IIಎ ಹೆಚ್ಚಿನ ಮಟ್ಟದ ನಿರುದ್ಯೋಗಿಗಳನ್ನು ಹೊಂದಿದೆ (ಶೇ.೬೦.೦). ಈ ವರ್ಗವು ಕಾರ್ಯಕ್ರಮದ ಲಾಭವನ್ನು ಹೆಚ್ಚಾಗಿ (ಶೇ.೫೪) ಪಡೆಯುವುದರಿಂದ ಈ ವರ್ಗದವರಲ್ಲಿಯೇ ನಿರುದ್ಯೋಗವೂ ಹೆಚ್ಚಾಗಿರುವುದು ಸಹಜವಾಗಿದೆ. ಕೋರ್ಸುಗಳಾದ್ಯಂತ, ಕಡಿಮೆ ಫಲಾನುಭವಿಗಳನ್ನು ಹೊಂದಿರುವ ಸಾಮಾನ್ಯ ಪದವಿ ಮತ್ತು ವೈದ್ಯಕೀಯ ಕಾರ್ಯಕ್ರಮವನ್ನು ಹೊರತುಪಡಿಸಿದರೆ ನಿರುದ್ಯೋಗಿಗಳ ಪ್ರಮಾಣ ಸ್ನಾತಕೋತ್ತರ ಫಲಾನುಭವಿಗಳಲ್ಲಿ (ಶೇ.೬೬) ಮತ್ತು ಇಂಜಿನಿಯರಿಂಗ್ (ಬಿಇ) ಪದವೀಧರ (ಶೇ.೫೭)ರಲ್ಲಿ ಹೆಚ್ಚಿದೆ. ಇದಲ್ಲದೇ ರಿಗ್ರೆಶನ್ ಅನಾಲಿಸಿಸ್ ಪ್ರಕಾರ ಈ ಕಾರ್ಯಕ್ರಮವು ಬೆಂಗಳೂರು ವಿಭಾಗದ ಫಲಾನುಭವಿಗಳು, ಪುರುಷ ಫಲಾನುಭವಿಗಳು ಮತ್ತು ಸರ್ಕಾರಿ ಕಾಲೇಜುಗಳ ಫಲಾನುಭವಿಗಳ ಮೇಲೆ ಗಮನಾರ್ಹ ಪ್ರಭಾವ ಬೀರುತ್ತದೆ. ಸಹಜವೆಂಬಂತೆ, ಸಾಲದ ಮರುಪಾವತಿ ನಡವಳಿಕೆಯು ಉದ್ಯೋಗದ ಸ್ಥಿತಿಗತಿಯೊಂದಿಗೆ ನಿರ್ಧರಿತವಾಗಿರುವುದು ಕಂಡುಬರುತ್ತದೆ.

೧೫. ಉದ್ಯೋಗ ಪಡೆಯಲು ವಿಳಂಬಕ್ಕೆ ವಿವಿಧ ಅಂಶಗಳು ಕಾರಣವಾಗಿವೆ. ಮಾದರಿ ಫಲಾನುಭವಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ವರದಿ ಮಾಡಿದ ಸಾಮಾನ್ಯ ಕಾರಣವೆಂದರೆ 'ಉದ್ಯೋಗಾವಕಾಶಗಳ ಕೊರತೆ'. ಇದರೊಂದಿಗೆ ಶೇಕಡಾ ೨೩.೦ ರಷ್ಟು ಫಲಾನುಭವಿಗಳು ಸಂದರ್ಶನಗಳಲ್ಲಿ ಯಶಸ್ವಿಯಾಗಲು ಸಾಧ್ಯವಿಲ್ಲ ಎಂದು ವರದಿ ಮಾಡಿದ್ದಾರೆ. ಈ ಪ್ರವೃತ್ತಿ ಉತ್ತಮ ಯೋಜನಾ ಕಾರ್ಯತಂತ್ರಗಳ ಅಗತ್ಯವನ್ನು ಮಾತ್ರವಲ್ಲದೆ ಕಾಲೇಜು ಮಟ್ಟದಲ್ಲಿ ಪರಿಣಾಮಕಾರಿಯಾದ ಪಠ್ಯಕ್ರಮದ ಕಾರ್ಯತಂತ್ರಗಳನ್ನು ಜಾರಿಗೆ ತರಲು ಸೂಚಿಸುತ್ತದೆ.

೧೬. ಈ ಅಧ್ಯಯನದ ಮಾದರಿಯಲ್ಲಿ ಎಂಜಿನಿಯರಿಂಗ್ ಪದವೀಧರರು ಪ್ರಮುಖ ಭಾಗವಾಗಿರುವುದರಿಂದ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳು ಎಂಜಿನಿಯರಿಂಗ್ ಉದ್ಯೋಗಗಳನ್ನು ಹೊಂದಿದ್ದಾರೆ ಮತ್ತು ಅದರಲ್ಲಿ ಹೆಚ್ಚಿನವರು (ಶೇ.೫೬.೮೪) ಬೆಂಗಳೂರಿನಲ್ಲಿ ಮತ್ತು ಕರ್ನಾಟಕದೊಳಗೆ (ಶೇ.೩೫.೯) ಕೆಲಸ ಮಾಡುತ್ತಿದ್ದಾರೆ.

೧೭. ಉದ್ಯೋಗಿ ಫಲಾನುಭವಿಗಳ ಹೆಚ್ಚಿನ ಅನುಪಾತದ (೪೮%) ಮಾಸಿಕ ಗಳಿಕೆ ರೂ ೧೫ ಸಾವಿರ ದಿಂದ ರೂ ೨೫ ಸಾವಿರದ ನಡುವೆ ಇದೆ. ಬೆಂಗಳೂರು ನಗರ ಮತ್ತು ಮೈಸೂರು ಜಿಲ್ಲೆಗಳು ವಿರುದ್ಧ ಕ್ವಾರ್ಟೈಲ್‌ಗಳಲ್ಲಿ ಹೆಚ್ಚಿನ ಮತ್ತು ಕಡಿಮೆ ವೇತನ ಪಡೆಯುವವರ ವಿಷಯದಲ್ಲಿ ವಿರೋಧಾತ್ಮಕ ಪ್ರವೃತ್ತಿಯನ್ನು ಬಹಿರಂಗಪಡಿಸುತ್ತವೆ. ಕುತೂಹಲಕಾರಿಯಾಗಿ, ಉತ್ತರ ಕರ್ನಾಟಕ ಪ್ರದೇಶದ ಜಿಲ್ಲೆಗಳು ತಿಂಗಳಿಗೆ ರೂ ೩೦ ಸಾವಿರ ಮತ್ತು ಹೆಚ್ಚಿನ ಸಂಬಳವನ್ನು ಗಳಿಸುವ ಫಲಾನುಭವಿಗಳ ಉಪಸ್ಥಿತಿಯನ್ನು ಬಹಿರಂಗಪಡಿಸುತ್ತವೆ, ಆದರೂ ಈ ಸಂಖ್ಯೆ ಬಹಳ ಕಡಿಮೆ. ರೂ ೩೦ ಸಾವಿರಕ್ಕೂ ಹೆಚ್ಚಿನ ವೇತನ ಶ್ರೇಣಿಯ ವಿಭಾಗದಲ್ಲಿ ಒಬ್ಬ ಫಲಾನುಭವಿಗಳನ್ನೂ ಪ್ರತಿನಿಧಿಸದ ಕಾರಣ ಬೆಂಗಳೂರು ನಗರ ಉದ್ಯೋಗ ಮಾರುಕಟ್ಟೆಯು ಹೆಚ್ಚಿನ ಸಂಬಳವನ್ನು ಬೆಂಬಲಿಸುವಂತೆ ತೋರುತ್ತಿಲ್ಲ.

೧೮. ಅರ್ಹತಾ ಮಾನದಂಡಗಳು, ಆಯ್ಕೆ ಮಾನದಂಡಗಳು, ಅರ್ಜಿ ಸಲ್ಲಿಸುವ ವಿಧಾನ ಮತ್ತು ಸಲ್ಲಿಸಬೇಕಾದ ದಾಖಲೆಗಳ ಬಗ್ಗೆ ಹೆಚ್ಚಿನ ಫಲಾನುಭವಿಗಳು ತಿಳಿದಿರುತ್ತಾರೆ. ಆದಾಗ್ಯೂ, ಕೋಲಾರ, ಬೆಳಗಾವಿ, ಬಳ್ಳಾರಿ, ಮೈಸೂರು ಮತ್ತು ಉತ್ತರ ಕನ್ನಡದ ಜಿಲ್ಲೆಗಳಲ್ಲಿ, 'ಭಾಗಶಃ ಜಾಗೃತಿ' ಯ ಪ್ರಮಾಣವು ಸ್ವೀಕಾರ್ಹವಾಗಿಲ್ಲ.

೧೯. ಸಿಇಟಿ ಫಲಾನುಭವಿಗಳಲ್ಲಿ ಒಬ್ಬ ವಿದ್ಯಾರ್ಥಿಗೆ ವಾರ್ಷಿಕ ಖರ್ಚು ವೆಚ್ಚಗಳನ್ನು ನಿಭಾಯಿಸಲು ರೂ. ೨.೦ ಲಕ್ಷ ಬೇಕಾಗುತ್ತದೆ. ಅದೇ ಸಿಇಟಿ ಅಲ್ಲದ ಫಲಾನುಭವಿಗಳಲ್ಲಿ ಒಂದು ವಿದ್ಯಾರ್ಥಿಗೆ ರೂ ೧.೮೦ ಲಕ್ಷಕ್ಕೂ ಹೆಚ್ಚು ವೆಚ್ಚಗಳಿವೆ. ಆಶ್ಚರ್ಯವೆಂದರೆ, ಬೆಂಗಳೂರು ವಿಭಾಗವು ಕಡಿಮೆ ವೆಚ್ಚವನ್ನು (ರೂ ೧.೬೭ ಲಕ್ಷ) ಬಹಿರಂಗಪಡಿಸುತ್ತದೆ. ಜಿಲ್ಲೆಗಳಾದ್ಯಂತ, ಕೊಡಗು ಹೆಚ್ಚಿನ ವೆಚ್ಚವನ್ನು (ರೂ ೪.೧ ಲಕ್ಷ) ಬಹಿರಂಗಪಡಿಸುತ್ತದೆ. ವಿಚಿತ್ರವೆಂದರೆ ಬೆಳಗಾವಿ ಮತ್ತು ಮೈಸೂರು ವಿಭಾಗಗಳಲ್ಲಿನ ಎಲ್ಲಾ ಮೂರು ಜಿಲ್ಲೆಗಳು ಬೆಂಗಳೂರು ನಗರ ಜಿಲ್ಲೆಗಿಂತ ಹೆಚ್ಚಿನ ವೆಚ್ಚವನ್ನು ಬಹಿರಂಗಪಡಿಸುತ್ತವೆ. ಸಿಇಟಿ ಅಲ್ಲದ ಫಲಾನುಭವಿಗಳ ವಿಷಯದಲ್ಲಿ, ಮೈಸೂರು ಜಿಲ್ಲೆಯು ರೂಪಾಯಿ ೩.೭ ಲಕ್ಷಕ್ಕೂ ಹೆಚ್ಚು ವೆಚ್ಚವನ್ನು ಬಹಿರಂಗಪಡಿಸುತ್ತದೆ, ಇದು ಸಿಇಟಿ ಫಲಾನುಭವಿಗಿಂತಲೂ ಹೆಚ್ಚಾಗಿದೆ. ವಿಚಿತ್ರವೆಂದರೆ, ಬೆಂಗಳೂರು ನಗರ ಮತ್ತು ಕಲಬುರಗಿ ಜಿಲ್ಲೆಗಳು ಸಿಇಟಿ ಫಲಾನುಭವಿಗಳಿಗಿಂತ ಹೆಚ್ಚಿನ ಪ್ರಮಾಣದ ಖರ್ಚನ್ನು ಬಹಿರಂಗಪಡಿಸುತ್ತವೆ.

೨೦. ಒಟ್ಟಾರೆಯಾಗಿ, ಅಧ್ಯಯನದ ಅವಧಿಯಲ್ಲಿ ಸಿಇಟಿ ಫಲಾನುಭವಿಯ ಆರಿವು ಸಾಲದ ಮೊತ್ತ ಮತ್ತು ಖರ್ಚು ಮಾಡಿದ ವೆಚ್ಚಗಳ ನಡುವಿನ ವ್ಯತ್ಯಾಸವನ್ನು ಲೆಕ್ಕಹಾಕಿದಾಗ., ಒಬ್ಬ ವಿದ್ಯಾರ್ಥಿಯು ವಾರ್ಷಿಕ ರೂಪಾಯಿ .೩೮,೯೨೯.೮೫ ರ ಹೆಚ್ಚಳವನ್ನು ಭರಿಸಬೇಕಾಗುತ್ತದೆ, ವಿಭಾಗಗಳಾದ್ಯಂತ ಖರ್ಚಿನಲ್ಲಿ ಹೆಚ್ಚಳವನ್ನು ಗಮನಿಸಿದಾಗ ಆಶ್ಚರ್ಯವೆಂಬಂತೆ ಕಲಬುರ್ಗಿ ವಿಭಾಗದಲ್ಲಿ ಸುಮಾರು ರೂ .೭೪,೯೮೪ ಕ್ಕೂ ಹೆಚ್ಚಿನ ಖರ್ಚು ವರದಿಯಾಗಿದೆ.

ಇದು ಬೆಂಗಳೂರು ವಿಭಾಗಕ್ಕಿಂತಲೂ (ರೂ.೬೨,೨೦೭) ಹೆಚ್ಚಾಗಿದೆ. ಮೈಸೂರು ವಿಭಾಗದಲ್ಲಿ ಫಲಾನುಭವಿ ಮಾಡುವ ವೆಚ್ಚಗಳ ಮೊತ್ತ ೧೨,೯೨೨ ರೂ.ರಷ್ಟು ಕಡಿಮೆ ಇದೆ ಮತ್ತು ಬೆಳಗಾವಿ ವಿಭಾಗದಲ್ಲಿ ಈ ಹೆಚ್ಚಳ ಮೈಸೂರು ವಿಭಾಗಕ್ಕಿಂತ ಜಾಸ್ತಿ ಇದ್ದು, ರೂ ೧೪,೧೯೧ ಗಳಷ್ಟಿದೆ. ಜಿಲ್ಲೆಗಳಾದ್ಯಂತ ಗಮನಿಸಿದಾಗ ಫಲಾನುಭವಿಗಳಿಗೆ ಸರ್ಕಾರ ನೀಡಿದ ಸಾಲ ಮತ್ತು ವೆಚ್ಚಗಳ ನಡುವಿನ ಅಂತರ ಕೋಲಾರದಲ್ಲಿ ರೂ.೯೭,೨೧೫ ಗಳಷ್ಟು ಹೆಚ್ಚಿದೆ. ಇದು ಸ್ವೀಕಾರಾರ್ಹವಲ್ಲದಷ್ಟು ಹೆಚ್ಚಿನ ಅಂತರವನ್ನು ಬಹಿರಂಗಪಡಿಸುತ್ತದೆ. ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ ಕಲಬುರಗಿ ವಿಭಾಗದಲ್ಲಿ, ಕಲಬುರಗಿ ಮತ್ತು ಬೀದರ್ ಎರಡೂ ರೂ.೮೮,೦೦೦ ಕ್ಕಿಂತ ಹೆಚ್ಚು ಅಂತರವನ್ನು ಬಹಿರಂಗಪಡಿಸುತ್ತವೆ. ಇವುಗಳು ವರದಿಯಾದ ಅಂಕಿ ಅಂಶಗಳಾಗಿರುವುದರಿಂದ, ವರದಿ ಮಾಡುವಾಗ ಉತ್ಪ್ರೇಕ್ಷೆಯ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಶಿವಮೊಗ್ಗ ಜಿಲ್ಲೆಯು ಸಾಲದ ಮೊತ್ತ ಮತ್ತು ವೆಚ್ಚಗಳ ನಡುವಿನ ಅಂತರದಲ್ಲಿ ಸಕಾರಾತ್ಮಕ ವ್ಯತ್ಯಾಸವನ್ನು ಬಹಿರಂಗಪಡಿಸುತ್ತದೆ. ಫಲಾನುಭವಿ ವರ್ಷದಲ್ಲಿ ಪಡೆದ ಸಾಲಕ್ಕೆ ಹೋಲಿಸಿದರೆ ಕಡಿಮೆ ಖರ್ಚನ್ನು ಸೂಚಿಸುತ್ತದೆ. ಮೈಸೂರು, ಕೊಡಗು, ಬಾಗಲಕೋಟೆ ಮತ್ತು ಉತ್ತರ ಕನ್ನಡ, ಈ ಎಲ್ಲಾ ಜಿಲ್ಲೆಗಳು ಸಾಲದ ಮೊತ್ತ ಮತ್ತು ಖರ್ಚಿನ ಬಾಬ್ತಿನ ನಡುವಿನ ಅಂತರವನ್ನು ರೂಪಾಯಿ ೨೫೦೦೦ ದಿಂದ ೩೨೦೦೦ ರ ನಡುವೆ ದಾಖಲಿಸಿವೆ.

೨೧. ಅರಿವು ಸಾಲದ ಮರುಪಾವತಿ ಸ್ಥಿತಿಗೆ ಸಂಬಂಧಿಸಿದಂತೆ, ಅರ್ಹ ೫೪೯ ಫಲಾನುಭವಿಗಳಲ್ಲಿ ೧೦೧ ಮಂದಿ ಮಾತ್ರ ಮರುಪಾವತಿ ಮಾಡಿದ್ದಾರೆ, ಇದರ ಪ್ರಮಾಣ ಶೇಕಡಾ ೧೮.೪ ರಷ್ಟಿದೆ. ಜಿಲ್ಲೆಗಳಾದ್ಯಂತ ಗಮನಿಸಿದಾಗ ಹಾಸನ ಮತ್ತು ಬಳ್ಳಾರಿಯಲ್ಲಿ ಕ್ರಮವಾಗಿ ಶೇಕಡಾ ೫೩.೧೩ ಮತ್ತು ಶೇಕಡಾ ೪೭.೩೭ ರಷ್ಟು ಫಲಾನುಭವಿಗಳು ಸಾಲ ಮರುಪಾವತಿ ಮಾಡಿರುವುದು ತುಲನಾತ್ಮಕವಾಗಿ ಉತ್ತಮ ಕಾರ್ಯಕ್ಷಮತೆಯನ್ನು ಸೂಚಿಸುತ್ತದೆ. ಬೀದರ್ ಮತ್ತು ಕೊಡಗು ಜಿಲ್ಲೆಗಳಲ್ಲಿ ಸಾಲ ಮರುಪಾವತಿ ಪ್ರಮಾಣವು ಕ್ರಮವಾಗಿ ೩೭.೪% ಮತ್ತು ೩೭.೫% ಶೇಕಡಾಗಳಷ್ಟಿದ್ದು ಉತ್ತಮವಾಗಿದೆ. ಆದರೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಇದು ತುಂಬಾ ಕಳಪೆಯಾಗಿದೆ (೧.೪೯%). ವರ್ಗಗಳಾದ್ಯಂತ ಗಮನಿಸಿದಾಗ ವರ್ಗ III ಬಿ ಫಲಾನುಭವಿಗಳ ವಿಷಯದಲ್ಲಿ ಸಾಲ ಮರುಪಾವತಿ ಪ್ರಮಾಣ ಹೆಚ್ಚು ಉತ್ತಮವಾಗಿದೆ, ಅವರಲ್ಲಿ ೩೦ ಪ್ರತಿಶತ ಜನರು ಸಾಲವನ್ನು ಮರುಪಾವತಿಸುತ್ತಿದ್ದಾರೆ. ವರ್ಗ I ಮತ್ತು ವರ್ಗ IIಎ ಗಳ ಸಂದರ್ಭದಲ್ಲಿ ಕಡಿಮೆ ಮಟ್ಟದ ಮರುಪಾವತಿಯನ್ನು ಕಾಣಬಹುದು. ಅದರಲ್ಲೂ ಎರಡನೆಯದು (ವರ್ಗ IIಎ) ಅರಿವು ಯೋಜನೆಯ ಅತಿ ದೊಡ್ಡ ಫಲಾನುಭವಿಗಳ ಗುಂಪಾಗಿದೆ.

೨೨. ಒಟ್ಟು ೯೭ ಫಲಾನುಭವಿಗಳು ಇತರ ಮೂಲಗಳಿಂದ ಸಾಲ ಪಡೆದಿರುವುದು ಕಂಡುಬರುತ್ತದೆ. ಪ್ರದೇಶವಾರು ಇದನ್ನು ಗಮನಿಸಿದಾಗ ಇದರ ಪ್ರಮಾಣ ಕಡಿಮೆ ಇದ್ದು ಕೇವಲ ಶೇ ೮.೬ ರ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರದೇಶದಾದ್ಯಂತ, ಅಂಕಿ ಅಂಶಗಳನ್ನು ಗಮನಿಸಿದಾಗ ಬೆಳಗಾವಿ, ಕೋಲಾರ, ಮೈಸೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಶೇಕಡಾ ೧೦.೦ ಕ್ಕಿಂತಲೂ ಹೆಚ್ಚು ಫಲಾನುಭವಿಗಳು ಇತರ ಮೂಲಗಳಿಂದ ಸಾಲ ಪಡೆದಿರುವುದು ವರದಿಯಾಗಿದೆ. ಅರಿವು ಫಲಾನುಭವಿಗಳಲ್ಲಿ ಕ್ರಮವಾಗಿ ೩೪.೦ ಮತ್ತು ೨೫. ೦ ಪ್ರತಿಶತದಷ್ಟು ಜನರು ವರದಿ ಮಾಡಿದಂತೆ ಬ್ಯಾಂಕುಗಳು ಮತ್ತು ಹಣ ಕೈ ಸಾಲ ನೀಡುವವರು ಸಾಲದ ಮುಖ್ಯ ಮೂಲವಾಗಿ ಹೊರಹೊಮ್ಮಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಬ್ಯಾಂಕ್ ಸಾಲಗಳು ಹೆಚ್ಚಿದ್ದರೆ, ಮೈಸೂರು ಜಿಲ್ಲೆಯಲ್ಲಿ ಖಾಸಗಿ ಹಣ ಸಾಲ ನೀಡುವವರ ಬಳಿ ಸಾಲ ಪಡೆಯಲಾಗಿದೆ.

5.2 ಸಲಹೆಗಳು ಮತ್ತು ಶಿಫಾರಸ್ಸುಗಳು

೧. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಉಪಯುಕ್ತತೆ ಮತ್ತು ಹೆಚ್ಚಿನ ಲಾಭವನ್ನು ಪರಿಗಣಿಸಿ ಅರಿವು ಕಾರ್ಯಕ್ರಮವನ್ನು ಮುಂದುವರೆಸಬಹುದಾಗಿದೆ. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಸಾಮಾನ್ಯ ಪದವಿ ಶಿಕ್ಷಣ ಕಾರ್ಯಕ್ರಮ ಪಡೆಯುವಲ್ಲಿ ನೆರವಾಗುವಂತೆ ಈ ಯೋಜನೆಯನ್ನು ಮತ್ತಷ್ಟು ವಿಸ್ತರಿಸಬಹುದು.

೨. ನಿರ್ದಿಷ್ಟ ಹಿಂದುಳಿದ ಸಮುದಾಯಗಳಾದ ಅಲೆಮಾರಿ ಮತ್ತು ಅರೆ ಅಲೆಮಾರಿ, ಸವಿತಾ, ಕುಂಬಾರ, ತಿಗಳ, ಉಪ್ಪಾರ ಸಮುದಾಯಗಳಿಗೆ ಈ ಯೋಜನೆಯು ವ್ಯಾಪ್ತಿ ಮತ್ತು ಗುರಿಗಳನ್ನು ಹೊಂದಿಲ್ಲ. ಈ ಅತ್ಯಂತ ದುರ್ಬಲ ಸಮುದಾಯಗಳ ಮನೆಗಳನ್ನು ಅದರಲ್ಲೂ ವಿಶೇಷವಾಗಿ ಮೊದಲ ತಲೆಮಾರಿನ ಕುಟುಂಬಗಳು. ತಲುಪಲು ವಿನ್ಯಾಸಗೊಳಿಸಲಾಗಿರುವ ಕಾರ್ಯಕ್ರಮದ ವಿಧಾನವನ್ನು ರಾಜ್ಯವು ಗಂಭೀರವಾಗಿ ಪರಿಶೀಲಿಸುವ ಅಗತ್ಯವಿದೆ.

೩. ಅರಿವು ಕಾರ್ಯಕ್ರಮದಲ್ಲಿ ಹುಡುಗಿಯರ ಪ್ರಾತಿನಿಧ್ಯ ಕಡಿಮೆ ಇರುವುದನ್ನು ಪರಿಗಣಿಸಿ ಯೋಜನೆಯಲ್ಲಿ ಹೆಣ್ಣುಮಕ್ಕಳಿಗೆ ಅದರಲ್ಲೂ ವಿಶೇಷವಾಗಿ ಹಿಂದುಳಿದ ಪ್ರದೇಶಗಳಲ್ಲಿನ ಹೆಣುಮಕ್ಕಳಿಗೆ ಶೇಕಡ ೩೦ ರಷ್ಟು ಆದ್ಯತೆ ನೀಡುವುದನ್ನು ಶಿಫಾರಸ್ಸು ಮಾಡಲಾಗಿದೆ.

೪. ಈ ಕಾರ್ಯಕ್ರಮದಿಂದ ನಗರ ಮತ್ತು ಅರೆ ನಗರದ ಫಲಾನುಭವಿಗಳಿಗೆ ಹೆಚ್ಚಾಗಿ ಅನುಕೂಲವಾಗಿರುವುದು ಕಂಡು ಬರುತ್ತದೆ. ಆದ್ದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಕಾರ್ಯಕ್ರಮದ ಗುರಿ ಮತ್ತು ವ್ಯಾಪ್ತಿಯನ್ನು ಹೆಚ್ಚಿಸಿ ಅವರನ್ನು ನಗರ ವಲಯಗಳಿಗೆ ಸಮನಾಗಿ ತರಲು ಅಧ್ಯಯನವು ಶಿಫಾರಸ್ಸು ಮಾಡುತ್ತದೆ.

೫. ಒಟ್ಟಾರೆಯಾಗಿ ಕಾರ್ಯಕ್ರಮದ ವ್ಯಾಪ್ತಿ ಮತ್ತು ಲಭ್ಯತೆ ಯನ್ನು ಸುಧಾರಿಸುವ ನಿಟ್ಟಿನಲ್ಲಿ ಕಾರ್ಯಕ್ರಮದ ಗುರಿ ಮತ್ತು ಹಂಚಿಕೆಯನ್ನು ನಿಗದಿಗೊಳಿಸುವಲ್ಲಿ ಸೂಕ್ತ ಕಾರಣಗಳನ್ನು ನೀಡುವುದರೊಂದಿಗೆ ಕಾರ್ಯವಿಧಾನವನ್ನು ಸುಧಾರಿಸುವ ಅಗತ್ಯವಿದೆ. ಫಲಾನುಭವಿಗಳ ಆಯ್ಕೆ ನಿಷ್ಪಕ್ಷಪಾತ ಮತ್ತು ಪಾರದರ್ಶಕವಾಗಿರಲು ಜಿಲ್ಲಾ ಕೇಂದ್ರಿತವಾದ ಕಾರ್ಯತಂತ್ರಗಳನ್ನು ರೂಪಿಸಬಹುದು.

೬. ಕಾಲಾನಂತರದಲ್ಲಿ ಯಾವುದೇ ಕಾರ್ಯಕ್ರಮದ ಪ್ರಗತಿ ಮತ್ತು ಪ್ರಭಾವವನ್ನು ಪತ್ತೆಹಚ್ಚಲು ಮಾನದಂಡಗಳ ದತ್ತಾಂಶ ವ್ಯವಸ್ಥೆ ಮತ್ತು ಸರಿಯಾದ ಬೇಸ್ ಲೈನ್ ಡೇಟಾ ಸೆಟ್ ಗಳನ್ನು ಅಭಿವೃದ್ಧಿಪಡಿಸುವ ಅವಶ್ಯಕತೆಯಿದೆ. ಇಂತಹ ವ್ಯವಸ್ಥೆಯ ಸರ್ಕಾರಗಳಿಗೆ ಸಾರ್ವಜನಿಕ ಸಂಪನ್ಮೂಲಗಳಲ್ಲಿ ಹೂಡಿಕೆಗಳನ್ನು ಸಮರ್ಥಿಸಲು ಹಾಗೂ ವಿವಿಧ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಅನುವು ಮಾಡಿಕೊಡುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಡಿ.ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸಂಖ್ಯಾಶಾಸ್ತ್ರೀಯ ಘಟಕವೊಂದನ್ನು ಆರಂಭಿಸಬಹುದು. ಇದನ್ನು ಸಂಖ್ಯಾಶಾಸ್ತ್ರೀಯ ದತ್ತಸಂಚಯವನ್ನು ಉತ್ಪಾದಿಸಲು ಮಾತ್ರವಲ್ಲದೇ ವಿವಿಧ ಶಿಕ್ಷಣ ಕಾರ್ಯಕ್ರಮಗಳ ಸರಿಯಾದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೂ ಪರಿಗಣಿಸಬಹುದು ಎಂದು ಶಿಫಾರಸ್ಸು ಮಾಡಲಾಗಿದೆ.

೭. ಎಂಜಿನಿಯರಿಂಗ್‌ನಂತಹ ಅತ್ಯಂತ ಆಕರ್ಷಕ ಕೋರ್ಸ್‌ನಲ್ಲಿ ಹಿಂದುಳಿದ ವರ್ಗದಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿ ಫಲಾನುಭವಿಗಳ ಉಪಸ್ಥಿತಿಯನ್ನು ಈ ಜನಸಂಖ್ಯೆಯ ವಿಭಾಗದಲ್ಲಿ ಪ್ರವೇಶವನ್ನು ಹೆಚ್ಚಿಸುವ ಮತ್ತು ಆರ್ಥಿಕ ಚಲನಶೀಲತೆಯನ್ನು ಉತ್ತೇಜಿಸುವ ಹಂತದಿಂದ ಸಮರ್ಥಿಸಬಹುದು, ಆದರೂ ಇನ್ನೂ ಹೆಚ್ಚಿನ ಪ್ರಮುಖ ಪ್ರಶ್ನೆಗಳು ಮುನ್ನೆಲೆಗೆ ಬರುತ್ತವೆ. ಉದಾಹರಣೆಗೆ, ಈ ವಿದ್ಯಾರ್ಥಿಗಳಲ್ಲಿ ಹಿಂದುಳಿದಿರುವಿಕೆಯ ಸ್ವರೂಪ ಮತ್ತು ದುರ್ಬಲತೆಯ ಸ್ವರೂಪ ಏನು ಮತ್ತು ಮುಖ್ಯವಾಗಿ ಅವರಲ್ಲಿ ಎಷ್ಟು ಮಂದಿ ನಿಜವಾಗಿಯೂ ಮೊದಲ ತಲೆಮಾರಿನ ಎಂಜಿನಿಯರ್‌ಗಳು

ಎಂಬ ಅಂಶಗಳು ಮಹತ್ವವನ್ನು ಪಡೆದುಕೊಳ್ಳುತ್ತಾರೆ. ಆದ್ದರಿಂದ, ವಿವಿಧ ವಿಭಾಗಗಳ ಅಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆಮಾಡುವಾಗ ಇಲಾಖೆಯು ಈ ಮಾನದಂಡವನ್ನು ಪರಿಗಣಿಸಬಹುದು.

೮. ಫಲಾನುಭವಿಗಳು ಜಾಮೀನು, ಅಫಿಡವಿಟ್ ಗಳು ಮತ್ತು ಇತರ ಹಲವಾರು ದಾಖಲೆಗಳನ್ನು ಒದಗಿಸುವಲ್ಲಿನ ತೊಂದರೆಗಳ ಬಗ್ಗೆ ಮಾಹಿತಿ ನೀಡಿರುವುದನ್ನು ಪರಿಗಣಿಸಿ ಇಲಾಖೆಯು ಕೆಲವು ಕಾರ್ಯವಿಧಾನಗಳನ್ನು ಸುವ್ಯವಸ್ಥಿತಗೊಳಿಸುವುದು ಮತ್ತು ಸರಳೀಕರಿಸುವುದು ಅವಶ್ಯಕವಾಗಿದೆ. ಆದ್ದರಿಂದ ಖಾತರಿ/ಸಾಕ್ಷಿಗಳನ್ನು ಒದಗಿಸಬೇಕಾಗಿರುವ ಪ್ರಸ್ತುತ ವ್ಯವಸ್ಥೆಯನ್ನು, ಫಲಾನುಭವಿಗಳ ಸ್ವಂತ ಕುಟುಂಬವು ಒದಗಿಸುವ ಪರ್ಯಾಯ ಅಧಿಕೃತ ಪುರಾವೆ ವ್ಯವಸ್ಥೆಗೆ ಬದಲಾಯಿಸುವುದು ಸೂಕ್ತವೆನಿಸುತ್ತದೆ.

೯. ಕೆಲವು ಕೋರ್ಸುಗಳಲ್ಲಿ ಫಲಾನುಭವಿಗಳಿಗೆ ತಗುಲುವ ಹೆಚ್ಚಿನ ಖರ್ಚಿನ ದೃಷ್ಟಿಯಿಂದ ಪ್ರಸ್ತುತ ಶಿಕ್ಷಣದ ಸಾಲದ ಮೊತ್ತವನ್ನು ವೈದ್ಯಕೀಯ ಶಿಕ್ಷಣ ಕೋರ್ಸುಗಳಿಗೆ ವಾರ್ಷಿಕವಾಗಿ ರೂ ೨.೦ ಲಕ್ಷಕ್ಕೆ ಹೆಚ್ಚಿಸುವುದು ವಿದ್ಯಾರ್ಥಿಗಳಿಗೆ ಅನುಕೂಲಕರವಾಗಲಿದೆ.

೧೦.ಫಲಾನುಭವಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಾಲವನ್ನು ಪಾವತಿಸದಿರುವುದು ಗಂಭೀರ ವಿಷಯವಾಗಿದೆ. ಇದಕ್ಕೆ ನಿರುದ್ಯೋಗವು ಪ್ರಮುಖ ಅಂಶವೆಂದು ತೋರುತ್ತದೆಯಾದರೂ, ಉದ್ಯೋಗ ಹೊಂದಿದ ಫಲಾನುಭವಿಗಳಲ್ಲಿಯೂ ಸಹ ಮರುಪಾವತಿ ಮಾಡದ ಉದಾಹರಣೆಗಳಿವೆ. ಕೆಲವು ವಿದ್ಯಾರ್ಥಿಗಳು ಹಣಕಾಸಿನ ಅಡಚಣೆಯನ್ನು ಎದುರಿಸುತ್ತಾರೆ ಮತ್ತು ಸಾಲ ಮರುಪಾವತಿಗೆ ನಿಜವಾದ ಕಾರಣಗಳನ್ನು ಹೊಂದಿದ್ದಾರೆ ಎಂಬ ಅಂಶವನ್ನು ಪರಿಗಣಿಸಿ, ಸಾಲ ಮರುಪಡೆಯುವಿಕೆಗಾಗಿ ಕಾಯುವ ಅವಧಿಯನ್ನು ಉದ್ಯೋಗವನ್ನು ಬಯಸುವವರಿಗೆ ಅನುವು ಮಾಡಿಕೊಡಲು ವಿಸ್ತರಿಸಬಹುದಾಗಿದೆ. ಪರ್ಯಾಯವಾಗಿ ಗಂಭೀರ ಸಮಸ್ಯೆಗಳನ್ನು/ಅಡಚಣೆಗಳನ್ನು ಅನುಭವಿಸುವವರಿಂದ ಸಾಲವನ್ನು ಹಿಂಪಡೆಯಲು ಈಗಾಗಲೇ ವಿಧಿಸಿರುವ ಬಡ್ಡಿಯ ದರವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಪರಿಶೀಲಿಸಬಹುದು. ಮತ್ತೊಂದೆಡೆ ಈಗಾಗಲೇ ಉದ್ಯೋಗದಲ್ಲಿರುವವರಿಂದ ಸಾಲ ಮರುಪಡೆಯುವಿಕೆ ಕಷ್ಟವಾಗುತ್ತಿದ್ದಲ್ಲಿ ಕೆಲವು ಗಂಭೀರ ಶಿಸ್ತು ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

೧೧. ಹಿಂದುಳಿದ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಮೈಸೂರು ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಡಿಡಿಯುಡಿಬಿಸಿ ನಿಗಮ ಮಾಹಿತಿಯನ್ನು ಪ್ರಚಾರಮಾಡಲು ಕಾರ್ಯತಂತ್ರಗಳನ್ನು ರೂಪಿಸುವ ಅಗತ್ಯವಿದೆ. ಅಂತೆಯೇ, ಈ ಹಿಂದುಳಿದ ಜಿಲ್ಲೆಗಳಲ್ಲಿ ಯೋಜನೆಯ ವ್ಯಾಪ್ತಿ ಹೆಚ್ಚಿಸಲು ಮತ್ತು ಹೆಚ್ಚು ಜನರನ್ನು ತಲುಪಲು ಅರಿವು ಯೋಜನೆ ಕುರಿತಂತೆ ಜಾಗೃತಿ ಮೂಡಿಸುವ ಮತ್ತು ಆಡಳಿತಾತ್ಮಕ ಬೆಂಬಲ ವ್ಯವಸ್ಥೆಯನ್ನು ಬಲಗೊಳಿಸುವ ಕಾರ್ಯಗಳನ್ನು ಕೈಗೊಳ್ಳಬಹುದು.

೧೨.ಕಾರ್ಯಕ್ರಮದ ಪರಿಶೀಲನೆ ನಡೆಸಲು ಇಲಾಖೆಯು ದುರ್ಬಲ ಮೇಲ್ವಿಚಾರಣಾ ವ್ಯವಸ್ಥೆಯನ್ನು ಹೊಂದಿದೆ ಎಂದು ಗಮನಿಸಲಾಗಿದೆ. ಆದ್ದರಿಂದ ವಿದ್ಯನ್ಮಾನ (ಡಿಜಿಟಲ್) ಸಾಫ್ಟ್‌ವೇರ್ ವ್ಯವಸ್ಥೆಗಳ ಬಳಕೆಯ ಮೂಲಕ ಸಾಲದ ಫಲಾನುಭವಿಗಳನ್ನು ಪತ್ತೆಹಚ್ಚುವ ಮತ್ತು ದಾಖಲೆಯ ಉಸ್ತುವಾರಿ ದೃಷ್ಟಿಯಿಂದ ಇಲಾಖೆಯು ಕಾರ್ಯಕ್ರಮದ ಜಿಲ್ಲಾ ಮಟ್ಟದ ಮೇಲ್ವಿಚಾರಣೆಯನ್ನು ಹೆಚ್ಚಿಸಬೇಕು ಎಂದು ಬಲವಾಗಿ ಶಿಫಾರಸ್ಸು ಮಾಡುತ್ತದೆ.

೧೩.ಮೊದಲ ಸೆಮಿಸ್ಟರ್ / ವರ್ಷದ ಸಾಲವನ್ನು ನೇರವಾಗಿ ಕಾಲೇಜಿಗೆ ಪಾವತಿಸಬಹುದು. ಆದರೆ ಎರಡನೇ ವರ್ಷದಿಂದ ಕಾಲೇಜು ಶುಲ್ಕವನ್ನು ಪಾವತಿಸುವ ಸಮಯದಲ್ಲಿ ವಿದ್ಯಾರ್ಥಿಗೆ ನೀಡಬಹುದು. ವಿದ್ಯಾರ್ಥಿಗಳು ಈ ಮೊತ್ತವನ್ನು

ಕಾಲೇಜಿಗೆ ಶುಲ್ಕವಾಗಿ ಪಾವತಿಸಬಹುದು. ಇದು ಶುಲ್ಕದ ಮೊತ್ತವನ್ನು ಒಟ್ಟುಗೂಡಿಸುವ ವಿದ್ಯಾರ್ಥಿಗಳ ಮತ್ತು ಪೋಷಕರ ಮೇಲಿನ ಹೊರೆ ಕಡಿಮೆ ಮಾಡುತ್ತದೆ.

೧೪.ವಿವಿಧೆಡೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಪರಿಣಾಮ ಬೀರುವ ಪ್ರದೇಶ ಸೀಮಿತ ಅಂಶಗಳನ್ನು ಗುರುತಿಸಲು ಮತ್ತು ಅರ್ಥಮಾಡಿಕೊಳ್ಳಲು ಪ್ರಕರಣ ಅಧ್ಯಯನಗಳಲ್ಲಿ ಹೆಚ್ಚಿನ ಸಂಶೋಧನೆ ಮಾಡಬಹುದು..

ಉಲ್ಲೇಖಗಳು / ಗ್ರಂಥಸೂಚಿ

Barr & Crawford, 2005 –Barr N,. & I Crawford 2005. Financing Higher Education: Answers from the UK. First Edition, Routledge, NY

Chapman B, 2006. Government Managing Risk: Income Contingent Loans for Social & Economic Progress,. First Edition, Routledge, ISBN-10:1134444338, pp 240

Chattopadhyaya S, 2007, Exploring alternative sources of financing higher education, EPW Oct 20, pp 4251-59

Chingos, Matthew M. 2016 "who would benefit most from free college?"

Brookings Report, USA based on excerpts from Kalamazoo Promise, Michigan; http://blog.ominox.org/should college-be-free/).

Christie, H & M Munro 2003: The Logic of Loans: Students' perceptions of the costs and benefits of the student loans British journal Of Sociology, Education 24:621-636. DOI:10.1080/0142569032000127170

Daniel Rivero,2017 ["The debt trap: how the student loan industry betrays young Americans "The Guardian" ; https://amp.the guardian.com/money/2017/sep/06/]

Debi S 2010. Loan financing to higher education: Experiences of Bank financing in a less developed region, CMDR Monograph Series No.56, CMDR, Dharwad

Douglas A.Webber, 2016- Are college costs worth it? How ability, major, and debt affect the returns to schooling, Economics of Education Review53 (2016)

Douglas Webber, Temple University. May 23, 2017: Inequality, Colleges & Universities, Scholars Strategy Network; http://doi.org/10.1016/j.econedurev.2016.04.007)

Hongwei Yu, Univ of Texas, Austin: At Issue: the Relationship between Student Loans and Low Income Students' Baccaulaureate Attainment: A Literature Review. The Community College Enterprise, Spring 2014 [https://www.researchgate.net/publication/281686878]. Even in the US the degree completion rates among low income

Jason Delisle “Two Student loan studies everyone missed” Brookings Report, Dec 7, 2017; in a novel research study released by Constantine Yannelis of New York University (2016),

Johnstone, D.B., and P.N. Marcucci. 2010. *Financing higher education worldwide: Who pays? Who should pay?* Baltimore: Johns Hopkins University Press. Particularly Chapters 6 and 7.Google Scholar

John F Brugel. Gary P.Johnson, Larry L.”the demand for student loans in higher education: A study of preferences and attitudes” Research in Higher Education, March 1977, vol.6 (i)pp 65-83-

Monica Bhole (2006), Federal Grad PLUS loan program affected private lending for graduates and professional schools. [https://www.brrokings.edu/reseach/two student –loan studies – everyone-missed/]

National Bureau of Economic Research Paper, 2018 “The end of free college in England: implications for quality, enrolments & equity” nber.org/papers/w23888.

NFSAS and undermined its recovery ratio (“George Hull, University of Cape Town, 2016”; the conversation.com/amp/-66145).

Nicholas Barr (London school of economics and political science) - “University fees: how to structure a system that benefits poor students” {the conversation.com. https://the conversation.com/university-fees-how- to- structure-a-system-that-benefits-poor-students-49675)

Nico Cloete [http://the conversation.com / Sep 28, 2016/the wrong questions are being asked in the free higher education debate -66085].

Ravindra Dholakia, Vijaya Sherry Chand, Rajeev Sharma (oct 26, 2016), https://www. livemint.com/Opinion --Financing Higher education-Livemint

Senjuti Patra, Tridip Ray, Arka Roy Chaudhury, 2017: Impact of Educational Loans on Higher Education: The Indian experience, ISI, ND,

Shen, Hua, and A. Ziderman. 2009. Student loans repayment and recovery: International comparisons. *Higher Education* 53 (3): 315–333

Srinivasan, R & D Das 2011, Analysis of education loan: A case study of national capital territory of Delhi. International Journal of management strategy

Tilak, JBG, 2004. Public subsidies education in India, EPW, 39: 343-359

Usher A 2004, Are the needy poor? Distribution of student loans and grants by family income quantile in CanadaEducation policy Institute, Canada

Usher, A 2005Global Debt partterns: an international comparison of student loan burdens and repayment conditions, First edition, Educatioanl policy institute, Canada

Woodhall M 2007, Funding higher education: the contribution of economic thinking to debate and Policy development, Education working paper Series No.8, WB Washington DC

Ziderman, A 2002, Financing Student Loans in Thailand: Revolving full or open ended commitment? Economic Education Review 21; 367-380 DOI:10.1016/50272-7757(01)00024-3

Ziderman, A. 2002. Alternative objectives of national student loan schemes: Implications for design, evaluation and policy. The Welsh Journal of Education 11 (1): 37–47.Google Scholar

Ziderman, A. 2013. Student loans schemes in practice: Global perspectives. In Student financing of higher education: A comparative perspective, International studies in higher education series, ed. D.E. Heller and C. Calendar. New York: Routledge. Google Scholar

Ziderman, A, and M. Bevc (Eds.). 2009, Financial support to students through student loans, European centre for higher education (CEPES) [Special issue]. Higher Education in Europe, 34(2).Google Scholar

Ziderman, A., and International Institute for Educational Planning. 2004. Policy options for student loan schemes: Lessons from five Asian case studies. Paris: UNESCO.Google Scholar

Ziderman A. (2017) Experience with Student Loans, Higher Education. In: Shin J., Teixeira P. (eds) Encyclopedia of International Higher Education Systems and Institutions. Springer, Dordrecht].

ಅನುಬಂಧ

ವ್ಯಕ್ತಿಗತ ಸಂದರ್ಶನಗಳು ಮತ್ತು

ಕೇಂದ್ರೀಕೃತ ಗುಂಪು ಚರ್ಚೆಗಳು ವಿಶ್ಲೇಷಣೆ

ಐಡಿಎಸ್ ಮತ್ತು ಎಫ್‌ಜಿಡಿಗಳ ಮೂಲಕ ಸಂಗ್ರಹಿಸಿದ ಗುಣಾತ್ಮಕ ಮಾಹಿತಿ / ಡೇಟಾವನ್ನು ನಾವು ವರದಿಯಲ್ಲಿ ಬಳಸಲು ಸೂಕ್ತವಾದಲ್ಲೆಲ್ಲಾ ಬಳಸಿದ್ದೇವೆ. ಈ ವಿಭಾಗದಲ್ಲಿ, ನಾವು ಐಡಿಐಗಳು ಮತ್ತು ಎಫ್‌ಜಿಡಿಗಳ ಮೂಲಕ ಸಂಗ್ರಹಿಸಿದ ವಿಭಿನ್ನ ಭಾಗೀದಾರರ ಅಭಿಪ್ರಾಯಗಳನ್ನು ಪ್ರಸ್ತುತಪಡಿಸಲಾಗಿದೆ. ಒಟ್ಟಾರೆಯಾಗಿ, ೪೦ ಐಡಿಐಗಳನ್ನು ನಡೆಸಲಾಯಿತು (ಟಿಒಆರ್ ಪ್ರಕಾರ). ಅದರ ವಿವರಗಳು ಹೀಗಿವೆ:

೧. ಜಿಲ್ಲಾ ವ್ಯವಸ್ಥಾಪಕರು / ಸದಸ್ಯ ಕಾರ್ಯದರ್ಶಿಗಳು = ೧೨ (೧೨ ಜಿಲ್ಲೆಗಳಲ್ಲಿ ತಲಾ ಒಬ್ಬರು)

೨. ಜಿಲ್ಲಾ ಮಟ್ಟದಲ್ಲಿ ಸಂಬಂಧಿತ ಇಲಾಖೆ ಅಧಿಕಾರಿಗಳು = ೧೨ (೧೨ ಜಿಲ್ಲೆಗಳಲ್ಲಿ ತಲಾ ಒಬ್ಬರು)

೩. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು = ೧೨ (೧೨ ಜಿಲ್ಲೆಗಳಲ್ಲಿ ತಲಾ ಒಬ್ಬರು)

೪. ರಾಜ್ಯ ಮಟ್ಟದ ಅಧಿಕಾರಿಗಳು = ೪ (ಡಿಡಿಯುಬಿಸಿಡಿಸಿ ಮತ್ತು ಕೆಇಎ).

ಕೆಳಗಿನ ಕೋಷ್ಟಕ –೪.೬೭ ರಿಂದ, ವಿಭಿನ್ನ ಭಾಗೀದಾರರಿಂದ ಪ್ರತಿಕ್ರಿಯೆಗಳನ್ನು ಕಾಣಬಹುದು.

ಅನುಬಂಧ ಕೋಷ್ಟಕ 1 – ಪ್ರಮುಖ ಪ್ರಶ್ನೆಗಳಿಗೆ ಐಡಿಐ ಮೂಲಕ ಪಡೆಯಲಾದ ಪ್ರತಿಕ್ರಿಯೆಗಳು

ಪ್ರಮುಖ ಪ್ರಶ್ನೆಗಳು	ಜಿಲ್ಲಾ ವ್ಯವಸ್ಥಾಪಕರು ಮತ್ತು ಹಿಂದುಳಿದ ವರ್ಗಗಳ ನಿಗಮ	ಜಿಲ್ಲಾ ಮಟ್ಟದ ಲೈನ್/ಸಂಬಂಧಿತ ಇಲಾಖೆಯ ಅಧಿಕಾರಿಗಳು	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು	ರಾಜ್ಯ ಮಟ್ಟದ ಅಧಿಕಾರಿಗಳು ಮತ್ತು ಕೆಇಎ ಅಧಿಕಾರಿಗಳು	ಅಭಿಪ್ರಾಯ
ಅರಿವು ಸಾಲದ ಮುಂದುವರಿಕೆ	ಹೌದು	ಹೌದು	ಹೌದು	ಹೌದು	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಕೋರ್ಸ್ ಪೂರ್ಣಗೊಳಿಸಲು ಇದು ತುಂಬಾ ಉಪಯುಕ್ತವಾಗಿದೆ.
ಅರಿವು ವ್ಯಾಪ್ತಿಯನ್ನು ಹೆಚ್ಚಿಸುವುದು ಮತ್ತು ವಿಸ್ತರಿಸುವುದು	–	–	–	ಹೌದು	–
ಫಲಾನುಭವಿ ಆಯ್ಕೆ ವಿಧಾನ–ಸಮಸ್ಯೆಗಳು ಮತ್ತು ವಿಷಯಗಳು	ಅರ್ಜಿದಾರರಿಂದ ಸಮಯಕ್ಕೆ ಸರಿಯಾಗಿ ದಾಖಲೆ ಪರಿಶೀಲನೆ ಮತ್ತು ಮೂಲ ದಾಖಲೆಗಳ ಸಲ್ಲಿಕೆ. ಅರ್ಜಿಯ ಸಂಖ್ಯೆಯಲ್ಲಿ ಹೆಚ್ಚಳ, ವರ್ಗದ ಪ್ರಕಾರ ಅರ್ಜಿಯನ್ನು ವಿತರಿಸುವುದು ಕಷ್ಟ–ಕಡಿಮೆ ಪ್ರಮಾಣದ ಅಯವ್ಯಯ, ಹೆಚ್ಚಿನ ಬೇಡಿಕೆ, ಭೌತಿಕ ಗುರಿ ಜಿಲ್ಲೆಯ ಅಗತ್ಯವನ್ನು ಆಧರಿಸಿರಬೇಕು	–	ಕೇಂದ್ರ ಕಚೇರಿಯಲ್ಲಿ ಭೌತಿಕ ಗುರಿಯನ್ನು ನಿಗದಿಪಡಿಸಲಾಗುತ್ತದೆ, ಆ ಅವಶ್ಯಕತೆಗಳ ಪ್ರಕಾರ, ಸಮಿತಿಯು ಸಾಲ ಮಂಜೂರಾತಿಯನ್ನು ನಿರ್ಧರಿಸುತ್ತದೆ ಇತರ ಹಿಂದುಳಿದ ಜನಸಂಖ್ಯೆಯ ಆಧಾರದ ಮೇಲೆ, ಕೇಂದ್ರ ಕಚೇರಿ ಜಿಲ್ಲೆಗಳಿಗೆ ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ನೀಡುತ್ತದೆ ೭೦ ಮತ್ತು ೩೦ ಪ್ರತಿಶತ ಮಾನದಂಡಗಳ ಪ್ರಕಾರ ಭೌತಿಕ ಮತ್ತು ಆರ್ಥಿಕ	ಇಲ್ಲ	–

	ಅಗತ್ಯ ಭದ್ರತಾ ಠೇವಣಿ ದಾಖಲೆಗಳನ್ನು ಸಮಯಕ್ಕೆ ಸರಿಯಾಗಿ ಸಲ್ಲಿಸಲು ವಿಫಲವಾಗಿದೆ ಆಯ್ಕೆ ಸಮಿತಿಯಿಂದ ಅನುಮೋದನೆ ಪಡೆಯಲು ಅರ್ಜಿಗಳ ಕೊರತೆ ಪ್ರವೇಶಾತಿಯ ನಂತರ ಸಾಲದ ಮೊತ್ತ ಬಿಡುಗಡೆಯಾಗುತ್ತದೆ.		ಗುರಿಗಳನ್ನು ಕೇಂದ್ರ ಕಚೇರಿಯಿಂದ ನಿಗದಿಪಡಿಸಲಾಗುತ್ತದೆ ಯೋಜನೆಯ ಮಾನದಂಡಗಳ ಪ್ರಕಾರ, ಕ್ಯಾಟಗರಿ– I ಮತ್ತು ಕ್ಯಾಟಗರಿ– II ೭೦%, ಕ್ಯಾಟಗರಿ– IIIಎ, ಕ್ಯಾಟಗರಿ– III ಬಿ, ೩೦% ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಪ್ರತಿ ರೋಸ್ಟರ್ ಮತ್ತು ಸ್ಕೀಮ್ ಮಾರ್ಗಸೂಚಿಯಪ್ರಕಾರ ಮತ್ತು ಸಿಇಟಿ ಶ್ರೇಯಾಂಕದ ಧಾರದ ಮೇಲೆ ಅಭ್ಯರ್ಥಿಯನ್ನು ಗುರುತಿಸಲಾಗಿದೆ		
ಸಾಲದ ಮೊತ್ತದ ಸಮರ್ಪಕತೆ	–	–	–	ವೈದ್ಯಕೀಯ ಶಿಕ್ಷಣವನ್ನು ಹೊರತುಪಡಿಸಿ ಎಲ್ಲರಿಗೂ ಸಾಕಾಗುತ್ತದೆ. ಅದನ್ನು ಹೆಚ್ಚಿಸಬಹುದು.	ಸಾಲದ ಮೊತ್ತದ ಸಮರ್ಪಕತೆ
ಹಿಂದುಳಿದ ವಿದ್ಯಾರ್ಥಿಗಳಿಗೆ ಸಾಲದ ಲಾಭ ಮತ್ತು ಉಪಯುಕ್ತತೆ	–	–	ಪ್ರಸ್ತುತ ಬೇಡಿಕೆಯ ಆಧಾರದ ಮೇಲೆ ಮಂಜೂರಾದ ಹಣಕಾಸು ಸಾಕಾಗುವುದಿಲ್ಲ.	ಹೌದು	–
ಪ್ರಸ್ತುತ ಸಾಲ ನೀಡುವ ವಿಧಾನ	ಏಪ್ರಿಲ್ ನಿಂದ ಮೇ ಅವಧಿಯಲ್ಲಿ ಮುಖ್ಯ ಕಚೇರಿಯಿಂದ ಕ್ರಿಯಾ ಯೋಜನೆ, ಕೇಂದ್ರ ಸರ್ವರ್ ಆಧಾರಿತ ಆನ್‌ಲೈನ್ ಅಪ್ಲಿಕೇಶನ್ ಅನ್ನು ಸಾಮಾನ್ಯವಾಗಿ ಜುಲೈನಿಂದ ಆಗಸ್ಟ್, ಸೆಪ್ಟೆಂಬರ್ ಅವಧಿಯಲ್ಲಿ ಸೂಚಿಸಲಾಗುತ್ತದೆ.				ಪ್ರಸ್ತುತ ಸಾಲ ನೀಡುವ ವಿಧಾನ
ಜ್ಞಾನ ಮತ್ತು ಪ್ರಸ್ತುತ ಬಳಕೆಯಲ್ಲಿರುವ ಪ್ರಚಾರ ತಂತ್ರ	ಯೋಜನೆಯ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಸ್ಥಳೀಯ ಮತ್ತು ಪ್ರಾದೇಶಿಕ ಪತ್ರಿಕೆಯಲ್ಲಿ ವ್ಯಾಪಕ ಪ್ರಚಾರವನ್ನು ನೀಡುವುದು				ಜ್ಞಾನ ಮತ್ತು ಪ್ರಸ್ತುತ ಬಳಕೆಯಲ್ಲಿರುವ ಪ್ರಚಾರ ತಂತ್ರ
ಸಾಲ ಮರುಪಡೆಯುವಿಕೆ ಕಾರ್ಯವಿಧಾನ / ದಕ್ಷತೆಯನ್ನು ಸುಧಾರಿಸುವ ಕ್ರಮಗಳು	–	–	–	ಸಂಪೂರ್ಣ ತೃಪ್ತಿ ಇಲ್ಲ	–

ಇದಲ್ಲದೆ, ಕೇಂದ್ರಕೃತ ಗುಂಪು ಚರ್ಚೆಗಳ ಬಗ್ಗೆ ವಿವರಗಳನ್ನು ಕೆಳಗಿನ ಕೋಷ್ಟಕ –೪.೬೮ ರಿಂದ ನೋಡಬಹುದು.

ನಡೆಸಿದ ಒಟ್ಟು ಎಫ್‌ಜಿಡಿಗಳ ಸಂಖ್ಯೆ ೧೬ (ಟಿಒಆರ್ ಪ್ರಕಾರ):

ವಿದ್ಯಾರ್ಥಿ ಫಲಾನುಭವಿಗಳಿಗೆ ನಡೆಸಲಾದ ಎಫ್‌ಜಿಡಿಗಳು = ೧೨ (೧೨ ಜಿಲ್ಲೆಗಳಲ್ಲಿ ತಲಾ ಒಂದು ಎಫ್‌ಜಿಡಿ)

ಕಾಲೇಜು ಮಟ್ಟದಲ್ಲಿ ನಡೆಸಲಾದ ಎಫ್‌ಜಿಡಿಗಳು = ೪ (೪ ವಿಭಾಗಗಳಲ್ಲಿ ತಲಾ ಒಂದು ಕಾಲೇಜು) – ೨

ಕೋಷ್ಟಕ –ಎಫ್‌ಜಿಡಿ ವಿಶ್ಲೇಷಣೆ

ಪ್ರಮುಖ ಪ್ರಶ್ನೆಗಳು / ಸಮಸ್ಯೆಗಳು	ಕಾಲೇಜು ಮಟ್ಟದಲ್ಲಿ ಎಫ್‌ಜಿಡಿಗಳು	ವಿದ್ಯಾರ್ಥಿ ಫಲಾನುಭವಿಗಳಿಗೆ ಎಫ್‌ಜಿಡಿ
ಫಲಾನುಭವಿ ಆಯ್ಕೆ ವಿಧಾನ–ಸಮಸ್ಯೆಗಳು ಮತ್ತು ತೊಂದರೆಗಳು	–	ಸಾಲವನ್ನು ಸಮಯಕ್ಕೆ ನೀಡಲಾಗಿಲ್ಲ.
ಅರಿವು ಸಾಲವನ್ನು ಮುಂದುವರಿಸುವ ಸಾಧ್ಯತೆ	–	ಇದನ್ನು ಮುಂದುವರೆಸಬೇಕು ಮತ್ತು ಎಲ್ಲಾ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ನೀಡಬೇಕು.
ಸಿಇಟಿಯೇತರರಿಗೆ ಸಾಲವನ್ನು ಹೆಚ್ಚಿಸುವುದು ಮತ್ತು ವಿಸ್ತರಿಸುವುದು	ಸಮಯಕ್ಕೆ ಸರಿಯಾಗಿ ಸಾಲ ಮಂಜೂರಾತಿ ಇಲ್ಲ , ಸಾಮಾನ್ಯವಾಗಿ ಕಾಲೇಜುಗಳು ಜುಲೈ ಮತ್ತು ಆಗಸ್ಟ್ ತಿಂಗಳ ನಡುವೆ ಪ್ರಾರಂಭವಾಗುತ್ತವೆ, ಸೆಪ್ಟೆಂಬರ್ ವೇಳೆಗೆ ಸಾಲವನ್ನು ಮಂಜೂರು ಮಾಡಿದರೆ ಅದು ಉತ್ತಮವಾಗಿರುತ್ತದೆ.	ಸಿಇಟಿಯೇತರರಿಗೆ ಸಾಲವನ್ನು ಹೆಚ್ಚಿಸುವುದು ಮತ್ತು ವಿಸ್ತರಿಸುವುದು
ಸಾಲದ ಮೊತ್ತದ ಸಮರ್ಪಕತೆ	–	ಶುಲ್ಕವನ್ನು ಪಾವತಿಸಲು ಸಾಲದ ಮೊತ್ತವು ಸಾಕಾಗಲಿಲ್ಲ.
ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸಾಲದ ಲಾಭ ಮತ್ತು ಉಪಯುಕ್ತತೆ	ಬಹಳ ಅಗತ್ಯ ಮತ್ತು ಪ್ರಯೋಜನಕಾರಿ ಯೋಜನೆ. ಹೌದು, ಹಿಂದುಳಿದ ವರ್ಗದ ವಿದ್ಯಾರ್ಥಿಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯುವ ಸಲುವಾಗಿ ಇದು ಅತ್ಯಂತ ಉಪಯುಕ್ತ ಯೋಜನೆಗಳಲ್ಲಿ ಒಂದಾಗಿದೆ ಮತ್ತು ಇದು ಆರ್ಥಿಕ ವಿಷಯಗಳಲ್ಲಿ ಆರಾಮದಾಯಕವಾಗಿದೆ. ಹೌದು, ಇದು ಉಪಯುಕ್ತವಾಗಿದೆ, ಶುಲ್ಕವನ್ನು ಸರಿಹೊಂದಿಸಲು ಸಾಧ್ಯವಾಗದವರು ಸಾಲ ಪಡೆಯಬಹುದು.	ಇದು ತುಂಬಾ ಉಪಯುಕ್ತವಾಗಿದೆ. ಇದು ನನ್ನ ಆತ್ಮವಿಶ್ವಾಸ ಮಟ್ಟ ಮತ್ತು ನೈತಿಕ ಶಕ್ತಿಯನ್ನು ಹೆಚ್ಚಿಸಿದೆ. ಇದು ಕುಟುಂಬದ ಆರ್ಥಿಕ ಹೊರೆ ಕಡಿಮೆ ಮಾಡಿದೆ. ಯಾವುದೇ ಅಡೆತಡೆಗಳಿಲ್ಲದೆ ಶಿಕ್ಷಣವನ್ನು ಪೂರ್ಣಗೊಳಿಸಲು ಇದು ಸಹಾಯ ಮಾಡಿದೆ. ಕ್ಯಾಂಪಸ್ ಆಯ್ಕೆ ಮತ್ತು ನೇಮಕಾತಿ ಪಡೆಯಲು ಇದು ಸಹಾಯ ಮಾಡಿದೆ. ಇದು ನನ್ನ ಆರ್ಥಿಕ ಸ್ಥಿತಿ ಮತ್ತು ಸಾಮಾಜಿಕ ಸ್ಥಿತಿಯನ್ನು ಹೆಚ್ಚಿಸಿದೆ
ಪ್ರಸ್ತುತ ಸಾಲ ಮಂಜೂರಾತಿ ವಿಧಾನ	ಪ್ರಸ್ತುತ ಸಾಲ ಮಂಜೂರಾತಿ ವಿಧಾನ ಅರ್ಹತೆ ಮತ್ತು ಆರ್ಥಿಕ ಸ್ಥಿತಿಯ ಪ್ರಕಾರ ಮತ್ತು ದಾಖಲೆಗಳ ಆಧಾರದ ಮೇಲೆ ಸಿಇಟಿ ಮತ್ತು ಯೋಜನೆಯ ಮಾನದಂಡಗಳ ಆಧಾರದ ಮೇಲೆ	–

ಜ್ಞಾನ ಮತ್ತು ಪ್ರಚಾರ ಕಾರ್ಯವಿಧಾನಗಳು	–	ಕಾಲೇಜು ಸೂಚನಾ ಫಲಕ, ವೆಬ್‌ಸೈಟ್, ಪತ್ರಿಕೆ, ರೇಡಿಯೋ, ಟಿವಿ, ಸ್ನೇಹಿತರು, ಕುಟುಂಬ ಸದಸ್ಯರು.
ಸಾಲ ಮರುಪಡೆಯುವಿಕೆ ಕಾರ್ಯವಿಧಾನ / ದಕ್ಷತೆಯನ್ನು ಹೆಚ್ಚಿಸುವುದು	–	–

ಪ್ರಶ್ನಾವಳಿ / ವೇಳಾಪಟ್ಟಿ

ಭಾಗ–ಎ (ಫಲಾನುಭವಿ)

ವಿವರಗಳು	ಪ್ರತಿಕ್ರಿಯೆ								
೧.ಫಲಾನುಭವಿಯ ಹೆಸರು									
೨. ಮೊಬೈಲ್ / ಇ–ಮೇಲ್	ಮೊಬೈಲ್					ಇ–ಮೇಲ್			
೩.ಲಿಂಗ	೧. ಪುರುಷ				೨. ಸ್ತ್ರೀ			೩. ತೃತೀಯ ಲಿಂಗಿ /	
೪.ವಯಸ್ಸು (ಪೂರ್ಣಗೊಂಡ ವರ್ಷಗಳು	೨೧	೨೨	೨೩	೨೪	೨೫	೨೬	೨೭	೨೮	೨೮+
೫. ವೈವಾಹಿಕ ಸ್ಥಿತಿ	೧. ಅವಿವಾಹಿತ	೨. ವಿವಾಹಿತ (ಪ್ರಶ್ನೆ ೬೫ ಮತ್ತು ಕೇಳಿ ೬೬)			೩. ಇತರೆ (ನಮೂದಿಸಿ)				
೬. ತಂದೆಯ ಹೆಸರು									
೭. ವಾಸಸ್ಥಳ:	೧. ನಗರ		೨. ಗ್ರಾಮೀಣ			೩. ಅರೆ–ನಗರ			
೮. ಧರ್ಮ	೧. ಹಿಂದು	೨. ಮುಸ್ಲಿಂ	೩. ಕ್ರಿಶ್ಚಿಯನ್	೪. ಜೈನರು	೫. ಬೌದ್ಧರು	೬. ಸಿಕ್ಖರು	೭. ಇತರೆ		
೯. ಜಾತಿ									
೧೦. ಹಿಂದುಳಿದ (ಬಿ.ಸಿ) ವರ್ಗ	I	IIಎ		IIIಎ			IIIಬಿ		
೧೧. ಓದಿದ/ಓದುತ್ತಿರುವ ಕೋರ್ಸ್@ (ಸಾಮಾನ್ಯ ಡಿಗ್ರಿ)	೧. ಬಿಎ	೨. ಬಿಎಸ್ಸಿ	೩. ಬಿಕಾಂ	೪. ಬಿ.ಸಿ.ಎ	೫. ಬಿ.ಬಿ.ಎಂ		೬. ಇತರೆ		
೧೨. ಓದಿದ/ಓದುತ್ತಿರುವ ಕೋರ್ಸ್@ (ವೃತ್ತಿಪರ)	೧. ಬಿ.ಇ /ಬಿ.ಟೆಕ್	೨. ಎಂ.ಬಿ.ಬಿ.ಎಸ್	೩. ಬಿ.ಎಸ್ಸಿ–ಅಗ್ರಿ	೪.ಬಿವಿಎಸ್ ಸಿ	೫. ಎಂ.ಬಿ.ಎ		೬. ಇತರೆ		
೧೩. ದಾಖಲಾದ ವರ್ಷ(ನಿಜವಾದದ್ದು)	೨೦೧೧–೧೨	೨೦೧೨–೧೩	೨೦೧೩–೧೪	೨೦೧೪–೧೫	೨೦೧೫–೧೬	೨೦೧೬–೧೭	೨೦೧೭–೧೮		
೧೪. ಪೂರ್ಣಗೊಂಡ ವರ್ಷ	೨೦೧೩–೧೪	೨೦೧೪–೧೫	೨೦೧೫–೧೬	೨೦೧೬–೧೭	೨೦೧೭–೧೮		೨೦೧೮–೧೯		
೧೫. ಸಿ.ಇ.ಟಿ /ನಾನ್ ಸಿ.ಇ.ಟಿ	೧. ಸಿ.ಇ.ಟಿ			೨. ನಾನ್ ಸಿ.ಇ.ಟಿ					
೧೬. ಓದಿದ /ಓದುತ್ತಿರುವ ಕಾಲೇಜು	೧. ಸರ್ಕಾರಿ	೨. ಖಾಸಗಿ ಅನುದಾನಿತ	೩. ಖಾಸಗಿ ಅನುದಾನರಹಿತ	೪. ಡೀಮ್ಡ್	೫. ಸ್ವಾಯತ್ತ		೬. ಇತರೆ		
೧೭. ಓದಲು ವ್ಯವಸ್ಥೆ	೧. ದಿನಾ ಓಡಾಟ	೨. ಹಾಸ್ಟೆಲ್ ವಾಸಿ	೩. ಬಾಡಿಗೆ ಪಿಜಿ	೪. ಸಂಬಂಧಿಕರ ಮನೆ	೫. ಬಾಡಿಗೆ ಮನೆ (ಹಂಚಿಕೆ)		೬. ಇತರೆ		

೧೮. ಒಟ್ಟು ಅರಿವು ಸಾಲ ಪಡೆದದ್ದು:

೨೦೧೧–೧೨ ರೂಗಳಲ್ಲಿ .

೨೦೧೨–೧೩ ರೂಗಳಲ್ಲಿ.

೨೦೧೩–೧೪ ರೂಗಳಲ್ಲಿ.

೨೦೧೪–೧೫ ರೂಗಳಲ್ಲಿ.

೨೦೧೫–೧೬ ರೂಗಳಲ್ಲಿ.

೨೦೧೬–೧೭ ರೂಗಳಲ್ಲಿ.

೨೦೧೭–೧೮ ರೂಗಳಲ್ಲಿ.

೧೯. ಸಾಲ ವಿತರಣೆಯ ವಿಧಾನ :

೨೦೧೧–೧೨ ೧. ಚೆಕ್ ೨. ಆನ್‌ಲೈನ್

೨೦೧೨–೧೩ ೧. ಚೆಕ್ ೨. ಆನ್‌ಲೈನ್

೨೦೧೩–೧೪ ೧. ಚೆಕ್ ೨. ಆನ್‌ಲೈನ್

೨೦೧೪–೧೫ ೧. ಚೆಕ್ ೨. ಆನ್‌ಲೈನ್

೨೦೧೫–೧೬ ೧. ಚೆಕ್ ೨. ಆನ್‌ಲೈನ್

೨೦೧೬–೧೭ ೧. ಚೆಕ್ ೨. ಆನ್‌ಲೈನ್

೨೦೧೭–೧೮ ೧. ಚೆಕ್ ೨. ಆನ್‌ಲೈನ್

೨೦. ಕಂತುಗಳ ಸಂಖ್ಯೆ:

೨೦೧೧–೧೨ ೧. ಒಂದು ೨. ಎರಡು ೩. ಮೂರು

೨೦೧೨–೧೩ ೧. ಒಂದು ೨. ಎರಡು ೩. ಮೂರು

೨೦೧೩–೧೪ ೧. ಒಂದು ೨. ಎರಡು ೩. ಮೂರು

೨೦೧೪–೧೫ ೧. ಒಂದು ೨. ಎರಡು ೩. ಮೂರು

೨೦೧೫–೧೬ ೧. ಒಂದು ೨. ಎರಡು ೩. ಮೂರು

೨೦೧೬–೧೭ ೧. ಒಂದು ೨. ಎರಡು ೩. ಮೂರು

೨೦೧೭–೧೮ ೧. ಒಂದು ೨. ಎರಡು ೩. ಮೂರು

೨೧. ಸಾಲದ ಮೊತ್ತವನ್ನು ಮರುಪಾವತಿಸಲಾಗಿದೆ:

೨೦೧೧–೧೨ ರೂಗಳಲ್ಲಿ.

೨೦೧೨–೧೩ ರೂಗಳಲ್ಲಿ.

೨೦೧೩–೧೪ ರೂಗಳಲ್ಲಿ.

೨೦೧೪–೧೫ ರೂಗಳಲ್ಲಿ.

೨೦೧೫–೧೬ ರೂಗಳಲ್ಲಿ.

೨೦೧೬–೧೭ ರೂಗಳಲ್ಲಿ.

೨೦೧೭–೧೮ ರೂಗಳಲ್ಲಿ..

೨೨. ಸಂಪೂರ್ಣ ಅಧ್ಯಯನದ ಅವಧಿಗೆ ತೆಗೆದುಕೊಂಡ ಒಟ್ಟು ಅರಿವು ಸಾಲ (ರೂಗಳಲ್ಲಿ):

೨೩. ಬಾಕಿಯಿರುವ ಒಟ್ಟು ಅರಿವು ಸಾಲದ ಮೊತ್ತ (ರೂಗಳಲ್ಲಿ):

೨೪. ಮಂಜೂರು ಮಾಡಿದ ಅರಿವು ಸಾಲದ ಮೊತ್ತವನ್ನು ಕೋರ್ಸ್‌ಗೆ ಮಾತ್ರ ಬಳಸಿದ್ದೀರಾ?

೧. ಹೌದು ೨. ಇಲ್ಲ

೩. ಇಲ್ಲವಾದಲ್ಲಿ,

೧. ಉತ್ತೀರ್ಣರಾಗಲು ಕಷ್ಟವಾಗಿದ್ದರಿಂದ ನಾನು ಕೋರ್ಸ್ ಬದಲಾಯಿಸಿದೆ

೨. ಸಾಲವನ್ನು ಮಂಜೂರು ಮಾಡಿದ ಕೋರ್ಸ್ ಉದ್ಯೋಗ ಆಧಾರಿತವಲ್ಲ

೩. ಇದು ನನಗೆ ಆಸಕ್ತಿದಾಯಕವಾಗಿರಲಿಲ್ಲ

೪. ಇತರೆ (ನಮೂದಿಸಿ)

೨೫. ಪರೀಕ್ಷೆಗಳಲ್ಲಿ ಉತ್ತೀರ್ಣತೆ ಮತ್ತು ಪಡೆದ ಒಟ್ಟು ಶೇಕಡಾವಾರು ಅಂಕಗಳು (ವರ್ಷವಾರು)

೧. ವರ್ಷ	೨. ಕೋರ್ಸ್	೩. ಸೆಮಿಸ್ಟರ್ / ವಾರ್ಷಿಕ ಪರೀಕ್ಷೆ	೪. ಪಡೆದ ಶೇಕಡಾವಾರು / ಅಂಕಗಳು

೨೬. ಅರಿವು ಸಾಲದ ಹಣವನ್ನು ನೀವು ಹೇಗೆ ಬಳಸಿದ್ದೀರಿ?

ಎ) ಶೈಕ್ಷಣಿಕ ಉದ್ದೇಶಕ್ಕಾಗಿ
ಬಿ) ಇತರ ಕೋರ್ಸ್ ಸಂಬಂಧಿತ ಖರ್ಚು
ಸಿ) ಇತರ ವೈಯಕ್ತಿಕ ಸಂಬಂಧಿತ ವೆಚ್ಚಗಳು
ಡಿ) ಕುಟುಂಬದ ಅಗತ್ಯಗಳಿಗಾಗಿ
ಇ) ಇತರೆ (ನಮೂದಿಸಿ)

೨೭. ನಿಮ್ಮ ಅಧ್ಯಯನಕ್ಕಾಗಿ ನೀವು ಬೇರೆ ಯಾವುದೇ ಸಾಲವನ್ನು (ಅರಿವು ಹೊರತುಪಡಿಸಿ) ತೆಗೆದುಕೊಂಡಿದ್ದೀರಾ?

೧) ಹೌದು ೨) ಇಲ್ಲ

೩) ಹೌದಾದಲ್ಲಿ, ಎ) ಮೂಲ: ೧. ಬ್ಯಾಂಕ್ ೨. ಹಣ ಸಾಲ ನೀಡುವವರು ೩. ಸ್ನೇಹಿತರು ೪. ಇತರೆ (ನಮೂದಿಸಿ)

ಬಿ) ಸಾಲದ ಮೊತ್ತ (ರೂ): ೧. ಬ್ಯಾಂಕ್ ೨. ಹಣ ಸಾಲ ನೀಡುವವರು . ೩. ಸ್ನೇಹಿತರು .. ೪.ಇತರೆ (ನಮೂದಿಸಿ)

ಸಿ) ಬಡ್ಡಿದರ: ೧. ಬ್ಯಾಂಕ್ ೨. ಹಣ ಸಾಲ ನೀಡುವವರು ೩. ಸ್ನೇಹಿತರು ೪. ಇತರೆ (ನಮೂದಿಸಿ)

ಜ) ಬಾಕಿ ಇರಿಸಿಕೊಂಡಿರುವ ಸಾಲದ ಮೊತ್ತ (ರೂಗಳಲ್ಲಿ): ೧. ಬ್ಯಾಂಕ್ .. ೨. ಹಣ ಸಾಲ ನೀಡುವವರು ೩. ಸ್ನೇಹಿತರು .. ೪. ಇತರೆ (ನಮೂದಿಸಿ)

೨೮. ನಿಮ್ಮ ಶಿಕ್ಷಣಕ್ಕಾಗಿ ಸರ್ಕಾರ ಅಥವಾ ಇತರರಿಂದ ನೀವು ಯಾವುದೇ ಹಣಕಾಸಿನ ನೆರವು ಪಡೆದಿದ್ದೀರಾ?
೧. ಹೌದು ೨. ಇಲ್ಲ
೩. ಹೌದಾದಲ್ಲಿ
ಎ) ಮೂಲ: ೧). ರಾಜ್ಯ ಸರ್ಕಾರ ೨) ಕೇಂದ್ರ ಸರ್ಕಾರ ೩) ಎನ್ ಜಿ ಓ ೪) ಪಿಲಾಥ್ರೋಪಿಸ್ಟ್ /ದಾನಿಗಳು ೫) ಇತರೆ (ನಮೂದಿಸಿ)
ಬಿ) ಮೊತ್ತ (ರೂಗಳಲ್ಲಿ):
೧). ರಾಜ್ಯ ಸರ್ಕಾರ .. ೨) ಕೇಂದ್ರ ಸರ್ಕಾರ ೩) ಎನ್ ಜಿ ಓ . ೪) ಪಿಲಾಥ್ರೋಪಿಸ್ಟ್/ದಾನಿಗಳು ೫) ಇತರೆ (ನಮೂದಿಸಿ)

೨೯. ನಿಮ್ಮ ಶಿಕ್ಷಣಕ್ಕೆ (ರೂ) ಸಂಬಂಧಿಸಿದ ಕೆಳಗಿನವುಗಳಿಗಾಗಿ ನೀವು ವರ್ಷಕ್ಕೆ ಸರಾಸರಿ ಎಷ್ಟು ಹಣವನ್ನು (ರೂ) ಖರ್ಚು ಮಾಡಿದ್ದೀರಿ:
ವಿಂಗಡಿಸಿ
೧. ಶುಲ್ಕ (ರೂಗಳಲ್ಲಿ) .. ೨. ಮೂಲ:
೧. ವಸತಿ (ರೂಗಳಲ್ಲಿ) ೨. ಮೂಲ:
೧. ಆಹಾರ (ರೂಗಳಲ್ಲಿ) .೨. ಮೂಲ:
೧. ಸಾರಿಗೆ (ರೂಗಳಲ್ಲಿ) ೨. ಮೂಲ:
೧. ಖಾಸಗಿ ಟ್ಯೂಷನ್ (ರೂಗಳಲ್ಲಿ) ೨. ಮೂಲ:
೧. ಕಂಪ್ಯೂಟರ್ ತೆಗೆದುಕೊಳ್ಳಲು (ರೂಗಳಲ್ಲಿ) ೨. ಮೂಲ:
೧. ಪ್ರಾಜೆಕ್ಟ್ ಕೆಲಸಕ್ಕೆ (ರೂಗಳಲ್ಲಿ) ೨. ಮೂಲ:
೧. ಇತರೆ (ರೂಗಳಲ್ಲಿ) .೨. ಮೂಲ:

೩೦. ಅರಿವು ಯೋಜನೆಯ ಬಗ್ಗೆ ಫಲಾನುಭವಿಗಳ ಅರಿವು:

೩೧. ಅರಿವು ಯೋಜನೆಯ ಬಗ್ಗೆ ನೀವು ಹೇಗೆ ತಿಳಿದುಕೊಂಡಿದ್ದೀರಿ?
ಎ. ಕಾಲೇಜು ಅಧಿಸೂಚನೆ
ಬಿ. ಇಲಾಖೆ. ವೆಬ್‌ಸೈಟ್‌ನಲ್ಲಿ ಅಧಿಸೂಚನೆ
ಸಿ. ಪತ್ರಿಕೆ
ಡಿ. ರೇಡಿಯೋ ಪ್ರಕಟಣೆ
ಇ. ಟೆಲಿವಿಷನ್ ಜಾಹೀರಾತು
ಎಫ್. ಸ್ನೇಹಿತರು
ಜಿ. ಕುಟುಂಬ ಸದಸ್ಯರು / ಸಂಬಂಧಿಕರು
ಹೆಚ್. ಇತರರು (ಸೂಚಿಸಿ)
೩೨. ಅರಿವು ಸಾಲವನ್ನು ಮಂಜೂರು ಮಾಡಲು ಮತ್ತು ಬಿಡುಗಡೆ ಮಾಡುವ ಪ್ರಾಧಿಕಾರ / ಇಲಾಖೆಗಳು
೩೩. ಫಲಾನುಭವಿಗಳ ಆಯ್ಕೆಯಲ್ಲಿ ತೊಡಗಿರುವ ಇಲಾಖೆಗಳು.
೩೪. ಆನ್–ಲೈನ್ ಅಪ್ಲಿಕೇಶನ್ ಸ್ವರೂಪವನ್ನು ಸುಲಭವಾಗಿ ಪ್ರವೇಶಿಸಬಹುದೇ?೧. ಹೌದು ೨. ಇಲ್ಲ
೩೫. ಅರ್ಜಿ ಸ್ವರೂಪವನ್ನು ಭರ್ತಿ ಮಾಡಲು ಅನುಕೂಲಕರವಾಗಿದೆಯೇ?೧. ಹೌದು ೨. ಇಲ್ಲ

೩೬. ಆಯ್ಕೆ ಪಟ್ಟಿ ಪ್ರಕಟಣೆ ವಿಧಾನ
೧) ಸಂಪೂರ್ಣ ಅರಿವು ೨) ಸ್ವಲ್ಪ ಮಟ್ಟಿಗೆ ೩) ಅಷ್ಟೇನೂ ತಿಳಿದಿಲ್ಲ ೪) ತಟಸ್ಥ

೩೭. ಸಾಲ ಯೋಜನೆಗೆ ಅರ್ಜಿ ಸಲ್ಲಿಸುವ ವಿಧಾನ?
೧) ಸಂಪೂರ್ಣ ಅರಿವು ೨) ಸ್ವಲ್ಪ ಮಟ್ಟಿಗೆ ೩) ಅಷ್ಟೇನೂ ತಿಳಿದಿಲ್ಲ ೪) ತಟಸ್ಥ

೩೮. ಸಲ್ಲಿಸಬೇಕಾದ ದಾಖಲೆಗಳು

೧) ಸಂಪೂರ್ಣ ಅರಿವು ೨) ಸ್ವಲ್ಪ ಮಟ್ಟಿಗೆ ೩) ಅಷ್ಟೇನೂ ತಿಳಿದಿಲ್ಲ ೪) ತಟಸ್ಥ

೩೯. ಸಾಲವನ್ನು ಪಡೆಯಲು ಅರ್ಹತಾ ಮಾನದಂಡಗಳು

೧) ಸಂಪೂರ್ಣ ಅರಿವು ೨) ಸ್ವಲ್ಪ ಮಟ್ಟಿಗೆ ೩) ಅಷ್ಟೇನೂ ತಿಳಿದಿಲ್ಲ ೪) ತಟಸ್ಥ

೪೦. ಸಾಲದ ಮೊತ್ತ ಮತ್ತು ಬಿಡುಗಡೆ ಮಾಡುವ ವಿಧಾನ

೧) ಸಂಪೂರ್ಣ ಅರಿವು ೨) ಸ್ವಲ್ಪ ಮಟ್ಟಿಗೆ ೩) ಅಷ್ಟೇನೂ ತಿಳಿದಿಲ್ಲ ೪) ತಟಸ್ಥ

೪೧. ಸಾಲದ ಮೇಲಿನ ಬಡ್ಡಿದರ

೧) ಸಂಪೂರ್ಣ ಅರಿವು ೨) ಸ್ವಲ್ಪ ಮಟ್ಟಿಗೆ ೩) ಅಷ್ಟೇನೂ ತಿಳಿದಿಲ್ಲ ೪) ತಟಸ್ಥ

೪೨. ಸಾಲ ಮರುಪಾವತಿ ವೇಳಾಪಟ್ಟಿ ಮತ್ತು ಷರತ್ತುಗಳು

೧) ಸಂಪೂರ್ಣ ಅರಿವು ೨) ಸ್ವಲ್ಪ ಮಟ್ಟಿಗೆ ೩) ಅಷ್ಟೇನೂ ತಿಳಿದಿಲ್ಲ ೪) ತಟಸ್ಥ

೪೩. ಸಾಲವನ್ನು ಸಮಯಕ್ಕೆ ಬಿಡುಗಡೆ ಮಾಡಲಾಗಿದೆಯೇ?೧. ಹೌದು ೨. ಇಲ್ಲ

೪೪. ಶೈಕ್ಷಣಿಕ ಸಾಲವನ್ನು ಮಂಜೂರು ಮಾಡಿಸಿಕೊಳ್ಳಲು ನೀವು ಮಾಡಿದ ಸಣ್ಣ ಖರ್ಚಿನ ವಿವರಗಳು

೧. ಪ್ರಯಾಣದ ಖರ್ಚು	೨. ರೂಗಳಲ್ಲಿ
೨. ಅಗತ್ಯ ದಾಖಲೆಗಳನ್ನು ಸಂಗ್ರಹಿಸುವುದು	೨. ರೂಗಳಲ್ಲಿ.
೩. ಆಹಾರ	೨. ರೂಗಳಲ್ಲಿ.
೪. ಅಧಿಕಾರಿಗಳಿಗೆ ಯಾವುದಾದರೂ ಪಾವತಿ (ಲಂಚ)	೨. ರೂಗಳಲ್ಲಿ.
೫. ಇತರೆ(ನಮೂದಿಸಿ)	೨. ರೂಗಳಲ್ಲಿ.
೬. ಒಟ್ಟು	೨. ರೂಗಳಲ್ಲಿ.

೪೫. ಕಾರ್ಯವಿಧಾನದಲ್ಲಿ ಯಾವುದು ಹೆಚ್ಚು ಕಷ್ಟಕರವಾಗಿವೆ (ಅವುಗಳನ್ನು ಶ್ರೇಣೀಕರಿಸಿ):

೧. ಅರ್ಜಿಗಳನ್ನು ಪಡೆಯುವುದು

೨. ಅರ್ಜಿಗಳ ಭರ್ತಿ ಮಾಡುವುದು

೩. ಸಲ್ಲಿಸಬೇಕಾದ ದಾಖಲೆಗಳು

೪. ಅಫಿಡವಿಟ್ ನೀಡುವುದು

೫. ಜಾಮೀನು ನೀಡುವುದು

೬. ಇತರೆ (ನಮೂದಿಸಿ)

೪೬. ೨೦೧೩ ಕ್ಕಿಂತ ಮೊದಲು ಸಾಲ ಪಡೆದ ವಿದ್ಯಾರ್ಥಿಗಳಿಗೆ ಸಾಲ ಮನ್ನಾ ಮಾಡುವ ಬಗ್ಗೆ ನಿಮಗೆ ತಿಳಿದಿದೆಯೇ?

೧. ಹೌದು ೨. ಇಲ್ಲ

೪೭. ನೀವು ಈ ಪ್ರಯೋಜನವನ್ನು ಪಡೆದುಕೊಂಡಿದ್ದೀರಾ? ೧. ಹೌದು ೨. ಇಲ್ಲ

೪೮. ನಿಮ್ಮ ಸಹೋದರ / ಸಹೋದರರಲ್ಲಿ ಯಾರಾದರೂ ಒಕ್ಕೂಟಗಳಿಗೆ ಸಾಲ ಯೋಜನೆಗಳನ್ನು ಪಡೆದಿದ್ದಾರೆಯೇ?

೧. ಹೌದು ೨. ಇಲ್ಲ

೩. ಹೌದಾದಲ್ಲಿ,

೧. ಸಹೋದರ–೧

ಅ) ಪಡೆದ ಮೊತ್ತ (ರೂ) . ಬಿ) ಸಾಲದ ಮೊತ್ತ ಬಾಕಿ (ರೂ ..

೨. ಸಹೋದರ–೨

ಅ) ಪಡೆದ ಮೊತ್ತ (ರೂ) . ಬಿ) ಸಾಲದ ಮೊತ್ತ ಬಾಕಿ (ರೂ ..

೩. ಸಹೋದರಿ–೧

ಅ) ಪಡೆದ ಮೊತ್ತ (ರೂ) . ಬಿ) ಸಾಲದ ಮೊತ್ತ ಬಾಕಿ (ರೂ ..

೪. ಸಹೋದರಿ–೨

ಅ) ಪಡೆದ ಮೊತ್ತ (ರೂ) . ಬಿ) ಸಾಲದ ಮೊತ್ತ ಬಾಕಿ (ರೂ ..

(ಹಳೆಯ ವಿದ್ಯಾರ್ಥಿಗಳಿಗೆ ಮಾತ್ರ)

೪೯. ಪ್ರಸ್ತುತ ಉದ್ಯೋಗ *	೧	೨	೩	೪	೫	೬	೭	೮	೯	೧೦
೫೦. ಕೆಲಸಕ್ಕೆ ಸೇರಿದ ದಿನಾಂಕ	೨೦೧೩	೨೦೧೪	೨೦೧೫	೨೦ ೧೬	೨೦೧೭		೨೦೧೮		೨೦೧೯	
೫೧. ಪ್ರಸ್ತುತ ಕೆಲಸದ ಸ್ಥಳ	೧. ಕರ್ನಾಟಕದ ಒಳಗೆ ೧	೨. ಕರ್ನಾಟಕದ ಹೊರಗೆ	• ೩. ಬೆಂಗಳೂರಿನೊಳಗೆ.				• ೪. ಬೆಂಗಳೂರಿನ ಹೊರಗೆ.			
೫೨. ಒಟ್ಟು ಮಾಸಿಕ ಗಳಿಕೆ / ಸಂಬಳ / / ಆದಾಯ (ರೂ) **	೧	೨	೩		೪	೫	೬		೭	
೫೩. ಸರಾಸರಿ ಮಾಸಿಕ ಜೀವನದ ವೆಚ್ಚ (ಪ್ರಸ್ತುತ) ರೂ ***	೧	೨	೩		೪		೫		೬	

೫೪. ನಿಮ್ಮ ಶಿಕ್ಷಣ ಮುಗಿದ ಕೂಡಲೇ ನಿಮಗೆ ಕೆಲಸ ಸಿಕ್ಕಿದೆಯೇ?

೧. ಹೌದು ೨. ಇಲ್ಲ

(ಎ) ಇಲ್ಲದಿದ್ದರೆ, ಕೆಲಸ ಪಡೆಯಲು ಎಷ್ಟು ತಿಂಗಳುಗಳನ್ನು ತೆಗೆದುಕೊಳ್ಳಲಾಗಿದೆ?

೧) <೬ ತಿಂಗಳು ೨) ೬ ರಿಂದ ೧೨ ತಿಂಗಳು ೩) ೧೨ ರಿಂದ ೧೮ ತಿಂಗಳು ೪) ೧೮ ರಿಂದ ೨೪ ತಿಂಗಳು ೫)> ೨೪ ತಿಂಗಳು

(ಬಿ) ಕಾರಣಗಳು

೧). ಉದ್ಯೋಗಾವಕಾಶಗಳಿಲ್ಲ ೨) ಯಶಸ್ವಿಯಾಗಲು ಸಾಧ್ಯವಾಗಲಿಲ್ಲ ೩) ಪ್ರಯತ್ನಿಸಲಿಲ್ಲ ೪) ಪಾವತಿಸಲು ಹಣವಿಲ್ಲ (ಲಂಚ)

೫೫. ಕೆಲಸ ಪಡೆಯಲು ಯಾರಾದರೂ ನಿಮಗೆ ಸಹಾಯ ಮಾಡಿದ್ದೀರಾ? ೧. ಹೌದು ೨. ಇಲ್ಲ

ಹೌದಾದಲ್ಲಿ, ಯಾರು ?...

೧). ಸ್ನೇಹಿತರು ೨) ಸಂಬಂಧಿಗಳು ೩) ಅಧಿಕಾರಿಗಳು ೪) ರಾಜಕಾರಣಿಗಳು

೫೬. ಕೆಲಸ ಪಡೆಯಲು ನೀವು ಯಾವುದೇ ಹಣವನ್ನು (ಶುಲ್ಕ) ಪಾವತಿಸಬೇಕಾಗಿತ್ತೆ? ೧. ಹೌದು ೨. ಇಲ್ಲ೩.

೩. ಹೌದಾದಲ್ಲಿ, ಎಷ್ಟು? ೪. ಯಾರಿಗೆ?

೫೭. ಕೆಲಸ ಪಡೆಯಲು ನೀವು ಯಾವುದೇ ಹಣವನ್ನು (ಲಂಚ) ಪಾವತಿಸಬೇಕಾಗಿತ್ತೇ? ೧. ಹೌದು ೨. ಇಲ್ಲ ೩. ಹೌದಾದಲ್ಲಿ, ಎಷ್ಟು? ೪. ಯಾರಿಗೆ?

೫೮. ನಿಮ್ಮ ಕಾಲೇಜು ಶಿಕ್ಷಣಕ್ಕೆ ಅರಿವು ಸಾಲ ಯೋಜನೆ ನಿಮಗೆ ಹೇಗೆ ಮತ್ತು ಯಾವ ರೀತಿಯಲ್ಲಿ ಸಹಾಯ ಮಾಡಿದೆ?

೧) ನನ್ನ ಆತ್ಮವಿಶ್ವಾಸದ ಮಟ್ಟವನ್ನು ಹೆಚ್ಚಿಸಿದೆ ಮತ್ತು ನನ್ನ ಸ್ಥೈರ್ಯವನ್ನು ಹೆಚ್ಚಿಸಿದೆ

ಎ) ಬಲವಾಗಿ ಒಪ್ಪುತ್ತೇನೆ ಬಿ) ಒಪ್ಪುತ್ತೇನೆ ಸಿ) ತಟಸ್ಥ ಡಿ) ಒಪ್ಪುವುದಿಲ್ಲ ಇ) ಬಲವಾಗಿ ಒಪ್ಪುವುದಿಲ್ಲ

೨) ನನ್ನ ಕುಟುಂಬದ ಆರ್ಥಿಕ ಹೊರೆ ಕಡಿಮೆಯಾಗಿದೆ

ಎ) ಬಲವಾಗಿ ಒಪ್ಪುತ್ತೇನೆ ಬಿ) ಒಪ್ಪುತ್ತೇನೆ ಸಿ) ತಟಸ್ಥ ಡಿ) ಒಪ್ಪುವುದಿಲ್ಲ ಇ) ಬಲವಾಗಿ ಒಪ್ಪುವುದಿಲ್ಲ

೩) ಯಾವುದೇ ಅಡೆತಡೆಯಿಲ್ಲದೆ ನನ್ನ ಕಾಲೇಜು ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ

ಎ) ಬಲವಾಗಿ ಒಪ್ಪುತ್ತೇನೆ ಬಿ) ಒಪ್ಪುತ್ತೇನೆ ಸಿ) ತಟಸ್ಥ ಡಿ) ಒಪ್ಪುವುದಿಲ್ಲ ಇ) ಬಲವಾಗಿ ಒಪ್ಪುವುದಿಲ್ಲ

೪) ಕ್ಯಾಂಪಸ್ ನೇಮಕಾತಿ ಲಾಭ ಮತ್ತು ಉದ್ಯೋಗ ಪಡೆಯುವಲ್ಲಿ

